ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

[ಎಂ.ಫಿಲ್ ಪದವಿಯ ಭಾಗಶಃ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಕಿರು ಪ್ರಬಂಧ]



ಸಂಶೋಧಕರು
ರಾಘವೇಂದ್ರ

ಮಾರ್ಗದರ್ಶಕರು
ಡಾ. ಎಸ್.ಸಿ.ಪಾಟೀಲ
ಮುಖ್ಯಸ್ಥರು ಮತ್ತು ಡೀನ್
ಲಲಿತಕಲಾ ನಿಕಾಯ

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೧-೧೨

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಎಂ.ಫಿಲ್ ಪದವಿಗಾಗಿ ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಕಿರು ಸಂಶೋಧನಾ ಪ್ರಬಂಧ

ಸಂಶೋಧಕರು
ರಾಘವೇಂದ್ರ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಡೀನ್ ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೨

ಪ್ರಮಾಣ ಪತ್ರ

"ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ" ಎಂಬ ಶೀರ್ಷಿಕೆಯ ಕಿರು ಸಂಶೋಧನಾ ಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ.ಎಸ್.ಸಿ.ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

Rydra
ರಾಘವೇಂದ್ರ
ಎಂ.ಫಿಲ್.ಚಿತ್ರಕಲೆ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 13/07/12

ದೃಢೀಕರಣ ಪತ್ರ

ರಾಘವೇಂದ್ರ ಇವರು ಬರೆದು ಸಾದರಪಡಿಸಿದ **"ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"** ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಕಿರುಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಕಿರುಪ್ರಬಂಧ ಇಡಿಯಾಗಿ ಮತ್ತು ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಡಾ.ಎಸ್.ಸಿ.ಪಾಟೀಲ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 13/7/2012

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಾಗೈತಿಹಾಸಿಕ ಚಿತ್ರಶೈಲಿಯು ಆದಿಕಾಲದ ಮನುಷ್ಯನು ಪರಸರದ ಜೊತೆಯಲ್ಲಿಯೇ ಹೊಂದಾಣಿಕೆಗಳಿಂದ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಪ್ರಾಣಿ ಪಕ್ಷಿ, ಹೂಬಳ್ಳಿ, ಹಣ್ಣು ಕಾಯಿಗಳ, ಗಿಡ ಮರಗಳು, ನದಿ, ಸಂರೋವರ, ಗುಡ್ಡ ಗಾಡು ಪ್ರದೇಶಗಳಲ್ಲಿ ಜೀವನ ಶೈಲಿ, ಆಚಾರ ವಿಚಾರಗಳನ್ನುಕಲಿಯುತ್ತಾ ಬದಲಾಯಿಸುತ್ತಾ ಹೋದ ಮನಸ್ಸು ಪೊಳಕಿತಗೊಂಡು ಸಹಕಾರ, ಸಮ್ಮಿಲನ, ಚೆಲುವಿನ ಕುತೂಹಲದ ಕಡೆ ಮುಖ ಮಾಡಿರಬಹುದು. ಮನಸ್ಸಿನ ಸಂತೋಷದ ಹೊರ ರೂಪಕ ಸಂಕೇತಗಳಾಗಿ ರಚಿತವಾದ ಪ್ರಾಣಿಪಕ್ಷಿ, ಹೂಬಳ್ಳಿ, ಮಾಂತ್ರಿಕ ಕುಂಡಲಗಳ, ಗಿಡ ಮರಗಳ, ಮಾನವಾಕೃತಿಗಳ, ಕ್ರೀಡೆಗಳನ್ನು ಇಂದಿನ ಆಧುನಿಕ ಮಾನವನ ಸೃಜನಾತ್ಮಕ ಪ್ರಯೋಗಗಳಿಂದ ಸಂಶೋಧನೆಗಳನ್ನು ನಡೆಸಿ ಆದಿಮಾನವರ ಚಿತ್ರಗಳು ಎಂದು ಗುರುತಿಸಿರಬಹುದು.

ಆದಿಮಾನವರ ಚಿತ್ರಗಳು ಚಳಿ, ಮಳೆ, ಬಿಸಿಲು, ಗಾಳಿ ಪ್ರಭಾವದಿಂದ ಮುಕ್ತವಾದ ಸ್ಥಳದಲ್ಲಿ ಚಿತ್ರಗಳನ್ನು ಸಂಕೇತಿಸುತ್ತಾ ಬಂದಿದ್ದಾರೆ. ಕಲ್ಲಾಸರೆ, ಗುಹೆಯಂತಹ ಬಂಡೆಗಲ್ಲು ಮೇಲಿನ ಭಾಗದಲ್ಲಿ ಸಸ್ಯ ಮತ್ತು ಪ್ರಾಣಿ ಮೂಲಗಳಿಂದ ತಯಾರಿಸಿದ ಬಣ್ಣಗಳನ್ನು ಬೆರಳು ಅಥವಾ ಪ್ರಾಣಿಗಳ ರೋಮಗಳಿಂದ ಕುಂಚಾಕೃತಿಯ ಸಾಧನವನ್ನಾಗಿಸಿ ಆದಿಮಾನವನ ಚಿತ್ರಗಳನ್ನು ತನ್ನ ಮನಸ್ಸಿನ ಆನಂದವನ್ನು ಬಾಯಿಯ ಮುಖಾಂತರ ತೋರಿಸಲಿಕ್ಕೆ ಆಗದ ಕಾರಣವಾಗಿ ಮನಸ್ಸಿನ ಭಾವನೆಗಳಿಗೆ ಯಾವ ಆಕಾರ ಕೊಡಬೇಕು. ಅದರಲ್ಲಿನ ಅಗೋಚರ ಶಕ್ತಿಯನ್ನು ಯಾವ ರೀತಿಯಲ್ಲಿ ಮನಸ್ಸಿಗೆ ತಾಟುವಂತೆ ಮಾಡಬೇಕು. ಮೂಲಭೂತ ಅಂಶಗಳಿಂದ ಚಿತ್ರಗಳು ಜೀವಕಳೆಯಿಂದ ಮಹತ್ವ ಪಡೆದಿರುವ ಮುಖ್ಯ ಅಂಶವಾಗಿ ಕಂಡುಬರುತ್ತದೆ.

ಗುಹಾಚಿತ್ರಗಳ ರಚನೆಯು ಒಂದು ನಿಖರವಾದ ಸ್ಪಷ್ಟತೆಯನ್ನು ಕಾಣದೇ ಇದ್ದರೂ,ಮನುಷ್ಯನ ಬೌದ್ಧಿಕ ಮಟ್ಟವು ವಿಕಾಸಿಸುತ್ತಾ, ಪರಿಸರದ ಚೆಲುವಿನತ್ತ, ಮುಖಮಾಡಿ ದೃಶ್ಯದ ನೆಪದಲ್ಲಿ

ಚಿತ್ರಾಕೃತಿಗಳ ಮಾಧ್ಯಮದ ಮುಖಾಂತರ ಅಭಿವ್ಯಕ್ತಿಗೊಂಡಿದ್ದು ಎಂದು ತಿಳಿಯಬಹುದು. ಪ್ರಾಗ್ಯೈತಿಹಾಸಿಕ ಈ ಚಿತ್ರರಚನೆ ಮೊದಲ ಹಂತದಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡ ಸೌಂದರ್ಯ ಮತ್ತು ಸಾಂಕೇತಿಕವಾದ ಹಿನ್ನೆಲೆಯ ರೂಪಕವಾಗಿ ರಚಿತಗೊಂಡರೂ ನಂತರದಲ್ಲಿ ಹೊಸ ಹೊಸ ಉದ್ದೇಶಗಳಿಗಾಗಿಯೂ ರೂಪ ತಾಳಿರಬಹುದಾಗಿದೆ.

ಅತ್ಯಂತ ಪುರಾತನ ಗುಹಾಚಿತ್ರಗಳು ನೈರುತ್ಯ ಯುರೋಪಿನಲ್ಲಿ ಮತ್ತು ಹಿಮಯುಗ ಕಾಲದ ಗುಹಾ ವರ್ಣಚಿತ್ರಗಳು ದಕ್ಷಿಣ ಯುರೋಪಿನಲ್ಲಿ ಮತ್ತು ಹಿಮಯುಗ ಕಾಲದ ಗುಹಾ ವರ್ಣಚಿತ್ರಗಳು ದಕ್ಷಿಣ ಯುರೋಪಿನಲ್ಲಿ ಸುಮಾರು ಒಂದು ನೂರು ಸ್ಥಳಗಳಲ್ಲಿ ಕಂಡು ಬಂದಿವೆ. ಆಫ್ರಿಕಾ ಪ್ರಾಂತ್ಯದಲ್ಲಿ ಹೆಚ್ಚಿನ ಗುಹಾ ಚಿತ್ರಗಳಿದ್ದು, ಇಲ್ಲಿ ವರ್ಣಚಿತ್ರ ಮತ್ತು ವರ್ಣರಹಿತ ಚಿತ್ರಗಳು ರಚಿಸಲ್ಪಟ್ಟಿವೆ.[೧]

ನಮೀಬಿಯಾ, ಲೆಸೋತೋ, ರಭಾಂಬಿಯಾ, ಜಿಂಬಾಂಬೆ ಮತ್ತು ತಾಂಜಾನಿಯಾ ಆಫ್ರಿಕಾದ ಉತ್ತರ ಭಾಗದ ಸಹರಾ ಪ್ರದೇಶ ಇವುಗಳಲ್ಲದೇ ಆಸ್ಟ್ರೇಲಿಯಾ, ಫ್ರಾನ್ಸ್,ಸ್ಪೇನ್ ಹಾಗೂ ಲಿಬಿಯಾ ದೇಶಗಳು, ಗುಹಾ ಚಿತ್ರಗಳಿಗಾಗಿ ಪ್ರಖ್ಯಾತವಾಗಿವೆ.

ಭಾರತದಲ್ಲಿಯೂ ಗುಹಾಚಿತ್ರಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿಕಂಡು ಬಂದಿದ್ದು, ಪ್ರಾಗ್ಯೈತಿಹಾಸಿಕ ಗುಹಾ ಚಿತ್ರಗಳ ನೆಲೆಯನ್ನು ಹೊಂದಿದ ವಿಶ್ವದ ಪ್ರಮುಖ ರಾಷ್ಟ್ರವಾಗಿದೆ. ಮಧ್ಯಭಾರತದಲ್ಲಿ ಅತೀ ಹೆಚ್ಚಿನ ಗುಹಾ ಚಿತ್ರಗಳಿದ್ದರೆ, ದಕ್ಷಿಣ ಭಾರತ ಎರಡನೇ ಸ್ಥಾನದಲ್ಲಿದೆ. ಬಿಂಬೇಟ್ಕಾ, ವಿರ್ಜಾಪುರ, ರಾಗಡ್, ಸಾಗರ ಭೂಪಾಲ, ನರಸಿಂಗಘರಾ, ರೈಜಿನ್, ಗ್ವಾಲಿಯರ್, ರಾಮಪುರ, ಸಿಂಗಾವಲಿ, ಜವಾಡ, ಅಬುಬೆಟ್ಟ, ಶಹಪುರಘಾಟ, ಹೊಸಂಗಾಬಾದ್, ಪಚ್ಛಮರಿ, ರಾಯಘರ್, ಬಸ್ತಾರ್, ಕರ್ನೂಲ್, ಎಡಕಲ್ಲು ಮುಂತಾದ ಸ್ಥಳಗಳಲ್ಲಿ ಪ್ರಾಚೀನ ಗುಹಾಚಿತ್ರಗಳಿವೆ ಎಂದು ಡಾ.ಯಾದಪ್ಪ ಪರದೇಶಿ ಅವರು ಡಾ.ಬಿ.ಕೆ.ಹಿರೇಮಠರ ನಿಜದ ನೆಲೆಯಲ್ಲಿ ಲೇಖನವನ್ನು ನೀಡಿರುತ್ತಾರೆ.[೨]

ಕರ್ನಾಟಕದಲ್ಲಿ ಸಹ ಹೆಚ್ಚಿನ ಸಂಖ್ಯೆಯಲ್ಲಿ ಗುಹಾ ಚಿತ್ರಗಳನ್ನು ಕಾಣಬಹುದಾಗಿದೆ. ಅದರಲ್ಲಿಯೂ ಸಹ ಉತ್ತರ ಕರ್ನಾಟಕ ಭಾಗದ ಪ್ರದೇಶದಲ್ಲಿ ಇರುವುದು ಕಂಡು ಬರುತ್ತದೆ. ಬಾದಾಮಿ, ಐಹೊಳೆ, ರಾಮದುರ್ಗ, ಪ್ರದೇಶದಲ್ಲಿನ ಪ್ರಾಗ್ಯೈತಿಹಾಸಿಕ ಗುಹಾಚಿತ್ರಗಳು ಪ್ರಾಚೀನತೆಯಿಂದ ಕೂಡಿವೆ. ದಕ್ಷಿಣ ಭಾರತದಲ್ಲಿಯೇ ಅತ್ಯಂತ ಹಳೆಯದಾಗಿದ್ದು, ಇವು ಬಿಂಬೇಟ್ಕಾ ಚಿತ್ರಗಳನ್ನು ಹೋಲುತ್ತವೆ. ಹಳೆ ಶಿಲಾಯುಗದ ಮಾನವರು ರಚಿಸಲ್ಪಟ್ಟವುಗಳಾಗಿವೆ ಎಂಬುದಾಗಿ ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ.

ಬಾದಾಮಿ, ಕುಟುಕನಕೇರಿ, ಮಹಾಕೂಟ, ಐಹೊಳೆ, ರಾಮದುರ್ಗ, ನೀರಗುಂದ, ಅಂಜನಹಳ್ಳಿ, ತಿಮ್ಮಲಾಪುರ, ನಾರಾಯಣಪುರ, ಬಂಡಿ ಹರ್ಲಾಪುರ, ಮಾನ್ವಿ, ಬೈಲವಮರ್ಚಡ, ಸಿರವಾರ,

---

೦೧. ಪಾಟೀಲ ಎಸ್.ಸಿ ಮತ್ತು ಸತ್ಯಾನಂದ ಪಾತ್ರೋಟ (ಸಂ)., ನಿಜದ ನೆಲೆ, ಪುಟ-೪೪೭
೦೨. ಪಾಟೀಲ ಎಸ್.ಸಿ ಮತ್ತು ಸತ್ಯಾನಂದ ಪಾತ್ರೋಟ (ಸಂ)., ನಿಜದ ನೆಲೆ, ಪುಟ-೪೪೮

ಅತನೂರು, ಬಲಚಕ್ರ, ತೆಕ್ಕಲಕೋಟೆ ಸಂಗನಕಲ್, ಕುರುಗೋಡು, ಚಿತ್ರದುರ್ಗ, ತಾವರಗೇರೆ, ಸೂಳೆಕಲ್ ಮಠ ಇವುಗಳಲ್ಲದೆ, ಕೊಪ್ಪಳ, ಬಿಳಿಭಾವಿ, ಹಿರೇಬೆನಕಲ್, ಇಂದುರ್ಗಿ, ಮಲ್ಲಾಪುರ, ಆನೆಗೊಂದಿ, ಚಿಕ್ಕರಾಂಪುರ, ಸಂಗಾಪುರ ಈ ಪ್ರದೇಶಗಳು ಅಲ್ಲದೆ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಬೆಟ್ಟ ಶ್ರೇಣಿಗಳಿಂದ ಕೂಡಿದ ಇಂತಹ ಪರಿಸರದಲ್ಲಿ ಸಂಶೋಧನೆಯ ಮೂಲಕ ಹೊಸ ಹೊಸ ನೆಲೆಗಳಲ್ಲಿನ ಆದಿಮಾನವರ ಚಿತ್ರಗಳನ್ನು ಪರಿಶೋಧಿಸುವ ಅವಶ್ಯಕತೆ ಕಂಡು ಬಂದ ಹಿನ್ನೆಲೆಯಲ್ಲಿ ಈ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳು ಎಂಬುವ ವಿಷಯ ಆಯ್ಕೆಯನ್ನು ಮಾಡಿಕೊಳ್ಳಾಗಿದೆ.

ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ಕುರಿತು ಸಂಶೋಧನೆಯಾಗಲಿ ಅಥವಾ ಬೆಳಕಿಗೆ ತರುವ ಪ್ರಯತ್ನವಾಗಲಿ, ಲಿಯೋನಾರ್ಡಮನ್ ಅವರ ಸೋಧನೆಯ ಮುಂಚಿತವಾಗಿ ನಡೆಯಲೇ ಇಲ್ಲ. ಇದರಂತೆ ಹಿರೇಬೆನಕಲ್‌ನಲ್ಲಿಯೂ ಕೂಡ ಲಿಯೋನಾರ್ಡಮನ್ ಚಿತ್ರಗಳು ಶೋಧಿಸಿದ ನಂತರ ಪುನಃ ಗುರುತಿಸಿದ ಸಂದರ್ಭದಲ್ಲಿ ಡಾ.ಅ.ಸುಂದರ ಅವರು ಅದೇ ಪ್ರದೇಶದಲ್ಲಿ ಮತ್ತೆ ಎಂಟು ಸ್ಥಳಗಳಲ್ಲಿ ಬಂಡೆಗಲ್ಲುಗಳ ಮೇಲಿನ ಚಿತ್ರಗಳನ್ನು ಕಂಡು ಹಿಡಿದರು. ಅ.ಸುಂದರ ಅವರು ೧೯೬೮ರಲ್ಲಿ ಅನ್ವೇಷಣೆ ಕಾರ್ಯಕೈಗೊಂಡು ಉತ್ತರ ಕರ್ನಾಟಕದ ರಾಮದುರ್ಗ, ಬಾದಾಮಿ, ಹೊಸ ಮಹಾಕೂಟ, ಐಹೊಳೆ, ಕೊಪ್ಪಳ, ಬಿಳಿಭಾವಿ, ಮಲ್ಲಾಪುರ, ಆನೆಗೊಂದಿ, ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ, ಮಾನ್ವಿ, ಬೈಲಮರ್ಚಡ್, ತಾವರೆಗೇರಿ, ಕುರುಗೋಡು, ಹಳಕುಂಡಿ, ಹಂಪಿ, ಬ್ರಹ್ಮಗಿರಿ, ಜಟ್ಟಿಂಗ್ ರಾಮೇಶ್ವರ, ಚಿತ್ರದುರ್ಗ, ಚಂದ್ರವಳ್ಳಿ, ಬೋಳೆ, ಹೊಳೆ ಆಲೂರು ಇಂತಹ ಪ್ರಮುಖವಾದ ಸ್ಥಳಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಗಳನ್ನು ಕಂಡುಹಿಡಿದ್ದಾರೆ.

ಈಗಿನ ಸಂದರ್ಭದಲ್ಲಿ ಕುಷ್ಟಗಿ ತಾಲೂಕಿನ ತಾವರೆಗೆರೆಯ ಏಳು ಸ್ಥಳಗಳಲ್ಲಿ ವಿಲಾಸ್ ಜೋಗುಳ ಅವರು ಮತ್ತು ಕನಕಗಿರಿ ತಾಲೂಕಿನ ಸೋಳೇಕಲ್ ಮಠದಲ್ಲಿ ಬೆಂಗಳೂರಿನ ಮುತ್ತುರಾಜ್ ಅವರು ಹಾಗೂ ಕೊಪ್ಪಳದ ಚಿತ್ರಗಳ ಪ್ರದೇಶವನ್ನು ಟಿ. ಶಂಭುಲಿಂಗಪ್ಪನವರು ಗುರುತಿಸಿದ್ದಾರೆ. ಅದೇ ರೀತಿ ಹಂಪಿ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸಿ.ಪಾಟೀಲ ಅವರು ಬಾದಾಮಿ ಪ್ರದೇಶದಲ್ಲಿ ಹೊಸದಾಗಿ ಕೆಲವು ಗುಹಾ ಚಿತ್ರಗಳನ್ನು ಗುರುತಿಸಿದ್ದಾರೆ.[೩] ಈ ರೀತಿಯಾಗಿ ಕಾಲ ಕಳೆದಂತೆ ಚಿತ್ರಗಳ ನೆಲೆಗಳು ಅನೇಕ ಶೋಧಗಳಿಂದ ಪತ್ತೆಯಾಗುತ್ತಲಿವೆ. ಆದ್ದರಿಂದ ಸಂಶೋಧನೆಗೆ ಕೊನೆಯೆಂಬುದು ಕೊನೆಯಾಗುವುದಿಲ್ಲ ಎಂಬ ಪದವು ಸರಿ ಹೊಂದಬಹುದು.

ಅಧ್ಯಯನದ ಉದ್ದೇಶ

ಪ್ರಾಗೈತಿಹಾಸಿಕ ಚಿತ್ರಗಳು ಕುರಿತಂತೆ ಶೋಧನೆಗಳು ನಡೆಯುತ್ತಾ ಬಂದಿದೆ. ಅಲ್ಲದೆ ನಡೆಯುತ್ತಾ ಇದೆ. ಆದರೆ ಚಿತ್ರಗಳ ಶೋಧನೆಯ ಕುರಿತು ಪ್ರಸ್ತುತ ಅಧ್ಯಯನದಲ್ಲಿ ವಿವರಿಸುವ ಉದ್ದೇಶವಾಗಿದೆ.

---

೦೩. ಪಾಟೀಲ ಎಸ್.ಸಿ ಮತ್ತು ಸತ್ಯಾನಂದ ಪಾತ್ರೋಟ (ಸಂ)., ನಿಜದ ನೆಲೆ, ಪುಟ-೪೪೭

ಅಧ್ಯಯನಗಳಲ್ಲಿ ಸಂಶೋಧನಾತ್ಮಕವಾಗಿ ಮೂಡಿ ಬಾರದೆ ಇರುವ ಈ ವಿಷಯ ಕೊಪ್ಪಳ, ಬಳ್ಳಾರಿ ಸುತ್ತಮುತ್ತಲ ಪ್ರದೇಶಗಳಲ್ಲಿನ ಪ್ರಾಗೈತಿಹಾಸಿಕ ಚಿತ್ರಗಳು ಕುರಿತಂತೆ ಶರಣಬಸಪ್ಪ ಕೊಲ್ಕರ್ ಅವರು ಹಂಪಿ ಸಂಪುಟ ಸೇರಿದಂತೆ ಇನ್ನಿತರೆ ಪುಸ್ತಕಗಳಲ್ಲಿ ವಿಶ್ಲೇಷಿಸಿದ್ದಾರೆ. ಆದರೂ ಎಂ.ಫಿಲ್. ಕಿರುಪ್ರಬಂಧಗಳ ಮೂಲಕವಾಗಿ ವಿಶ್ವವಿದ್ಯಾಲಯಗಳಲ್ಲಿ ಸೇರುವಂತಾಗಬೇಕು. ಇದರ ಪ್ರಯುಕ್ತ ಪ್ರಾಗೈತಿಹಾಸಿಕ ಚಿತ್ರಗಳಿಗೆ ಒಂದು ದಾಖಲಾತಿಯಾಗಿ ಭವಿಷ್ಯದ ದಿನಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಕೈಗನ್ನಡಿಯಂತೆ ಉಪಯುಕ್ತವಾಗಬಹುದು. ಇದಲ್ಲದೇ ಸಂಬಂಧಿಸಿದ ಇಲಾಖೆಗಳು ಹೆಚ್ಚೆತ್ತುಕೊಂಡು ಆದಿಮಾನವರ ಚಿತ್ರಕಲೆಯ ನೆಲೆಗಳಿಗೆ ಸೂಕ್ತವಾದ ಸಂರಕ್ಷಣೆಯನ್ನು ಒದಗಿಸುವ ಕ್ರಮವನ್ನು ಕೈಗೊಳ್ಳಲಿಕ್ಕೆ ಇದು ಒಂದು ದಾರಿಯಾಗಬಹುದು.

ಈ ಪ್ರಾಗೈತಿಹಾಸಿಕ ಚಿತ್ರಕಲೆಯಲ್ಲಿ ಹಲವಾರು ಮುಖಗಳಿಂದ ವಿಧಾನ, ತಂತ್ರ, ಶೈಲಿ, ಪ್ರಮಾಣತೆಗಳಿಂದ ಕೂಡಿದ ವಿಚಾರಗಳನ್ನು ತರ್ಕಿಸಿ ಮುಂಬರುವ ದಿನಗಳ ಸಮಾಜದ ಜನರಿಗೆ, ಕಲಾಸಕ್ತರಿಗೆ, ಕಲಾವಿದರಿಗೆ, ಅಲ್ಲದೇ ನಾಡಿನ ಕಲೆಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿ ದೇಶ ವಿದೇಶಗಳ ಜನರ ಮನಸ್ಸೂರೆಗೊಳಿಸುವ ಉದ್ದೇಶ ಕಟ್ಟಿಕೊಳ್ಳಲಾಗಿದೆ.

ಆದಿ ಜನರ ಪ್ರಾಗೈತಿಹಾಸಿಕ ಕಲೆಯನ್ನು ದೃಶ್ಯಕಲೆಗಳ ಸಂಶೋಧನೆಯ ಅಧ್ಯಯನ ದೃಷ್ಟಿಯಲ್ಲಿ ಯಾವ ಮಹತ್ತರವಾದ ಉದ್ದೇಶ ಹೊಂದಿದೆ, ಹಂತ ಹಂತವಾಗಿ ಚಿತ್ರಗಳ ಮೈವಳಿ ಕುರಿತು ವಿವರಿಸಲಾಗುವುದು. ಸಂಶೋಧನೆ ಎಂಬುವುದು ಹೊಸ ಹೊಸ ವಿಷಯಗಳ, ವಿಚಾರಗಳನ್ನು ಹೊರಹಾಕುವ ಒಂದು ವಿದ್ಯಮಾನವಾಗಿದೆ. ಒಂದು ಚಿತ್ರದ ಕುರಿತು ಇರುವಂತ ಅಭಿಪ್ರಾಯಗಳು ಕಾಲ ಬದಲಾದಂತೆ ಆ ಅಭಿಪ್ರಾಯಗಳು ಬದಲಾಗುವುದು ಸಹಜವಾದ ಗುಣ, ಇದಕ್ಕೆ ಅನುಗುಣವಾಗಿ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಒಂದು ಅಧ್ಯಯನದ ಉದ್ದೇಶವಾಗಿ ಬಳಸಿಕೊಳ್ಳಲಾಗಿದೆ. ಈಗಿನ ಸಂದರ್ಭದಲ್ಲಿ ಯಾವ ಸ್ಥಿತಿಯಲ್ಲಿ ಈ ಜಿಲ್ಲೆಯ ಪ್ರಾಗೈತಿಹಾಸ ಚಿತ್ರಗಳಿವೆ, ಎಂಬುವುದರ ಜೊತೆಯಲ್ಲಿ ನವ ನೆಲೆಗಳ ಹುಡುಕಾಟದ ಒಂದು ಸಣ್ಣ ಪ್ರಯತ್ನವಾಗಿದೆ.

ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಲೆಯ ಕುರಿತು ಇದುವರಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ಬಳ್ಳಾರಿ ತಾಲೂಕು ಕಪಗಲ್‌ನಲ್ಲಿ ಕುಟ್ಟಿದ ಚಿತ್ರಗಳನ್ನು ೧೮೮೦ರ ಸಮಯಲ್ಲಿ ಹ್ಯೂಬರ್ಟ್ ನಾಕ್ಸ್ ಶೋಧಿಸಿದರು. ಲಿಯೋನಾರ್ಡ್‌ಮನ್ ಅವರು ೧೯೩೫ರಲ್ಲಿ ಹಿರೇಬೆನಕಲ್ (ಗಂಗಾವತಿ ||ತಾ||, ಕೊಪ್ಪಳ ||ಜಿ||) ಬೆಟ್ಟದಲ್ಲಿ ಮೂರು ಗವಿ ವರ್ಣಚಿತ್ರಗಳನ್ನು ಹಾಗೂ ಅದೇ ಸಮದಲ್ಲಿ ಭಿಲ್ಲಮರಾಯನ ಗುಡ್ಡದಲ್ಲಿ ಕುಟ್ಟಿದ ಮತ್ತು ಗೀರು ಚಿತ್ರಗಳನ್ನು ಕಂಡುಹಿಡಿದಿದ್ದಾರೆ.[1] ೧೯೪೦ರ ದಶಕದಲ್ಲಿ ಮಸ್ಕಿ, ಕಲ್ಲೂರು (ರಾಯಚೂರು ||ತಾ||) ಬಲಚಕ್ರ (ಯಾದಗಿರಿ ||ತಾ||, ಗುಲಬಾರ್ಗ ||ಜಿ||) ಮತ್ತು ಆತನೂರು ಸೇರಿದಂತೆ ಹಿಂದಿನ ಹೈದ್ರಾಬಾದ ಸಂಸ್ಥಾನದ ಪುರಾತತ್ವ

೦೪. ಮನ್ ಎಲ್., ೧೯೩೪-೩೫, ಏನಿವಲ್ ರಿಪೋರ್ಟ್ ಆಫ್ ದಿ ಆರ್ಕಿಯಾಲಜಿಕಲ್ ದಿಪಾರ್ಟ್‌ಮೆಂಟ್ ಆಫಂ ದಿ ಫಾರ್ಮರ್, ಹೈದರಾಬಾದ್ ಸ್ಟೇಟ್

ಸರ್ವೇಕ್ಷಣ ಮತ್ತು ಭೂ ವಿಜ್ಞಾನ ವಿಭಾಗಗಳು ಕ್ರಮವಾಗಿ ಕುಟ್ಟಿದ ಮತ್ತು ಗವಿವರ್ಣ ಚಿತ್ರಗಳನ್ನು ಶೋಧಿಸಿ ತಮ್ಮ ಶಾಖೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿವೆ.[೦೫] ಅಂದಿನ ಸಮಯದ ಮುಂಬೈ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆಯು ೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಟ್ಟಿತು ಕುಳ್ಳೊಳ್ಳಿ[೦೬] (ಜಮಖಂಡಿ ||ತಾ||, ಬಿಜಾಪುರ ||ಜಿ||) ಯಲ್ಲಿಯ ಗೀರಿದ ಕುಟ್ಟಿದ ಚಿತ್ರಗಳನನು ೧೯೫೧ರಲ್ಲಿ ಪ್ರಕಟಿಸಿತು. ಪಿಕ್ಕಿಹಾಳ್ (ಲಿಂಗಸೂಗೂರು ತಾಲೂಕು ರಾಯಚೂರು ಜಿಲ್ಲೆ)ದಲ್ಲಿ ಅಲ್ಚಿನ್ ದಂಪತಿಗಳು ಶೋಧಿಸಿದ ಪ್ರಾಚೀನ ನೆಲೆಯ ಉತ್ಖನನ ಕಾಲದಲ್ಲಿ ಇವೆರಡೂ ತರಹದ ಚಿತ್ರಗಳನ್ನು ಕಂಡುಹಿಡಿದು ಅಧ್ಯಯನ ಮಾಡಿದ್ದಾರೆ.[೦೭] ತೆಕ್ಕಲಕೋಟೆ[೦೮] (ಶಿರಗುಪ್ಪ ||ತಾ||) ಸಂಗನಕಲ್ಲು[೦೯] ಬೆಳಗಲ್ಲು ಮತ್ತು ಕುರುಗೋಡು (ಬಳ್ಳಾರಿ ||ತಾ||) ಅಪ್ಪಯ್ಯನಹಳ್ಳಿಗಳು ಬಳ್ಳಾರಿ ಜಿಲ್ಲೆಗೆ ಸೇರಿದಂತೆ ಚಿತ್ರಗಳನ್ನು ಎಂ.ಎಸ್.ನಾಗರಾಜ್‌ರಾವ್, ರು.ಮ.ಷಡಕ್ಷರಯ್ಯ ಮೊದಲಾದವರು ಶೋಧಿಸಿದ್ದಾರೆ.

ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಲೆಯು ಕುರಿತಂತೆ ಶೋಧನೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಡಾ.ಅ.ಸುಂದರ ಅವರು ಮುಖ್ಯವಾಗಿ ನಿಲ್ಲುತ್ತಾರೆ. ಇವರು ಆ ಬಗೆಗೆ ವ್ಯವಸ್ಥಿತ ಅಧ್ಯಯನ ನಡೆಸಿದವರಲ್ಲಿ ಪ್ರಮುಖರಾಗಿ ಕಾಣುತ್ತಾರೆ. ೧೯೬೮ರಲ್ಲಿ ಡಾ.ಅ.ಸುಂದರ ಅವರು ಲಿಯೋನಾರ್ಡ್ ಮನ್‌ರು ಹಿಂದೆ ಹಿರೇಬೆಣಕಲ್‌ನಲ್ಲಿ ಶೋಧಿಸಿದ ಚಿತ್ರಗಳ ನೆಲೆಯನ್ನು ಗುರುತಿಸುವ ಸಂದರ್ಭದಲ್ಲಿ ಇನ್ನೂ ಒಂಭತ್ತು ಕಡೆ ಚಿತ್ರಗಳನ್ನು ಶೋಧಿಸಿ[೧೦] ಆ ಬಗೆಗೆ ಲೇಖನ ಪ್ರಕಟಿಸಿದರು.[೧೧] ಇದಾದ ನಂತರದಲ್ಲಿ ೧೯೭೪ರಿಂದ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಅನ್ವೇಷಣೆ ಕಾರ್ಯವನ್ನು ಕೈಗೊಂಡು ರಾಮದುರ್ಗ, ಬಾದಾಮಿ, ಹೊಸಮಹಾಕೂಟ, ಐಹೊಳೆ, ಕೊಪ್ಪಳ ಜಿಲ್ಲೆಯ ಬಿಳೆಬಾವಿ, ನಾರಾಯಣಪೇಟೆ, ಬಂಡಿಹರ್ಲಾಪುರ (ಎಲ್ಲವೂ ಕೊಪ್ಪಳ ||ತಾ||) ಮಲ್ಲಪುರ, ಆನೆಗುಂದಿ, ತಿರುಮಲಾಪುರ (ಗಂಗಾವತಿ ||ತಾ||), ಮಾನ್ವಿ, ಬೈಲಮರ್ಚೇಡ್ (ಮಾನ್ವಿ ||ತಾ||) ಮುಂತಾದಡೆಗಳಲ್ಲಿ ವರ್ಣಚಿತ್ರಗಳನ್ನು ಹಾಗೂ ತಾವರೆಗೇರೆ (ಕೊಪ್ಪಳ ||ಜಿ||) ಕುರುಗೋಡು, ಹಳಕುಂದಿ (ಬಳ್ಳಾರಿ ||ಜಿ||), ಬ್ರಹ್ಮಗಿರಿ, ಜಟ್ಟಂಗ ರಾಮೇಶ್ವರ, ಚಿತ್ರದುರ್ಗ, ಚಂದ್ರವಳ್ಳಿ (ಚಿತ್ರದುರ್ಗ ||ಜಿ||) ಬೋಳೆ (ಅಂಕೋಲಾ ಹತ್ತಿರ ಉತ್ತರ ಕನ್ನಡ ಜಿಲ್ಲೆ)ಗಳಲ್ಲಿ[೧೨] ಹಾಗೂ

---

೦೫. ಏನಿವಲ್ ರಿಪೋರ್ಟ್ ಆಫ್ ದಿ ಜಿಯಾಲಜಿಕಲ್ ಸರ್ವೇ ಆಫ್ ದಿ ಫಾರ್ಮರ್, ಹೈದಾರಾಬಾದ್ ಸ್ಟೇಟ್ ಸಂ-೪, ೧೯೪೧, ಪುಟ-೮೫-೮೭ ಮತ್ತು ೧೮೮

೦೬. ಪಂಚಮುಖಿ ಆರ್‌ಎಸ್., ೧೯೩೯-೪೦, ಏನಿವಲ್ ರಿಪೋರ್ಟ್ ಆಫ್ ದಿ ಕನ್ನಡ ರಿಸರ್ಚ್ ಇನ್ಸಿಟಿಟ್ಯೂಟ್, ಪು-೨೧-೨೩

೦೭. ಅಲ್ಚಿನ್ ಎಫ್.ಆರ್., ೧೯೬೦, ಪಿಕ್ಕಿಹಾಳ್ ಎಕ್ಸ್‌ಕಾವೇಷನ್ಸ್ ಎಪಿಜಿಎಎಸ್, ನಂ-೧

೦೮. ನಾಗರಾಜ್‌ರಾವ್ ಎಂ.ಎಸ್., ಮತ್ತು ಮಲ್ಹೋತ್ರ ಕೆ.ಸಿ., ೧೯೬೫, ದಿ ಸ್ಟೋನ್ ಏಜ್ ಹಿಲ್ ಡೆವ್ಲಪರ್ಸ್ ಆಫ್ ತೆಕ್ಕಲಕೋಟ ಡಿಸಿಪಿಜಿ ಮತ್ತು ಆರ್.ಎಸ್., ಪುಟ-೯೭-೯೯

೦೯. ಅನ್ಸಾರಿ ಝಡ್ ಡಿ, ಮತ್ತು ನಾಗರಾಜ್‌ರಾವ್ ಎಂ.ಎಸ್., ೧೯೬೯, ಎಕ್ಸ್ ಕಾವೇಷನ್ಸ್ ಏಟ್ ಸಂಗನಕಲ್ಲು, ೧೯೬೪-೬೫, ಡಿ.ಸಿ.ಪಿ.ಜಿ ಮತ್ತು ಆರ್.ಎಸ್.,

೧೦. ಐ.ಎ.ಆರ್., ೧೯೬೭-೬೮, ಪುಟ ೬೭, ೧೯೬೮-೬೯, ಪುಟ-೬೮

೧೧. ಸುಂದರ ಅ., ೧೯೭೪, ಫರ್ದರ್ ನೋಟಿಸಸ್ ಆಫ್ ರಾಕ್ ಪೆಯಿಂಟಿಂಗ್ಸ್ ಇನ್ ಬೆಣಕಲ್ ರಾಯಚೂರ್ ಡಿಸ್ಟ್ರಿಕ್ಟ್, ಜೆಐಎಚ್, ಸಂ-೫೨

೧೨. ಸುಂದರ ಅ., ೧೯೭೪, ಐ.ಎ.ಆರ್., ೧೯೬೧-೬೨, ೬೫-೬೬, ೬೭-೬೮, ೬೮-೬೯, ೭೪-೭೫, ೭೭-೭೮, ೭೮-೭೯ ಮತ್ತು ೭೯-೮೦

ಇತ್ತೀಚೆಗೆ ಹೊಳಲೂರು[೧೩] ಮುತ್ತನಹಳ್ಳಿ (ಶಿವಮೊಗ್ಗ ||ತಾ||) ಹಿರೇಮಾದಾಪುರ (ಧಾರವಾಡ ||ಜಿ||)[೧೪] ನಲ್ಲಿ ಕುಟ್ಟಿದ ಹಾಗೂ ಗೀರಿದ ಚಿತ್ರಗಳನ್ನು ಶೋಧಿಸಿದ್ದಾರೆ. ಇವುಗಳ ಜೊತೆಗೆ ಶೋಧವಾದದ್ದನ್ನೆಲ್ಲಾ ಅಧ್ಯಯನ ಮಾಡಿ ಅನೇಕ ಲೇಖನಗಳನ್ನು[೧೫] ಮತ್ತು ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.[೧೬] ಕರ್ನಾಟಕ ಚರಿತ್ರೆ ಸಂ.೧ರಲ್ಲಿ ಪ್ರಾಗೈತಿಹಾಸಕಾಲದ ಸಂಸ್ಕೃತಿ ಹಾಗೂ ಕಲೆಯ ಬಗೆಗೆ ವಿವರ ಪೂರ್ಣವಾಗಿ ಲೇಖಿಸಿದ್ದಾರೆ.

ಕುರುಗೋಡಿನಲ್ಲಿ ೧೫ ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳನ್ನು ಬೆಳಕಿಗೆ ತಂದವರಲ್ಲಿ ಮೊದಲಿಗೆ ಡಾ.ಎಂ.ಎಸ್.ಕೃಷ್ಣಮೂರ್ತಿ, ಡಾ.ಅ.ಸುಂದರ, ಡಾ.ಡಬ್ಲ್ಯೂ. ವಿ.ಎಸ್.ನರಸಿಂಹನ್ ಮತ್ತು ಡಾ.ಶರಣಬಸಪ್ಪ ಕೋಲ್ಕಾರ್‌ರು ಗವಿಚಿತ್ರಗಳ ಕುರಿತು ಶೋಧಿಸಿ ಲೇಖನಗಳನ್ನು ಪ್ರಕಟಿಸಿದ್ದಾರೆ.[೧೭] ಚಿತ್ರದುರ್ಗದ ಎಚ್.ಶ್ರೀಶೈಲ ಆರಾಧ್ಯರು, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ಮತ್ತೆ ಸುಮಾರು ೨೫-೩೦ ವರ್ಣಚಿತ್ರಗಳನ್ನು ಕೆಲವು ಬಯಲುಬಂಡೆ ಚಿತ್ರಗಳನ್ನು ತಮ್ಮ ಸಂಶೋಧನೆಯ ಹಾದಿಯಲ್ಲಿ ಎಂಬ ಹೊತ್ತಿಗೆಯಲ್ಲಿ ಪ್ರಕಟಿಸಿದ್ದಾರೆ.[೧೮] ಪ್ರೊ.ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗ ಜಿಲ್ಲೆಯ ೨೦ಕ್ಕೂ ಹೆಚ್ಚು ಗುಡ್ಡಗಳ ಪರಿಸರದಲ್ಲಿ ವ್ಯಾಪಕ ಶೋಧನೆ ಮತ್ತು ಅಧ್ಯಯನ ಮಾಡಿದ್ದಾರೆ. ಕುಂದಾಪುರ ಹತ್ತಿರ ಗಾವಳಿ (ದ.ಕ.ಜಿಲ್ಲೆ)ಯಲ್ಲಿ ಬಯಲುಬಂಡೆ ಮತ್ತು ಗೀರು ಚಿತ್ರಗಳನ್ನು ವಸಂತ ಶೆಟ್ಟಿಯವರು[೧೯] ಸೊಂದಾದಲ್ಲಿ ಎಚ್.ಆರ್.ರಘುನಾಥ್ ಭಟ್ಟರು ಚಿತ್ರಗಳನ್ನು ಶೋಧಿಸಿದ್ದಾರೆ.[೨೦]

ಹಂಪಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ[೨೧] ಮತ್ತು ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದವರು[೨೨] ಕೆಲವು ಚಿತ್ರಿತ ಕಲ್ಲಾಸರೆಗಳನ್ನು ಶೋಧಿಸಿದ್ದಾರೆ. ಮಲ್ಲಾಪುರದ ಖಾನಸಾಬ ಗವಿಯ ಚಿತ್ರಗಳನ್ನು ರು.ಮ.ಷಡಕ್ಷರಯ್ಯ ಹಾಗೂ ಸ್ವಿಡ್ಜರ್‌ಲ್ಯಾಂಡಿನ ಈ.ಓ.ಟಿಲ್ಕರ್ ಮತ್ತು ಬ್ರಿಗೆಟ್ಟಿಯವರು[೨೩] ಬೆಂಗಳೂರು ಜಿಲ್ಲೆಯ ಗೋತಗಿರಿ

---

೧೩. ಸುಂದರ ಅ., ೧೯೭೪, ಪ್ರಿ ಹಿಸ್ಟಾರಿಕ್ ಎನ್‌ಗ್ರೇವಿಂಗ್ಸ್ ಇನ್ ಹೊಳಲೂರು,

೧೪. ಸುಂದರ ಅ., ೧೯೭೪, ಸಮ್ ರೇರ್ ರಾಕ್ ಎನ್‌ಗ್ರೇವಿಂಗ್ಸ್ ಇನ್ ಹಿರೇ ಮಾದಾಪುರ ಮತ್ತು ಮುತ್ತೇನಹಳ್ಳಿ

೧೫. ಸುಂದರ ಅ., ೧೯೭೪, ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು ಸವಿಸಂಚಯ, ಪುಟ-೧೮೯-೨೦೭

೧೬. ಸುಂದರ ಅ., ೧೯೯೪, ಕರ್ನಾಟಕದ ಪ್ರಾಗೈತಿಹಾಸ ಕಾದ ಕಲೆ,

೧೭/ಎ. ಕೃಷ್ಣಮೂರ್ತಿ ಎಂ.ಎಸ್., ೧೯೭೭, ಕುರುಗೋಡು ಆ್ಯನ್ ಆರ್ಕಿಯಾಲಜಿಕಲ್ ನೋಟ್ ಆರ್ಕಿಯಾಲಜಿಕಲ್ ಸ್ಟಡೀಸ್, ಸಂ-೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪುಟ-೧೦೬-೧೧೦

೧೮. ಶ್ರೀಶೈಲ ಆರಾಧ್ಯ, ೧೯೮೩, ಸಂಶೋಧನೆಯ ಹಾದಿಯಲ್ಲಿ

೧೯. ವಸಂತಶೆಟ್ಟಿ, ೧೯೮೩, ಪ್ರಿ ಹಿಸ್ಟಾರಿಕ್ ರಾಕ್ ಬ್ರೂಯಿಸಿಂಗ್ಸಂ ಪ್ರಾಮ್ ದಕ್ಷಿಣ ಕನ್ನಡ, ಕಿವ್‌ಜೆಎಂಎಸ್, ಸಂ-೭೪

೨೦. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೨೯

೨೧. ಐ.ಎ.ಆರ್., ೧೯೭೬-೭೭, ಪುಟ-೨೪-೨೫

೨೨. ಐ.ಎ.ಆರ್, ೧೯೮೪-೮೫, ಪುಟ-೩೯

೨೩. ಅದೇ ಮತ್ತು ಷಡಕ್ಷರಯ್ಯ ಆರ್.ಎಂ., ೧೯೯೦,ರಾಕ್ ಪೆಯಿಂಟಿಂಗ್ಸ್ ಇನ್ ಮಲ್ಲಾಪುರ, ಆರ್ಕಿಯಾಲಜಿ ಇನ್‌ಕರ್ನಾಟಕ.

ಬೆಟ್ಟ ಹಾಗೂ ದೊಡ್ಡ ಕನ್ನೆಳ್ಳಿಯಲ್ಲಿ ಚಿತ್ರಗಳನ್ನು ಗೋರ್ಡನ್‌ರವರು ದಾಖಲಿಸಿದ್ದಾರೆ.[೨೪] ಇದೇ ಜಿಲ್ಲೆಯ ಸಾಸಲು ಗ್ರಾಮದ ಚಿತ್ರಗಳನ್ನು ಮುತ್ತುರಾಜರವರು[೨೫] ತಾವರೆಗೆರೆಯ (ಕೊಪ್ಪಳ ||ಜಿ||) ವರ್ಣಚಿತ್ರಗಳನ್ನು ವಿಲಾಸ ಜೋಗುಳರವರು[೨೬] ಗಬ್ಬೂರಿನ (ರಾಯಚೂರು ||ಜಿ||) ರೇಖಾಚಿತ್ರಗಳನ್ನು ದೇವರಕೊಂಡಾ ರೆಡ್ಡಿಯವರು ಶೋಧಿಸಿದ್ದಾರೆ.[೨೭] ಮಂಡ್ಯ ಜಿಲ್ಲೆಯ ವೇದಿಕ್ ನಗರದ ಚಿತ್ರಗಳನ್ನು ಜೆ.ಟಿ.ಜಯರಾಮಯ್ಯ ಹಾಗೂ ಇತರರು[೨೮] ಕೊಪ್ಪಳದಲ್ಲಿ ಮತ್ತೆ ಟಿ.ಶಂಭುಲಿಂಗಪ್ಪ,[೨೯] ಬಿ.ಸಿ.ಪಾಟೀಲ್ ಅವರು[೩೦] ಕಮಲಾಪುರದ ವರ್ಣ ಮತ್ತು ಕೊರೆದ ಚಿತ್ರಗಳನ್ನು ಪ್ರೊ.ಲಕ್ಷ್ಮಣ್ ತೆಲಗಾವಿಯವರು ಶೋಧಿಸಿದ್ದಾರೆ.[೩೧] ಡಾ.ಶರಣಬಸಪ್ಪ ಕೋಲ್ಕಾರ್ ಅವರು ಕೊಪ್ಪಳ ಮತ್ತು ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಲೆಯ ಕುರಿತ ಮಹಾಪ್ರಬಂಧದಲ್ಲಿ ೭೩ ಹೊಸ ಚಿತ್ರಿತ ನೆಲೆಗಳನ್ನು ಶೋಧಿಸಿದ್ದಾರೆ, ಇದಲ್ಲದೆ ಕುರುಗೋಡನಲ್ಲಿ ಕೆಲವು ಪ್ರಾಗೈತಿಹಾಸಿಕ ಚಿತ್ರಗಳನ್ನು ಗುರುತಿಸಿದ್ದಾರೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಕಲೆಯನ್ನು ಕುರಿತವಿಷಯವನ್ನು ಹೊಂದಿದ್ದು, ಪ್ರಮುಖವಾಗಿ ಆ ಕಾಲದ ಪ್ರಾಗಿತಿಹಾಸ ಗವಿವರ್ಣ ಮತ್ತು ಬಯಲು ಗೀರು, ಕುಟ್ಟು ಬಂಡೆ ಚಿತ್ರಗಳ ವಿವೇಚನೆಯನ್ನು ಒಳಗೊಂಡಿದೆ. ಏಕೆಂದರೆ ಈ ಕೊಪ್ಪಳ ಸುತ್ತಮುತ್ತಲ ಪ್ರದೇಶವು ಪ್ರಾಚೀನತೆಯಲ್ಲಿ ಮತ್ತು ಗವಿವರ್ಣ ಚಿತ್ರಗಳ ದೃಷ್ಟಿಯಿಂದ ಅತಿ ಹೇರಳವಾದ ಪ್ರದೇಶವಾಗಿದ್ದು, ಶೋಧನೆಯ ದೃಷ್ಟಿಯಿಂದಲೂ ವಿಶೇಷ ಸ್ಥಾನವನ್ನು ಅಲಂಕರಿಸಿದೆ. ಇದೇ ಕಾರಣಕ್ಕೆ ಉತ್ತರ ಕರ್ನಾಟಕದ ವರ್ಣಚಿತ್ರಕಲೆಯ ಕೇಂದ್ರ ನೆಲೆ ಎನಿಸಿರುವುದು ಹಾಗೂ ಇತರ ಕಲಾ ಪ್ರಕಾರಗಳ ಚಿತ್ರಿತ ವಸ್ತುಗಳ ಮೂಲದಿಂದ ಪ್ರಾಮುಖ್ಯತೆಯನ್ನು ಹೊಂದುತ್ತದೆ. ಕಲಾನೆಲೆಗಳ ಶೋಧನೆಗಾಗಿ ಕ್ಷೇತ್ರಕಾರ್ಯ ನಡೆಸಲಾಯಿತು. ಹಳೆಯ ಮತ್ತು ಹೊಸ ಪ್ರಸ್ತುತ ಶೋಧಿತ ಚಿತ್ರಗಳನ್ನು ಮುಖ್ಯವಾಗಿ ವಿವರಣಾತ್ಮಕ ಮತ್ತು ತಂತ್ರಶೈಲಿಯಿಂದ ವಿವರಿಸಲಾಗಿದೆ.

ಯಾವುದೇ ಒಂದು ಪ್ರಬಂಧವು ತನ್ನ ವಿಷಯದಲ್ಲಿ ಸ್ವರೂಪವನ್ನು ಹೊಂದಿರುತ್ತದೆ. ಈ ಸ್ವರೂಪದ ಮಹತ್ವವು ಇಡೀ ಪ್ರಬಂಧದ ಸಾರಾಂಶಗಳನ್ನು ಅಧ್ಯಾಯಗಳಾಗಿ ವರ್ಗೀಕರಿಸಿ ವಿಷಯಗಳ ವಿವರಣೆಗೆ ಉತ್ತಮ ಗುಣಮಟ್ಟ ಕಾಪಾಡಲು ಇದು ಸಹಕರಿಸುತ್ತದೆನ್ನಬಹುದು.

---

೨೪. ಗೋರ್ಡನ್ ಡಿ.ಎಚ್., ೧೯೫೮, ದಿ ಪ್ರಿ ಹಿಸ್ಟಾರಿಕ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ಕಲ್ಚರ್, ಪುಟ-೧೧೬

೨೫. ವಿಶ್ವನಾಥ್ ಜೆ., ಮತ್ತು ಮಂಜುನಾಥ್ ಎಂ.ಜಿ., ೧೯೯೬, ಸಾಸಲುವಿನ ಬೃಹತ್ ಶಿಲಾಯುಗದ ಸ್ಮಾರಕಗಳು ಮತ್ತು ರೇಖಾಚಿತ್ರಗಳು ಇ.ದ., ಸಂ-೧೧, ಪುಟ-೪೬-೪೮

೨೬. ಮುತ್ತುರಾಜ್, ೧೯೯೫, ಸೂಳೆಕಲ್ ಮಠದ ಗುಹಾಚಿತ್ರಗಳು, ಇ.ದ.ಸಂ-೧೧, ಪುಟ-೭೧-೭೩

೨೭. ವಿಲಾಸ್ ಮ.ಜೋಗುಳ, ೧೯೯೬, ತಾವರೆಗೇರಾದಲ್ಲಿ ಕಲ್ಲಾಸರೆಯ ವರ್ಣಚಿತ್ರಗಳ ಶೋಧನೆ, ಇ.ದ., ಸಂ-೧೧, ಪುಟ-೪೪-೪೫

೨೮. ದೇವರಕೊಂಡಾ ರೆಡ್ಡಿ, ೨೦೦೧, ಗಬ್ಬೂರಿನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳ ಪತ್ತೆ ರಾಯಚೂರು ವಾಣಿ ದಿನಪತ್ರಿಕೆ, ೨೫.೦೩.೨೦೦೧

೨೯. ಜಯರಾಮಯ್ಯ ಜೆ.ಟಿ., ೨೦೦೦, ಬಯಲುಬಂಡೆ ಚಿತ್ರನೆಲೆ ವೇದಿಕ್‌ನಗರ, ಇ.ದ.ಸಂ-೧೫, ಪುಟ-೧೬-೨೦

೩೦. ಶಂಭುಲಿಂಗಪ್ಪ ಟಿ., ೧೯೯೩, ರಾಯಚೂರ ಜಿಲ್ಲೆಯ ಗುಹಾಚಿತ್ರಗಳು, ತಿರುಳ್ಗನ್ನಡ ಪು-೨೩-೨೯

೩೧. ಶರಣಬಸಪ್ಪ ಕೊಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೩೦

ಪ್ರಾಗೈತಿಹಾಸಿಕ ಚಿತ್ರಗಳ ಸಂಶೋಧನೆಯನ್ನು ಜಿಲ್ಲಾ ಕೇಂದ್ರದಿಂದ ತಾಲೂಕು ಪ್ರದೇಶದಲ್ಲಿ ಬರುವ ಗ್ರಾಮಗಳಲ್ಲಿನ ಗುಡ್ಡಗಾಡು ಸ್ಥಳಗಳ ಶೋಧನೆಯ ವಿಷಯಗಳ ಸಂಗ್ರಹಣೆ ದೃಷ್ಟಿಯಿಂದ ಕೆಲವು ಅಧ್ಯಾಯಗಳಾಗಿ ರೂಪುಗೊಳಿಸಬೇಕಾಗುತ್ತದೆ. ಆ ಅಧ್ಯಾಯಗಳನ್ನು ಈ ಪ್ರಬಂಧಕ್ಕೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ಏಳು ಅಧ್ಯಾಯಗಳಲ್ಲಿ ಚರ್ಚಿತ ವಿಚಾರಗಳ ಸಂಕ್ಷಿಪ್ತ ಸ್ವರೂಪದ ಮಾಹಿತಿ ಇಲ್ಲಿ ಕೊಡಲಾಗಿದೆ.

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿಯನ್ನು ಹೊಂದಿದ್ದು, ಪ್ರಾಗೈತಿಹಾಸಿಕ ಚಿತ್ರಗಳು ಅಧ್ಯಯನ ದೃಷ್ಟಿಯಿಂದ ಎಷ್ಟು ಮಹತ್ವ ಪಡೆದುಕೊಳ್ಳುತ್ತವೆ. ಅವುಗಳನ್ನು ಭವಿಷ್ಯದ ದಿನಗಳಲ್ಲಿ ಯಾವ ಸ್ಥಿತಿಯಲ್ಲಿ ಕಾಣುತ್ತೇವೆ. ಈ ಪ್ರಾಗೈತಿಹಾಸಿಕ ಚಿತ್ರಗಳು ನಾಡಿನ ಕಲೆಯ ಬೆಳವಣಿಗೆ ಮತ್ತು ಕಲೆಯು ಶ್ರೀಮಂತವಾಗಿ ಕಾಣುವಲ್ಲಿ ಅದರ ಪಾತ್ರವೇನು ಎಂಬುದು ತಿಳಿದುಬರುವುದು. ಆದಿಮಾನವನ ಚಿತ್ರಕಲೆಯ ತನ್ನ ವ್ಯಾಪ್ತಿಯು ಅಂದಿನಿಂದ ಇಂದಿನ ಆಧುನಿಕ ಜಗತ್ತಿಗೆ ಸ್ವರೂಪ ವ್ಯಾಪಿಸಿದೆ ಎಂಬುದರ ಕುರಿತಾಗಿ ಹೇಳಲಾಗಿದೆ.

ಅಧ್ಯಾಯ - ಎರಡು

ಕೊಪ್ಪಳ ಜಿಲ್ಲೆಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರ ಮತ್ತು ಲಲಿಕಲೆಗಳು ಕುರಿತಂತೆ ಆ ಪರಿಸರದಲ್ಲಿ ಯಾವ ಯಾವ ಐತಿಹಾಸಿಕ ಚರಿತ್ರೆ ಹೊಂದಿದೆ ಎಂಬುದು ಮತ್ತು ಅಲ್ಲಿ ಬರುವ ಇನ್ನಿತರೆ ಕಲೆಗಳ ಕುರಿತು ಅಲ್ಲದೇ ಕೊಪ್ಪಳ ಭೌಗೋಳಿಕ ಪರಿಸರವು ಆದಿಕಾಲದಿಂದ ಕೋಟೆಕೊತ್ತಲುಗಳ, ಸರೋವರಗಳು ಕುರಿತಾಗಿ ವಿವರಿಸಲಾಗಿದೆ. ಮತ್ತು ಈ ಜಿಲ್ಲೆಯಲ್ಲಿ ಬೆಳೆದು ಬಂದಿರುವ ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ತಾಲ್ಲೂಕುವಾರು ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಕಲೆಯ ನೆಲೆಗಳ ಕುರಿತಂತೆ ಪರ್ವತ ಶ್ರೇಣಿಗಳ ಪ್ರದೇಶಗಳಿಗೆ ಭೇಟಿ ನೀಡುವ ಮೂಲಕವಾಗಿ ಮತ್ತು ಪ್ರಾಗೈತಿಹಾಸಿಕ ಚಿತ್ರಗಳಿರುವ ಹೊಸ ಹೊಸ ನೆಲೆಗಳ ಶೋಧನೆಯನ್ನು ಕ್ಷೇತ್ರಕಾರ್ಯದ ಮೂಲಕವಾಗಿ ಪತ್ತೆ ಹಚ್ಚಲಾಗಿದೆ. ಪ್ರಾಗೈತಿಹಾಸಿಕ ಚಿತ್ರಗಳು ಯಾವ ಯಾವ ಹಂತಗಳಲ್ಲಿ ಕಾಣಸಿಗುತ್ತವೆ, ಯಾವ ವಿಧಾನಗಳಿಂದ ಕೂಡಿವೆ. ಎಂತಹ ತಂತ್ರ, ಶೈಲಿಗಳನ್ನು ಒಳಗೊಂಡಿವೆ ಎಂಬುವುದರ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ - ಮೂರು

ಗಂಗಾವತಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು ಇರುವಂತಹ ಹಳ್ಳಿಗಳಿಗೆ ಸಂಬಂಧಿಸಿದ ನೆಲೆಗಳು ಕುರಿತಾಗಿ ಹೊಸ ಹೊಸ ವಿಚಾರಗಳನ್ನು ವಿಮರ್ಶಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿ ಬರುವಂತಹ ಗುಡ್ಡು ಗಾಡು ಪ್ರದೇಶಗಳಲ್ಲಿನ ಚಿತ್ರಗಳ ಸ್ಥಳಗಳು ಕುರಿತಾಗಿ ಪರಿಶೋಧಿಸಲಾಗಿದೆ.

ಕನಕಗಿರಿ ಪ್ರಾಗೈತಿಹಾಸಿಕ ಚಿತ್ರಗಳು ಎಲ್ಲಿ ಕಂಡು ಬರುತ್ತವೆ ಎಂಬುವುದರ ಜೊತೆ ಜೊತೆಗೆ ಇನ್ನೂ ಚಿತ್ರಗಳ ನೆಲೆಗಳನ್ನು ಪರಿಶೋಧಿಸುವ ಗುರಿಯನ್ನು ಕ್ಷೇತ್ರಕಾರ್ಯದ ಮೂಲಕ ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಾಯ - ನಾಲ್ಕು

ಕುಷ್ಟಗಿ ತಾಲೂಕಿನಲ್ಲಿ ಬರುವಂತಹ ಪ್ರಾಗೈತಿಹಾಸಿಕ ಪ್ರದೇಶಗಳ ಕುರಿತಾಗಿ ಅಧ್ಯಯನವನ್ನು ಅಲ್ಲಿನ ಗ್ರಾಮಗಳಿಗೆ ಭೇಟಿ ನೀಡುವುದರೊಂದಿಗೆ ಆ ಜನರ ಸಹಾಯ ಪಡೆದು ಸಂಬಂಧಿಸಿದ ವಿಚಾರಗಳನ್ನು ತೌಲನೀಕರಿಸಲಾಗಿದೆ.

ಅಧ್ಯಾಯ - ಐದು

ಕೊಪ್ಪಳ ತಾಲೂಕಿನ ಪ್ರೆಗೈತಿಹಾಸಿಕ ಚಿತ್ರಗಳು ಕುರಿತಾಗಿ ಕ್ಷೇತ್ರಕಾರ್ಯ ಮತ್ತು ಅನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ಪ್ರಬಂಧದ ಅಧ್ಯಯನಕ್ಕೆ ಹೆಚ್ಚು ಮಹತ್ವವನ್ನಾಗಿ ಈ ವಿಷಯಗಳನ್ನು ವಿವರಿಸಲಾಗಿದೆ.

ಅಧ್ಯಾಯ - ಆರು

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ಲಕ್ಷಣಗಳು ಯಾವ ರೀತಿ ನೀತಿಗಳನ್ನು ಅವುಗಳಲ್ಲಿ ಬಳಸಲಾಗಿದೆ. ಆ ಚಿತ್ರಗಳ ಹೊರ ಗುಣಲಕ್ಷಣಗಳು ಯಾವುವು ಮತ್ತು ತಂತ್ರ ಶೈಲಿಗಳ ಬಗ್ಗೆ ಶೋಧಿಸಿದ ಕಾರ್ಯದ ಮೂಲಕ ಕೆಲವು ಸೂಕ್ಷ್ಮವಾದ ಗುಣಗಳ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ - ಏಳು

ಈ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟಾರೆ ಎಲ್ಲಾ ಅಧ್ಯಾಯಗಳಿಂದ ವ್ಯಕ್ತವಾದ ಫಲಿತಗಳನ್ನು ಒಳಗೊಂಡಿದ್ದು, ಅವನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಭೌಗೋಳಿಕವಾಗಿ ಈ ಪ್ರದೇಶವು ಇನ್ನಿತರೆ ಭೂ ಪ್ರದೇಶಗಳಿಂದ ವಿಶೇಷತೆಯಿಂದ ಕೂಡಿದೆ. ತನ್ನದೇ ಆದ ಮೈವಳಿಕೆಯನ್ನು ಒಳಗೂಡಿಸಿಕೊಂಡು ಪ್ರತ್ಯೇಕವಾಗಿ ಕಂಡುಬರುತ್ತದೆ ಎಂಬ ವಿಷಯದಲ್ಲಿ ಇಲ್ಲಿನ ಭೂಮಿಯಲ್ಲಿನ ಬೃಹತ್ ಶಿಲಾಯುಗದ ಶಿಲಾಮನೆಗಳು ಗಂಗಾವತಿ ತಾಲೂಕು ಪ್ರದೇಶಗಳಲ್ಲಿ ಕಂಡರೂ ನಮ್ಮ ದೃಶ್ಯಕಲೆಯ ದೃಷ್ಟಿಯಿಂದ ಹೆಚ್ಚೇನು ಗಮನಹರಿಸದೆ. ವಿಶೇಷವಾಗಿ ವರ್ಣ ಚಿತ್ರಗಳು ಕಂಡು ಬಂದಿರುವುದರಿಂದ ಹೈದರಾಬಾದ್ ಮತ್ತು ಬೊಂಬಾಯಿ ಕರ್ನಾಟಕಕ್ಕೆ ಉತ್ತರ ಕರ್ನಾಟಕ ಮುಖ್ಯ ವರ್ಣನೆಲೆ ಎಂಬುದು ಈ ಕೊಪ್ಪಳ ಜಿಲ್ಲೆಯ ಪ್ರದೇಶದ ಪ್ರಾಮುಖ್ಯತೆಯನ್ನು ಸಾರುತ್ತದೆ. ಆದ ಕಾರಣವಾಗಿ ಪ್ರಾಗೈತಿಹಾಸ ಕಾಲದ ಗವಿವರ್ಣ ಚಿತ್ರಗಳನ್ನು ಬಯಲು ಬಂಡೆ ಗೀರು, ಕುಟ್ಟು ಚಿತ್ರಗಳನ್ನು ಪ್ರಧಾನವಾಗಿರಿಸಿ ಕೊಂಡು ವ್ಯಾಪ್ತಿಯನ್ನು ಒಳಗೊಂಡಿದ್ದು ಕಂಡುಬರುತ್ತದೆ.

ಈ ಅಧ್ಯಯನ ವಿಷಯವು ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಎನ್ನುವುದಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ, ಕುಷ್ಟಗಿ ತಾಲೂಕು ಪ್ರದೇಶಗಳಿಗೆ ಸಂಬಂಧ ಪಡುವ ಗ್ರಾಮ ನೆಲೆಗಳಿಗೆ ಸೀಮಿತವಾಗಿರಿಸಿಕೊಂಡು ಪ್ರಬಂಧದ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನದ ವೈಧಾನಿಕತೆ

ಈ ಪ್ರಬಂಧ ಅಧ್ಯಯನಕ್ಕೆ ಎರಡು ರೀತಿಯ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಅವು ಇಂತಿವೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ:- ಈ ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರಕಾರ್ಯವು ಅತೀ ಮಹತ್ವದ ಅಂಶವಾಗಿದ್ದು, ಈ ಪ್ರಬಂಧಕ್ಕೆ ಸಂಬಂಧಪಟ್ಟ ವಿಷಯವಾದ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯ ಕುರಿತು ಅಧ್ಯಯನ ನಡೆಸಿದ ಸಂದರ್ಭದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ಸಂಶೋಧನಾತ್ಮಕ ಕಾರ್ಯವೈಖರಿಯನ್ನು ಪ್ರಾರಂಭಿಸಿ ಹತ್ತು ಹಲವು ವಿಷಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕ್ಷೇತ್ರಕಾರ್ಯದಲ್ಲಿ ಅವಲೋಕನ ಅತೀ ಮಹತ್ವವಾಗಿದ್ದು, ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳ ಶೋಧನೆ ಮಾಡಿ ಛಾಯಾಚಿತ್ರ ಬಳಸಿಕೊಂಡು ಆ ನೆಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಚಿತ್ರಗಳನ್ನು ನೋಡಿ ಆ ಸಮಯದಲ್ಲಿ ಮೂಡಿ ಬರುವ ಸಂಗತಿಗಳನ್ನು ತರ್ಕಿಸಿ ಬರವಣಿಗೆಯಲ್ಲಿ ಬಳಸಿಕೊಳ್ಳಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ:- ಈ ಪ್ರಬಂಧದ ಬರವಣಿಗೆಯಲ್ಲಿ ದ್ವಿತೀಯ ಆಕರ ಸಾಮಗ್ರಿಯಾಗಿದ್ದು, ಪ್ರಕಟಿತ ಮತ್ತು ಅಪ್ರಕಟಿತ ಪುಸ್ತಕಗಳು, ಅಭಿನಂದನ ಗ್ರಂಥಗಳು, ವಿಶ್ವಕೋಶಗಳು, ಸಂಶೋಧನಾ ಲೇಖನಗಳು, ಪ್ರಾಗೈತಿಹಾಸಿಕ ಚಿತ್ರಗಳ ಕುರಿತು ವ್ಯಕ್ತಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ, ಅಧ್ಯಯನದ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳಲಾಗಿದೆ.

* * *

ಅಧ್ಯಾಯ - ಎರಡು

ಕೊಪ್ಪಳ ಜಿಲ್ಲೆಯ ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಸರ

ಅಧ್ಯಾಯ – ಎರಡು

ಕೊಪ್ಪಳ ಜಿಲ್ಲೆಯ ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಸರ

ಭೌಗೋಳಿಕವಾಗಿ ಉತ್ತಮವಾದ ಪರಿಸರವನ್ನು ಹೊಂದಿರುವ ಪ್ರದೇಶಗಳಲ್ಲಿ ಮಾನವ ಜೀವಿಯು ತನ್ನ ಜೀವನೋಪಾಯಕ್ಕಾಗಿ ಅಗತ್ಯ ವಸ್ತುಗಳ, ನೆಲೆಗಳಲ್ಲಿ ಹೆಚ್ಚು ಕಾಲವನ್ನು ಸಾಗಿಸುವುದು ಮನುಷ್ಯನ ಹುಟ್ಟುಗುಣಗಳಲ್ಲಿ ಮುಖ್ಯವಾದದ್ದು. ಮಾನವನು ಪರಿಸರದೊಂದಿಗೆ ಸೆಣೆಸಾಡುತ್ತಾ ಬಂದಿರುವನು. ಪ್ರಾರಂಭದಿಂದ ಗುಡ್ಡ–ಗಾಡು, ನದಿ–ಸರೋವರಗಳು ಹೊಂದಿರುವಂತ ಪ್ರದೇಶಗಳಲ್ಲಿಯೇ ವಾಸಸ್ಥಾನವನ್ನಾಗಿಸಿಕೊಂಡನು. ಇಲ್ಲಿ ಫಲವತ್ತಾದ ಪರಿಸರ ಬೆಳೆಯುವುದರಿಂದ ಎಲ್ಲಾ ಜೀವಿಗಳ ವಾಸಸ್ಥಾನವಾಗಿ ಇವುಗಳ ನೆಲೆಗೆ ಒಂದು ಕಾರಣವಾಗುತ್ತದೆ. ಇಂತಹ ಫಲವತ್ತಾದ ಭೂಮಿಯ ಜೊತೆಯಲ್ಲಿಯೇ ಕಲ್ಲಾಸರೆ, ಗವಿ, ಪೊದೆಗಳಂತಹ ನೈಸರ್ಗಿಕವಾದ ಕಲ್ಲು ಬಂಡೆಗಳ ಪರ್ವತಶ್ರೇಣಿಗಳು ಕೂಡ ವನ್ಯಜೀವಿಗಳು ಮತ್ತು ಮನುಷ್ಯ ಜೀವಿಯು ಪರಿಸರದ ವಿಕೋಪಗಳಿಂದ ಜೀವರಕ್ಷಣೆ ಪಡೆಯಲು ಪ್ರಮುಖ ಸ್ಥಳಗಳಾಗಿ ಕಂಡುಕೊಳ್ಳಲಾಯಿತು.

ಇದಕ್ಕೆ ಅನುಗಣವಾಗಿ ಇರುವ ಕೊಪ್ಪಳ, ಗಂಗಾವತಿಯ ಸುತ್ತಮುತ್ತಲು ಪ್ರದೇಶಗಳಲ್ಲಿ ಬೃಹದಾಕಾರದ ಕಲ್ಲುಗುಂಡು ಬೆಟ್ಟ ಶ್ರೇಣಿಗಳು ಬಹುಮುಖ್ಯವಾಗಿ ಕಾಣಸಿಗುತ್ತವೆ. ಅಲ್ಲದೇ ನೀರಾವರಿ ಪ್ರದೇಶವಾಗಿ ತುಂಗಭದ್ರೆಯ ಕೃಪಾಕಟಾಕ್ಷ ಕೊಪ್ಪಳದ ಕೆಲಭಾಗದ ಭೂಮಿಯನ್ನು ಹಾವರಿಸಿದೆ ಮತ್ತು ಗಂಗಾವತಿ, ತಾಲೂಕು ಪ್ರದೇಶದಿಂದ ಬಹುಮುಖ್ಯವಾಗಿ ತುಂಗಭದ್ರಾ ನದಿಯು ಹರಿಯುವುದರಿಂದ ಇಲ್ಲಿ ನೀರಾವರಿಯು ಭತ್ತ, ಬಾಳೆ, ಕಬ್ಬು ಬೆಳೆಗಳು ಬೆಳೆಯುತ್ತಾರೆ. ಭತ್ತವು ಅತೀ ಹೆಚ್ಚು ಬೆಳೆಯುವುದರಿಂದ ಭತ್ತದ ಕಣಜ ಎಂದು ಹೆಸರುವಾಸಿಯಾಗಿದೆ. ಗಂಗಾವತಿ ತಾಲೂಕು ಪ್ರದೇಶಕ್ಕೆ ಒಳಪಡುವ ಕಾರಟಗಿ ಹೋಬಳಿ ಪ್ರದೇಶವಾಗಿದ್ದು, ಇದು ಭತ್ತದ ಬೆಳೆಯಿಂದ ಮತ್ತು ಅಕ್ಕಿ ಕಾರ್ಖಾನೆಗಳಿಂದ ಗಂಗಾವತಿಗಿಂತಲೂ ಹೆಚ್ಚು ಮಹತ್ವ ಪಡೆದುಕೊಂಡಿದೆ. ಇವುಗಳು ಕೊಪ್ಪಳ ಜಿಲ್ಲೆಯನ್ನು ಆರ್ಥಿಕವಾಗಿ ಸಮಸ್ಥಿತಿಯನ್ನು ಕಾಪಾಡಿಕೊಳ್ಳುವಲ್ಲಿ ಮುಖ್ಯವಾದ ಪಾತ್ರ ವಹಿಸುತ್ತವೆ ಎಂದು ಹೇಳಬಹುದು.

ಭೂ ವೈಜ್ಞಾನಿಕವಾಗಿ ಕೊಪ್ಪಳ–ಗಂಗಾವತಿ ಪ್ರದೇಶವನ್ನು ಒಳಗೊಂಡಂತೆ ದಕ್ಷಿಣ ಭಾರತದ ಪ್ರಸ್ಥಭೂಮಿಯನ್ನು ಅತ್ಯಂತ ಪ್ರಾಚೀನ ನಿರ್ಮಾಣವೆಂದೂ ಆದಿಕಲ್ಪಯುಗಕ್ಕೆ ಸೇರಿದುದೆಂದೂ ಸುಮಾರು ಮೂರುನೂರು ಕೋಟಿ ವರ್ಷ ಹಿರಿಯದೆಂದೂ ಭೂವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಸಾಗರ ಭಾಗವಾಗಿದ್ದ ಈ ಪ್ರದೇಶ ಮೇಲೆದ್ದು ಕಾಲಾಂತರದಲ್ಲಿ ಹಲವಾರು ಮಾರ್ಪಾಡು ಹೊಂದಿ ಸಸ್ಯ ಹಾಗೂ ಪ್ರಾಣಿಗಳ ವಸತಿಗೆ ತಕ್ಕುದಾಗಿ ಇಂದಿನ ಸ್ಥಿತಿಗೆ ಬಂದಿದೆ. ಈ ಭೂಭಾಗವು ಸಮುದ್ರ ಪಾತಳಿಯಿಂದ(ಎಂ.ಎಸ್.ಎಲ್) ೨೩೪೯ ಅಡಿ ಎತ್ತರದಲ್ಲಿದೆ[೧] ಇದರಿಂದ ಈ ಪ್ರದೇಶವು ಸಮೃದ್ಧವಾಗಿದ್ದು, ಫಲವತ್ತಾಂಶದಿಂದ ಕೂಡಿದ ಭೂಮಿ, ನೀರಾವರಿಯ ಹರಿವು, ಸಸ್ಯ ಹಾಗೂ ವೃಕ್ಷರಾಶಿ, ಪ್ರಾಣಿ–ಪಕ್ಷಿ, ಸರಿಸೃಪಗಳು, ಬೆಟ್ಟಗುಡ್ಡ ಪರ್ವತ ಶ್ರೇಣಿಗಳಿಂದ ಜೀವ ಸಂತತಿಯ ನೆಲೆಯಾಗಿದೆ.

ನೀರಿನ ಅನುಕೂಲತೆಗಳು

ತುಂಗಭದ್ರಾ ನದಿ

ಕೃಷ್ಣಾ ನದಿಯ ಉಪನದಿಯಾದ ತುಂಗಭದ್ರಾ ನದಿಯು ಕೊಪ್ಪಳ ಗಂಗಾವತಿಯ ಪ್ರದೇಶದ ಏಕೈಕ ಪ್ರಧಾನ ನದಿಯಾಗಿದೆ. ಪಶ್ಚಿಮ ಘಟ್ಟದ ವರಾಹ ಪರ್ವತದ ಗಂಗಾಮೂಲದಲ್ಲಿ ಹುಟ್ಟುವ ಈ ನದಿಯು ತುಂಗ ಮತ್ತು ಭದ್ರಾ ಎಂಬೆರಡು ಶಾಖೆಗಳ ಸಂಗಮವಾಗಿದೆ. ತುಂಗಭದ್ರಾ ನದಿಯು ಕೊಪ್ಪಳ ಗಂಗಾವತಿ ಪ್ರದೇಶವನ್ನು ಕೊಪ್ಪಳ ತಾಲೂಕಿನ ಕೆಸಲಾಪುರ ಎಂಬಲ್ಲಿ ಪ್ರವೇಶಿಸುತ್ತದೆ. ಮುನಿರಾಬಾದ್‌ನಿಂದ ಕಂಪ್ಲಿಯವರೆಗಿನ ನದಿಯ ಹರಿವು ಬಹುಮಟ್ಟಿಗೆ ಬೆಟ್ಟಗುಡ್ಡಗಳ ನಡುವೆಯೇ ಸಾಗಿದ್ದು, ಕೆಲವು ಕಡೆ ಚಿಕ್ಕದಾಗಿ ಮತ್ತು ಆಳವಾಗಿಯೂ ಹಾಗೂ ಕೆಲವು ಕಡೆ ಅಗಲವಾಗಿ ಹರಿದಿದೆ. ಈ ನದಿಯು ಸಮುದ್ರ ಮಟ್ಟದಿಂದ ೧,೭೧೦ ಫೀಟ್ ಎತ್ತರದಲ್ಲಿ ಹರಿಯುತ್ತದೆ.[೨] ತುಂಗಭದ್ರಾ ನದಿಯು ಕೊಪ್ಪಳ ಗಂಗಾವತಿ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದಿಂದ ಪ್ರಸ್ತುತದವರೆಗಿನ ಮಾನವನ ನಾಗರಿಕ ಬೆಳವಣಿಗೆಗೆ ಮಹತ್ತರವಾದ ಕೊಡುಗೆ ನೀಡಿದೆ.[೩] ಸಿಂಧೂ ನಾಗರೀಕತೆಯ ಬೆಳವಣಿಗೆಗೆ ಸಿಂಧೂ ನದಿಯು ಕೂಡ ಪ್ರಮುಖ ಕಾರಣವಾಗಿತ್ತು. ಮಾನವನ ನಾಗರೀಕತೆಯು ನೆಲೆಯೂರಲು ಹಾಗೂ ವಿಕಾಸಗೊಳ್ಳುತ್ತಾ ಹೋಗಲು ನೀರಾವರಿ ಪ್ರದೇಶ ಆದಂತ ನದಿಗಳ ಪಾತ್ರವು ಬಹುಮುಖ್ಯವಾಗುತ್ತದೆ.

ಹಳ್ಳಗಳು

ತುಂಗಾಭದ್ರ ನದಿಯ ಜಾಲವಾಗಿ ಅನೇಕ ಹಳ್ಳಗಳು ಈ ಪ್ರದೇಶದಲ್ಲಿ ಹರಿದಿವೆ. ಅವುಗಳಲ್ಲಿ ಹಿರೇಹಳ್ಳ, ಆಗೋಲಿಹಳ್ಳಿ(ಗಂಗಾವತಿ ತಾ.) ವೀರಾಪುರ ಹಳ್ಳ ಮುಖ್ಯವಾಗಿವೆ. ಈ ಎಲ್ಲಾ ದೊಡ್ಡ ಚಿಕ್ಕ ಹಳ್ಳಗಳು ಸ್ವತಂತ್ರವಾಗಿ ಮತ್ತು ಕೆಲವು ಕಡೆ ಒಟ್ಟಾಗಿ ತುಂಗಾಭದ್ರಾ ನದಿಯನ್ನು ಸೇರುತ್ತವೆ.

---

೦೧. ಚಂದ್ರಶೇಖರ್ ಎಚ್., ೧೯೯೩, ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ, ತಿರುಳ್ಗನ್ನಡ, ಪುಟ-೩೭

೦೨. ಅಭಿಶಂಕರ್ ಕೆ. (ಸಂ)., ೧೯೭೦, ರಾಯಚೂರು ಡಿಸ್ಟ್ರಿಕ್ಟ್ ಗ್ಯಾಜಿಟಿಯರ್, ಪುಟ-೨೩೫, ೨೪೧

೦೩. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೪

ಈ ಹಳ್ಳಗಳು ನೀರಿನ ಚಿಲುಮೆಯಿಂದ ಸಣ್ಣದಾಗಿ ಪ್ರಾರಂಭವಾಗಿ ಕ್ರಮೇಣ ಹಳ್ಳಗಳಾಗಿ ಹರಿಯುತ್ತವೆ. ಬೆಟ್ಟ ಕಣಿವೆ ಪ್ರದೇಶದಲ್ಲಿ ಇಂಥ ಅನೇಕ ಚಿಲುಮೆಗಳನ್ನು ಕಾಣಬಹುದು. ಇವಕ್ಕೆ ಸ್ಥಳೀಯವಾಗಿ ಊಟಿಗಳೆಂದು ಕರೆಯುತ್ತಾರೆ.[೪] ಈ ಊಟಿಗಳು ತಗ್ಗು ಪ್ರದೇಶಗಳ ಮಣ್ಣಿನಲ್ಲಿ ನೀರಿನ ತೇವಾಂಶ ಹೆಚ್ಚಗಿದ್ದಲ್ಲಿ ಹುಟ್ಟಿಕೊಂಡು ಇಳಿಜಾರು ಭೂಪ್ರದೇಶವಾಗಿ ಹರಿಯುತ್ತಾ ಹೋಗುತ್ತವೆ. ಇವುಗಳಲ್ಲಿ ದೊಡ್ಡ ಪ್ರಮಾಣವು ಮತ್ತು ಚಿಕ್ಕ ಪ್ರಮಾಣದ ನೀರಿನ ಹರಿಯು ಎರಡೂ ರೀತಿಯಿಂದ ಕಾಣುತ್ತೇವೆ. ದೊಡ್ಡ ಪ್ರಮಾಣದ ನೀರಿನ ಹರಿವು ಇರುವ ಊಟಿಗಳನ್ನು ಹಳ್ಳಗಳಾಗಿ ಕಾಣುತ್ತೇವೆ. ಈ ಹಳ್ಳಗಳಿಗೆ ಮಳೆಯಾದ ಸಂದರ್ಭದಲ್ಲಿ ನೀರಿನ ಹರಿವು ಕಾಲುವೆಗಳಿಗೆ ಸಮನಾಗಿ ಹರಿಯುತ್ತವೆ.

ಕೆರೆಗಳು

ಕೊಪ್ಪಳ ಜಿಲ್ಲೆಯ ಪ್ರದೇಶದಲ್ಲಿ ಅನೇಕ ನೈಸರ್ಗಿಕ ಮತ್ತು ಕೃತಕ ಕೆರೆಗಳನ್ನು ಕಾಣಬಹುದು. ನೀರಿನ ಮೂಲಗಳಲ್ಲಿ ಮತ್ತು ಮಳೆ ನೀರು ಸಂಗ್ರಹದ ಪ್ರಾಚೀನ ಚಿಕ್ಕ ಚಿಕ್ಕ ಕೆರೆಗಳನ್ನು ಶಿಲಾಯುಗದ ನೆಲೆಗಳಾದ ಹಿರೇಬೆಣಕಲ್, ಸಂಗಾಪುರ, ಆಗೋಲಿ, ಚಿಕ್ಕಬೆಣಕಲ್, ಬಿಳೇಭಾವಿಗಳಲ್ಲಿ ಕಾಣಬಹುದು. ಹಾಗೆ ಹುಲಿಕೆರೆ, ಮುಕ್ಕುಂಪಿಕೆರೆ, ರಾಯಕೆರೆ(ಚಿಕ್ಕಬೆಣಕಲ್) ಬಸಾಪಟ್ಟಣಕೆರೆ, ಹಂಪಸದುರ್ಗ, ರಾಮದುರ್ಗ ಕನಕಗಿರಿ ಕೆರೆ ಗಂಗಾವತಿ ತಾ)[೫] ತಾವರಗೇರಿಯ ಹುಲಿಯಾಪುರಕೆರೆ, ಹೊಲಗೇರಾ, ಹನುಮಸಾಗರ, ಕುಷ್ಟಗಿ(ಕುಷ್ಟಗಿ ತಾ.) ಇವುಗಳು ಆಯಾ ತಾಲೂಕು ಪ್ರದೇಶವಾಗಿ ಸಂಬಂಧಿಸಿದ ನೀರಿನ ಪ್ರಮುಖ ಕೆರೆಗಳಾಗಿ ಕಾಣುತ್ತೇವೆ.

ಬಾವಿಗಳು

ಬಾವಿಗಳು ಕುಡಿಯುವ ನೀರಿನ ದೃಷ್ಟಿಯಿಂದ ಅತಿ ಮುಖ್ಯವಾಗಿ ಕೊಪ್ಪಳ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಕೊಪ್ಪಳದ ಕೋಟೆ ಆವರಣ ಹತ್ತಿರ ಗಂಗಾಪುತ್ರಿ ಭಾವಿ, ಕನಕಗಿರಿಯ ವೆಂಕಟಪತಿ ಭಾವಿ (ಗಂಗಾವತಿ ತಾ) ಕುಷ್ಟಗಿಯ ಪುರ್ತಗೇರಾ, ಹನುಮಸಾಗರಗಳಲ್ಲಿ ಬಾವಿಗಳು ಕಂಡುಬರುತ್ತವೆ. ಯಲಬುರ್ಗಾ ತಾಲೂಕು ಪ್ರದೇಶವಾದ ಇಟಗಿ, ಸೇರಿದಂತೆ ಎರಡು ಪ್ರಾಚೀನ ಬಾವಿಗಳು ನಿರ್ಮಾಣಗೊಂಡಿವೆ.

ಬೆಟ್ಟಗಳು ಮಣ್ಣು, ಶಿಲೆ, ಖನಿಜ, ಸಸ್ಯ

ಬೆಟ್ಟಗಳು

ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ಗಂಗಾವತಿ ತಾಲೂಕು ಪ್ರದೇಶಗಳು ಬಹುಮಟ್ಟಿಗೆ ಬೆಟ್ಟಗಳಿಂದ ಆವೃತವಾಗಿದೆ. ಕೊಪ್ಪಳ ತಾಲೂಕಿನ ಬೂದಗುಂಪಾದಿಂದ ಗಂಗಾವತಿಯವರೆಗೆ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಬೆಟ್ಟ ಸಾಲುಗಳಿಗೆ ಏಳು ಗುಡ್ಡಗಳೆಂದು ಹೆಸರು. ಈ ಏಳು ಸಾಲುಗಳಲ್ಲಿ ಒಂದೆರಡು ಬಿಟ್ಟು ಉಳಿದವು ಒಂದರ ಪಕ್ಕ ಒಂದರಂತೆ ಸುಮಾರು ೫೦ ಕಿ.ಮೀ ಎಡೆಬಿಡದೆ

೧೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೪
೧೫. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೪

ನಿರಂತರವಾಗಿ ಹಬ್ಬಿವೆ. ಈ ಬೆಟ್ಟಗಳು ಪ್ರಧಾನವಾಗಿ ಕಣಶಿಲೆಯಲ್ಲಿ ರಚನೆಯಾಗಿವೆ. ಅಲ್ಲಲ್ಲಿ ಕಪ್ಪುಶಿಲೆಯ ಶ್ರೇಣಿಗಳನ್ನು (ಟ್ರಾಪ್ ಶಿಲೆಗಳ ಉಬ್ಬು) ಕಾಣಬಹುದು. ಈ ಬೆಟ್ಟಸಾಲಿನಲ್ಲಿ ನಿಶಾನಿಗುಡ್ಡ (೧,೯೩೩ ಅಡಿ) ಎಮ್ಮಿಗುಡ್ಡ ಎತ್ತರವಾಗಿವೆ. ಈ ಸಾಲಿನಲ್ಲಿ ತಿಮ್ಮಾಪುರ ಬೆಟ್ಟವು (೨,೧೩೩ ಅಡಿ) ಅತೀ ಎತ್ತರದ್ದಾಗಿದೆ.[೬]

ಈ ಪ್ರದೇಶಗಳ ಬೆಟ್ಟಶ್ರೇಣಿಗಳು ಹತ್ತಿರದ ಪ್ರದೇಶಗಳಲ್ಲಿರುವ ಹಳ್ಳಿಗಳ ಹೆಸರುಗಳಿಂದ ಈ ಗುಡ್ಡಗಳನ್ನು ಹೆಸರಿಸಲಾಗುತ್ತಾ ಬಂದಿದೆ. ಬೆಟ್ಟಗಳು ಕಲ್ಲುಗುಂಡು ಶಿಲೆಯಿಂದ ಕೂಡಿದ್ದು, ಈ ಪ್ರದೇಶದ ಬಿಸಿಲಿನ ತಾಪಮಾನ ಹೆಚ್ಚಾಗಲಿಕ್ಕೆ ಕೂಡ ಇದು ಒಂದು ಕಾರಣವಾಗುತ್ತದೆ.

ಮಣ್ಣು

ಈ ಪ್ರದೇಶದಲ್ಲಿ ಎರೆ, (ಕಪ್ಪ), ಕೆಂಪು ಮಸಾರಿ ಕೆಲವು ಕಡೆ ಸವುಳು ಭೂಮಿ ಹಾಗೂ ಜೇಡಿ ಮಣ್ಣಿನಿಂದ ಕೂಡಿದ ಕ್ಷಾರ ಲವಣಗಳನ್ನೊಳಗೊಂಡ ಫಲವತ್ತಾದ ಭೂಮಿ ಇದೆ. ತುಂಗಭದ್ರಾ ನದಿಯ ತೀರ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಜೇಡಿ (ಕೆಸರು ಮಣ್ಣು) ಮಣ್ಣನ್ನು ಕಾಣಬಹುದು. ಹುಲಿ ಹೈದರ್ ಹತ್ತಿರ ಕಾವಿ ಮಣ್ಣಿದೆ. ಬೇರೆ ಬೇರೆ ಭಾಗದಲ್ಲಿ ಮಳೆಯ ಪ್ರಮಾಣಕ್ಕೆ ತಕ್ಕಂತೆ ಬೇರೆ ಬೇರೆ ಮಣ್ಣು ಕಂಡುಬರುತ್ತದೆ. ಇದು ಈ ಪ್ರದೇಶದ ಪ್ರಾಕೃತಿಕ ವೈಶಿಷ್ಟ್ಯವಾಗಿದೆ.[೭] ಹೆಚ್ಚಾನು ಹೆಚ್ಚು ಭೂಮಿಯು ಜೇಡಿಮಣ್ಣಿನಿಂದ ಕೂಡಿದ್ದು, ನೀರಾವರಿ ಬೆಳೆಗೆ ಉತ್ತಮ ಫಸಲನ್ನು ನೀಡುವ ಫಲವತ್ತಾದ ಭೂಮಿಯು ಈ ಪ್ರದೇಶವನ್ನು ಆವರಿಸಿದೆ.

ಶಿಲೆ, ಖನಿಜ

ಈ ಕೊಪ್ಪಳ - ಗಂಗಾವತಿ ಪ್ರದೇಶಗಲ್ಲಿಯ ಶಿಲೆಗಳು ಜಗತ್ತಿನ ಅತೀ ಪುರಾತನವಾದ ಶಿಲೆಗಳಲ್ಲಿ ಪರಿಗಣಿಸಲ್ಪಡುತ್ತವೆ. ಇಲ್ಲಿ ಬರಿದಾಗದ ನಸುಗೆಂಪು ಮತ್ತು ಬೂದು ಬಣ್ಣದ ಗ್ರಾನೈಟ್ ಶಿಲೆಗಳ ಅಪಾರ ಸಂಪತ್ತಿದೆ. ಎಮ್ಮಿಗುಡ್ಡದ ಹತ್ತಿರ ಮಧ್ಯಮ ಕೆಂಪು ಕಣಶಿಲೆಗಳನ್ನು ಬೆಣಕಲ್‌ನಲ್ಲಿ ಕಂದು ಮತ್ತು ಊದಾ ಕಣಶಿಲೆಯನ್ನು ಕಾಣಬಹುದು. ಆನೆಗುಂದಿ ಸಮೀಪದಲ್ಲಿ ಕೋರಂಡಂ ರೂಬಿ ಶಿಲೆಗಳು ದೊರೆಯುತ್ತವೆ.[೮] ಅಲ್ಲಲ್ಲಿ ಕಪ್ಪುಶಿಲೆಯ (Trap) ಉಬ್ಬುಗಳನ್ನು ವಿಶೇಷವಾಗಿ ಇಂದರಗಿ (ಕೊಪ್ಪಳ), ವಾನಭದ್ರೇಶ್ವರ ಬೆಟ್ಟ (ಗಂಗಾವತಿ)ಗಳಲ್ಲಿ ಕಾಣಬಹುದು. ಮೂದಿನೂರು (ಕೊಪ್ಪಳ), ಬೂದುಗುಂಪಾದ ಲಕ್ಷ್ಮೀಗುಡ್ಡ (ಗಂಗಾವತಿ), ಮತ್ತು ಕೂಡ್ಲೂರು (ಕುಷ್ಟಗಿ) ಬಳಿ ಬಳಪದ ಕಲ್ಲುಗಳು ದೊರೆಯುತ್ತವೆ. ಬೂದುಗುಂಪ (ಗಂಗಾವತಿ ತಾ) ಸರ್ಕಾರಿ ಪ್ರೌಢಶಾಲೆಯ ಹತ್ತಿರ ಅತ್ಯುಪಯುಕ್ತ ಖನಿಜವಾಗಿರುವ ಕ್ವಾರ್ಟ್ಜ್‌ನ ಹರಳುಗಳು (ಸಿಲಿಕಾನ್ ಡೈ ಆಕ್ಸೈಡ್) ಕಂಡುಬಂದಿವೆ.[೯] ಸಿಲಿಕ ಖನಿಜಗಳಲ್ಲಿ ಒಂದಾಗಿರುವ ಬಿಳಿ ಬೆಣಚು ಕೊಪ್ಪಳ ಪ್ರದೇಶದ

---

೦೬. ಅಭಿಶಂಕರ್ ಕೆ. (ಸಂ)., ೧೯೭೦, ರಾಯಚೂರು ಡಿಸ್ಟ್ರಿಕ್ಟ್ ಗ್ಯಾಜಿಟಿಯರ್, ಪುಟ-೧೩

೦೭. ಬಂಗಾರಿ ವಿ.ಎಸ್., ೧೯೭೬, ಕೊಪ್ಪಳ ನಾಡಿನ ಭೌಗೌಳಿಕ ದರ್ಶನ, ಗವಿದೀಪ್ತಿ, ಪುಟ-೨೩೫, ೨೪೧

೦೮. ಚಂದ್ರಶೇಖರ್ ಎಚ್., ೧೯೯೩, ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ, ತಿರುಳ್ಗನ್ನಡ, ಪುಟ-೩೭

೦೯. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೫

ತಾವರಗೇರಿ ಗ್ರಾಮದಲ್ಲಿ ಪತ್ತೆಯಾಗಿದೆ. ಗ್ರಾಮದ ಸರ್ವೆ ನಂ. ೧೪೭ ಮತ್ತು ೫೨೯ಗಳಲ್ಲಿ ಸುಮಾರು ೪.೨೫ ಎಕರೆ ಪ್ರದೇಶದಲ್ಲಿ ಒಂದು ಬಿಳಿ ಬೆಣಚಿನ ಸಿರ ಪೂರ್ವಪಶ್ಚಿಮವಾಗಿ ಸುಮಾರು ೭೦೦ ಮೀ. ಉದ್ದ, ೩ ರಿಂದ ೩೦ ಮೀ. ಅಗಲಕ್ಕೆ ಮಸೂರಾಕೃತಿಯಲ್ಲಿ ಹರಡಿದೆ.[೧೦]

ಬೈಲಕ್ಕಂಪುರ ಮತ್ತು ಕನಕಪುರದಲ್ಲಿ (ಗಂಗಾವತಿ ತಾ) ಹಸಿರು ಬೆಣಚು (ಗ್ರೀನ್ ಕ್ವಾರ್ಟ್ಸ್) ದೊರೆಯುತ್ತದೆ. ಇದು ಒಳ್ಳೆಯ ವರ್ಣವನ್ನು ಹೊಂದಿದ್ದು, ಮಣಿಗಳಿಗಾಗಿ ಮೊಸಾಯಿಕ್ ಟೈಲ್ಸ್‌ಗಳಿಗಾಗಿ ಬಳಸುತ್ತಾರೆ. ಮಧ್ಯದ ಮತ್ತು ಕೆಳದರ್ಜೆಯ ಕಬ್ಬಿಣದ ಅದಿಗಳು ಕಪ್ಪು ಪದರಶಿಲಾ ಪಟ್ಟಿಯಲ್ಲಿವೆ. ಕಬ್ಬಿಣದ ಅದಿರಾದ ಹೆಮೊಟೈಟಿನ (ಜಾಜದ ಕಲ್ಲು) ಹಲ ಹಳೆಯ ಗಣಿಗಳು ಕುಷ್ಟಗಿ ತಾಲ್ಲೂಕಿನ ಜಾಜದ ಗುಡ್ಡ, ಕಲ್ಮಂಗಿ, ಮೈದಾರದೋಕಿ ಮತ್ತು ನಂದಿಹಳ್ಳಿ ಎಂಬ ಹಳ್ಳಿಗಳಲ್ಲಿವೆ.[೧೧] ಕುಕನೂರು (ಯಲಬುರ್ಗಾ ತಾ) ಸುತ್ತ ಪ್ರದೇಶದಲ್ಲಿ ಹಿಮಾಲಯನ್ ಬ್ಲೂ ಎಂದು ಖ್ಯಾತಿಯನ್ನು ಪಡೆದಿರುವ ಸೀಣೆಕಲ್ಲು(Gneiss)ಗಳಿವೆ.[೧೨] ಈ ರೀತಿಯಲ್ಲಿ ಕೊಪ್ಪಳ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳ ಗುಡ್ಡಗಳಲ್ಲಿ ನಾನಾ ಬಗೆಯ ಕಲ್ಲು ಶಿಲೆಗಳನ್ನು ಕಾಣಬಹುದು. ಬಿಳಿ ಗ್ರಾನೈಟ್‌ಗಳನ್ನು ಕೂಡ ಈ ಪರ್ತಗಳಲ್ಲಿ ಇರಬಹುದು.

ಸಸ್ಯ

ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕು, ಗಂಗಾವತಿ ತಾಲೂಕು ಪ್ರದೇಶಗಳಲ್ಲಿ ಹೆಚ್ಚು ಕಲ್ಲು ಬಂಡೆಗಳಿಂದ ಕೂಡಿದ್ದು ಸಸ್ಯಗಳು ದಟ್ಟವಾಗಿಲ್ಲ. ಈ ಪ್ರದೇಶದಲ್ಲಿ ಕೊಪ್ಪಳ ಬ್ಲಾಕ್ - ಒಂದು (೧೧೧೭೩) ಹೆಕ್ಟೇರ್, ಆಗೋಲಿ, ಹಿರೇಬೆಣಕಲ್ (೬೬೪೭ ಹೆಕ್ಟೇರ್) ಮೂದಿನಾಳ (೪೦೫.೫ ಹೆಕ್ಟೇರ್) ಕಾಯ್ದಿಟ್ಟ ಅರಣ್ಯಗಳಿವೆ.[೧೩] ಈ ಪ್ರದೇಶದಲ್ಲಿ ಜಾಲಾರಿ, ಹೊನ್ನೆ, ಮತ್ತಿ ಆಲದ ಮರಗಳು, ಅರಿಚಲುಗಿಡ, ಬಿಳೇಪತ್ರೆ, ತಾಳೆರಂಜು, ಅತ್ತೆಹಣ್ಣಿನ ಗಿಡಗಳು, ನೆಲ್ಲಿ ಇನ್ನಿತರೆ ಗಿಡಮರ - ಬಳ್ಳಿಗಳನ್ನು ಕಾಣಬಹುದಾಗಿದೆ.

ಪ್ರಾಣಿ, ಪಕ್ಷಿಗಳು

ಸಸ್ಯ ಪ್ರಾಣಿಗಳಲ್ಲಿ ಮುಖ್ಯವಾಗಿ ಬ್ಲಾಕ್ ಬಕ್ ಜಿಂಕೆಯ ಸಣ್ಣ ಸಣ್ಣ ಹಿಂಡುಗಳು ಹಿಂದೆ ಕಂಡುಬರುತ್ತಿದ್ದವಾದರೂ ವಿರಳವಾಗಿವೆ. ಸರಿಯಾಗಿ ಇಲ್ಲದ್ದರಿಂದ ಹಾಗೂ ಭದ್ರತೆ ಇಲ್ಲದ್ದರಿಂದ ಅಲ್ಲದೇ ಬೇಟೆಯಿಂದ ಚುಕ್ಕೆ ಜಿಂಕೆಗಳು ಮತ್ತು ನೀಲ್ ಗಾಯಗಳು ಸಂಪೂರ್ಣವಾಗಿ ನಾಶದ ಅಂಚಿನಲ್ಲಿವೆ. ಹುಲಿಗಳು ಈ ಪ್ರದೇಶದಲ್ಲಿ ಪೂರ್ಣವಾಗಿ ನಶಿಸಿ ಹೋಗಿವೆ.[೧೪] ಆದರೆ ಇಲ್ಲಿ ಇಂದಿಗೂ ವಾಸವಾಗಿರುವ ಪ್ರಾಣಿಗಳೆಂದರೆ ಕಾಡುಹಂದಿ (ಮೀಕಾ), ಕರಡಿ, ಚಿರತೆ, ನರಿ, ತೋಳ, ಮೊಲ, ಕೆಂಪು - ಕಪ್ಪು ಮುಖದ ಮಂಗಗಳು, ಚಿಗರಿ, ಮುಳ್ಳುಹಂದಿ, ಮುಂಗೂಲಿ

೧೦. ಗವಿಶೆಟ್ಟಿ ಕೆ., ೧೯೯೫, ಕರ್ನಾಟಕದ ಖನಿಜ ಸಂಪತ್ತು

೧೧. ಚಂದ್ರಶೇಖರ್ ಎಚ್., ೧೯೯೩, ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ, ತಿರುಳ್ಗನ್ನಡ, ಪುಟ-೩೭

೧೨. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೬

೧೩. ಅರಣ್ಯ ಇಲಾಖೆಯ ಮಾಹಿತಿ

೧೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೬

(ಮುಂಗುಸಿ), ಉಡುವು, ಕಾಡುಬೆಕ್ಕು ಕಂಡುಬರುತ್ತವೆ. ಯಲಬುರ್ಗಾ ತಾಲ್ಲೂಕಿನಲ್ಲಿ ಹಿಂಡು ಹಿಂಡಾಗಿ ಚಿಗರೆಗಳು ಕಂಡುಬರುತ್ತವೆ. ಪಕ್ಷಿಗಳಲ್ಲಿ ನವಿಲು, ಹಸಿರುಗಿಳಿ, ಕೋಗಿಲೆ, ಕಾಗೆ, ಕಂಬಾರಕಾಗೆ, ಗೂಗಿ, ಹದ್ದು, ಪಾರಿವಾಳ, ಕೌಜುಕ, ಕಾಡುಕೋಳಿ, ಮುಂತಾಗಿ ಕಂಡುಬರುತ್ತವೆ. ನಾಗರಹಾವು, ಕೆರೆಹಾವು, ಹೆಬ್ಬಾವು, ಮಣ್ಣುಮೂಖಿನಹಾವು, ಹಸಿರುಹಾವು, ಪ್ರಮುಖವಾಗಿ ಕಾಣಸಿಗುತ್ತವೆ.

ಹವಾಮಾನ

ಕೊಪ್ಪಳ ಪ್ರದೇಶವೂ ಸಮುದ್ರ ಸಪಾಟಿಯಿಂದ ಎತ್ತರದಲ್ಲಿರುವುದರಿಂದಲೂ ಹಾಗೂ ಪರ್ಜನ್ಯಛಾಯಾ ಪ್ರದೇಶದಲ್ಲಿರುವುದರಿಂದಲೂ ಇಲ್ಲಿಯ ಹವಾಗುಣ ಸಾಮಾನ್ಯವಾಗಿ ತಂಪಾಗಿರದೆ ಒಣಹವೆ, ಬಿಸಿಲು ಮತ್ತು ಸೆಕೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಅತಿ ಉಷ್ಣ ಹಾಗೂ ಚಳಿಗಾಲದಲ್ಲಿ ಅತಿ ಚಳಿ ಇಲ್ಲಿಯ ವೈಶಿಷ್ಟ್ಯ, ಮಳೆ ಮಾತ್ರ ವಿರಳವಾಗಿರುತ್ತದೆ. ಇಲ್ಲಿಯ ವಾಡಿಕೆ ಮಳೆ ಪ್ರಮಾಣ ೫೯೯ ಮೀ.ಮೀ. ವಾಸ್ತವಿಕ ಸರಾಸರಿ ಮಳೆ ೪೮೯ ಮೀ.ಮೀ.[೧೫] (ಕೊಪ್ಪಳ ವಲಯ). ಕುಷ್ಟಗಿ ತಾಲೂಕು ಪ್ರದೇಶವು ಹವಾಮಾನದಲ್ಲಿ ಕೊಪ್ಪಳ ಪ್ರದೇಶವನ್ನು ಹೋಲುತ್ತದೆ. ಇಲ್ಲಿಯೂ ಕೂಡ ಮಳೆಯ ಅಂಶ ಕಡಿಮೆಯಿದ್ದು, ಹವಾಗುಣ ಸಾಧಾರಣವಾಗಿ ತಂಪಾಗಿರದೆ ಒಣಹವೆ, ಬಿಸಿಲು, ಸೆಕೆಯಿಂದ ಆವೃತವಾಗಿರುತ್ತದೆ.

ಪ್ರಾಗಿತಿಹಾಸ :

ಕೊಪ್ಪಳ - ಗಂಗಾವತಿ ಪ್ರದೇಶವು ಭೌಗೋಳಿಕವಾಗಿ ಸಶಕ್ತವಾಗಿರುವ ದಖನ್ ಪ್ರಸ್ಥಭೂಮಿಯಲ್ಲಿದೆ. ಈ ಪ್ರದೇಶವು ಪ್ರಾಚೀನ ಮಾನವನ ಚಟುವಟಿಕೆಗಳಿಗೆ ಪೂರಕವಾಗಿದ್ದರಿಂದ ಇದು ಆ ಕಾಲದ ಮಾನಮನ ವಾಸ್ತವ್ಯದ ಪ್ರಮುಖ ಸ್ಥಳವಾಗಿತ್ತೆಂದು ಊಹಿಸಬಹುದು.[೧೬] ಇಲ್ಲಿನ ಪರಿಸರವನ್ನು ಪಳಯುಳಿಕೆ, ಪ್ರಾಗಿತಿಹಾಸಿಕ ಚಿತ್ರಗಳ ಆಧಾರದ ಮೇಲೆ ಅಂದಾಜಿಸಬಹುದು. ಈ ಪ್ರದೇಶದಲ್ಲಿ ಸುಮಾರು ೧೮೩೫ ರಿಂದ ಒಂದಲ್ಲ ಒಂದು ಹಂತದ ಪ್ರಾಗತಿಹಾಸ ಮಾನವನ ವಸ್ತು ಅವಶೇಷಗಳು ಹೆಚ್ಚಾಗಿ ಆಕಸ್ಮಿಕವಾಗಿ ಶೋಧವಾಗಿವೆ. ಹಿರೇಬೆಣಕಲ್‌ನ ಶಿಲಾಸಮಾಧಿಗಳನ್ನು ಶಿಲಾ ಕೋಣೆಗಳನ್ನು ರೆ.ಜೆ. ಕೆಯಿಸ್ ರವರು ಶೋಧಿಸಿದ ಸಂಗತಿಯ ವರದಿಯನ್ನು ೧೮೩೫ರ ರಾಯಲ್ ಏಶಿಯಾಟಿಕ್ ಸೊಸಾಯಿಟಿ, ಬಾಂಬೆ ಶಾಖೇಯ ಜರ್ನಲ್ ಸಂ–೪ರಲ್ಲಿ ಕ.ಮೆಡಾಸ್ ಟೈಲರ್‌ರವರು ಪ್ರಕಟಿಸಿ ಬೆಳಕಿಗೆ ತಂದರು.[೧೭] ೧೮೪೨ ರಲ್ಲಿ ಕೊಪ್ಪಳದಿಂದ ಆಗ್ನೇಯಕ್ಕೆ ಸುಮಾರು ೮೦ ಕಿ.ಮೀ. ಲಿಂಗಸೂರನ ಬಳಿ ಒಬ್ಬ ಇಂಗ್ಲೀಷ್ ಅಧಿಕಾರಿ ತನ್ನ ಮನೆಯ ಹಿಂದಿನ ತೋಟದಲ್ಲಿ ಅಗೆಯುತ್ತಿರುವಾಗ ಕೆಲವು ಕಲ್ಲಿನ ಚಕ್ಕೆಗಳು ದೊರೆತವು.[೧೮] ಸಿಕ್ಕ ಚುಕ್ಕೆಗಳನ್ನು ಸಂಶೋಧಿಸಿ ಚಕ್ಕೆಗಳು ಆದಿಮಾನವ ನಿರ್ಮಿತ ಉಪಕರಣಗಳಿರಬೇಕೆಂದು

---

೧೫. ಬಂಗಾರಿ ವಿ.ಎಸ್., ೧೯೭೬, ಕೊಪ್ಪಳ ನಾಡಿನ ಭೌಗೌಳಿಕ ದರ್ಶನ, ಗವಿದೀಪ್ತಿ, ಪುಟ-೨೩೫, ೨೪೧
೧೬. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೪೭
೧೭. ಅಭಿಶಂಕರ್ ಕೆ. (ಸಂ)., ೧೯೭೦, ರಾಯಚೂರು ಡಿಸ್ಟ್ರಿಕ್ಟ್ ಗ್ಯಾಜಿಟಿಯರ್, ಪುಟ-೩೦
೧೮. ಅಲ್ಚಿನ್ ಎಫ್.ಆರ್., ೧೯೬೦, ಪಿಕ್ಕಿಹಾಳ್ ಎಕ್ಸ್‌ಕವೇಷನ್ಸ್, ಎಪಿಜಿಎ ಸಿರಿ, ನಂ-೧

ಚರ್ಚಿಸಲಾಯಿತು. ೧೮೭೦ ಮತ್ತು ೧೮೮೦ರ ಅವಧಿಯಲ್ಲಿ ಭಾರತೀಯ ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಾಗಿದ್ದ ರಾಬರ್ಟ್ ಬ್ರೂಸ್ ಫೋಟ್‌ರವರು ತಮ್ಮ ಭೂ ವಿಜ್ಞಾನ ಅನ್ವೇಷಣೆಯ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಹಂಪಿ, ಕೊಪ್ಪಳ, ಬಳ್ಳಾರಿ ಸುತ್ತಮುತ್ತಲಿನ ಅಂದರೆ ನಿಂಬಾಪುರ, ಹಂಪಸಾಗರ, ಹಳಕುಂದಿ, ಸಂಗನಕಲ್ಲು ಮೊದಲಾದ ಸಂಸ್ಕೃತಿಗಳ ಪ್ರಾಚೀನ ನೆಲೆಗಳನ್ನು ಶೋಧಿಸಿ ಅನೇಕ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಿದರು. ಈ ಪ್ರಾಚ್ಯವಸ್ತುಗಳನ್ನು ೧೯೦೪ರಲ್ಲಿ ಮದರಾಸ್ ಸರ್ಕಾರವು ಪಡೆದುಕೊಂಡು ಮದ್ರಾಸ್ ಮ್ಯೂಜಿಯಂನಲ್ಲಿರಿಸಿದೆ.[೧೯] ಇವುಗಳನ್ನು ಇಂದಿಗೂ ಮ್ಯೂಜಿಯಂನಲ್ಲಿ ಕಾಣಬಹುದಾಗಿದೆ.

೧೯೬೫ರ ಸಮಯದಲ್ಲಿ ಪುಣೆಯ ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರ್ಯಾಜುಯೇಟ್ ಆ್ಯಂಡ್ ರೀಸರ್ಚ್ ಇನ್ಸಿಟ್ಯೂಟ್‌ನ ಪುರಾತತ್ವ ಶಾಸ್ತ್ರ ವಿಭಾಗದ ಝುಡ್. ಡಿ. ಅನ್ಸಾರಿಯವರು ತುಂಗಭದ್ರಾ ನದಿ ದಂಡೆಯ ಮೇಲಿರುವ ನಿಟ್ಟೂರು (ಶಿರಗುಪ್ಪ ತಾ)ನಲ್ಲಿ ಆದಿ ಹಳೆಯ ಶಿಲಾಯುಗದ ಮಹತ್ವದ ಕಲ್ಲಿನ ಉಪಕರಣಗಳನ್ನು ಮತ್ತು ಸಮಕಾಲೀನ ಪ್ರಾಣಿಗಳ ಪಡಿಹಚ್ಚುಗಳನ್ನು ಶೋಧಿಸಿದರು.[೨೦] ೧೯೩೫ರ ಡಿಸೆಂಬರ್ ಮತ್ತು ೧೯೩೬ರ ಜನವರಿ ತಿಂಗಳಲ್ಲಿ ಹೈದರಾಬಾದ್ ಆರ್ಕಿಯಾಲಜಿ ಇಲಾಖೆಯ ನಿರ್ದೇಶಕರಾಗಿದ್ದ ಯಜ್ದಾನಿಯವರು ಈ ಪ್ರದೇಶದಲ್ಲಿ ಅನ್ವೇಷಣಾ ಕಾರ್ಯನಡೆಸಿದರು.[೨೧] ಈ ಶೋಧನೆಗಳ ಹಿನ್ನೆಲೆಯಲ್ಲಿ ವಿಶೇಷವಾಗಿ ಕೊಪ್ಪಳ-ಗಂಗಾವತಿ ಪ್ರದೇಶದಲ್ಲಿ ನೂತನ ಶಿಲಾಯುಗದ, ಕಬ್ಬಿಣ ಯುಗದ ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದ ಇನ್ನಷ್ಟು ನೆಲೆಗಳನ್ನು, ಸಾಂಸ್ಕೃತಿಕ ಅವಶೇಷಗಳನ್ನು ಪ್ರಾಗಿತಿಹಾಸ ಕಾಲದ ವರ್ಣ ಚಿತ್ರ ಗವಿಗಳನ್ನು ಮತ್ತು ಬಂಡೆ ಚಿತ್ರಗಳನ್ನು, ಹೈದ್ರಾಬಾದ್ ಸಂಸ್ಥಾನದ ಭೂವಿಜ್ಞಾನ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಕ್ಯಾಪ್ಟನ್ ಲಿಯೋನಾರ್ಡ್‌ಮನ್,[೨೨] ಗೋರ್ಡನ್ ಡಿ.ಹೆಚ್.[೨೩] ಅಲ್ಚಿನ್, ಎಫ್.ಆರ್.[೨೪] ಮತ್ತು ಅ. ಸುಂದರ[೨೫] ಅವರುಗಳು ಬೆಳಕಿಗೆ ತಂದು ಲೇಖನಗಳನ್ನು ಪ್ರಕಟಿಸಿದ್ದಾರೆ. ವಿಶೇಷವಾಗಿ ಈಚಿನ ದಶಕಗಳಲ್ಲಿ ಅ ಸುಂದರ ಅವರ ಕಾರ್ಯ ಗಮನಾರ್ಹವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಕೊಪ್ಪಳ ಸುತ್ತಮುತ್ತಲ ಪ್ರದೇಶಗಳಲ್ಲಿ ಹೊಸಹೊಸ ನೆಲೆಗಳನ್ನು ಶೋಧಿಸಿದ್ದಾರೆ. ಡಾ. ಶರಣಬಸಪ್ಪ ಕೋಲ್ಕಾರ್ ಅವರೂ ಕೂಡ ಶೋಧನೆಯ ದೃಷ್ಟಿಯಿಂದ ಈ ಭಾಗದಲ್ಲಿ

---

೧೯. ಪೂಟ್ ಆರ್.ಬಿ., ಪೂರ್ವೋಕ್ತ,
೨೦. ಅನ್ಸಾರಿ ಝುಡ್ ಡಿ.,೧೯೭೦, ಪೆಬಲ್ ಟೂಲ್ಸ್ ಫ್ರಾಮ್ ನಿಟ್ಟೂರು, ಮೈಸೂರು ಸ್ಟೇಟ್ ಐ.ಎ.ಸಂ-೪
೨೧. ಅಭಿಶಂಕರ್ ಕೆ. (ಸಂ)., ೧೯೭೦, ರಾಯಚೂರು ಡಿಸ್ಟ್ರಿಕ್ಟ್ ಗ್ಯಾಜಿಟಿಯರ್, ಪುಟ-೧೧
೨೨. ಮನ್ ಎಲ್ (ಸಂ)., ೧೯೩೪, ಜರ್ನಲ್ ಆಫ್ ದಿ ಹೈದಾರಾಬಾದ್ ಜಿಯಾಲಾಜಿಕಲ್ ಸರ್ವೆ, ಸಂ-೨, ಭಾಗ-೧, ಸಂ-೧೫, ಪುಟ-೨೨೫, ೩೦
೨೩. ಗೋರ್ಡನ್ ಡಿ.ಎಚ್., ೧೯೫೧, ಆರ್ಕಿಯಾಲಜಿಕಲ್ ಸೈಟ್ಸ್ ಇನ್ ದಿ ಬೆಣಕಲ್ ಫಾರೆಸ್ಟ್ ಹೈದಾರಾಬಾದ್, ಮ್ಯಾನ್, ನಂ-೧೧೪, ಪುಟ-೯೭೯
೨೪. ಅಲ್ಚಿನ್ ಎಫ್.ಆರ್., ೧೯೫೫, ಆರ್ಕಿಯಾಲಜಿಕಲ್ ಸ್ಟೇಟ್ ಇನ್ ಬೆಣಕಲ್, ಫಾರೆಸ್ಟ್ ಹೈದಾರಾಬಾದ್, ಮ್ಯಾನ್, ಸಂ-೫೫, ಪುಟ-೯೭,೯
೨೫. ಸುಂದರ ಅ., ಐ.ಎ.ಆರ್, ೧೯೬೧-೬೨ ಮತ್ತು ೧೯೭೯-೯೦, ೧೯೭೩, ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು ಕ.ಭಾ.೬೦, ಪುಟ-೬೪,೭೫

ಪ್ರಸ್ತುತ ಶೋಧಿತ ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಶೋಧಿಸಿದ ನೆಲೆಗಳಲ್ಲಿ ನಾಲ್ಕನ್ನು ವೈಜ್ಞಾನಿಕ ಕ್ರಮದಿಂದ ಉತ್ಖನನ ಮೂಡಲಾಗಿದೆ. ಅವುಗಳು ಮಸ್ಕಿ,[೨೬] ಪಿಕ್ಕಿಹಾಳ್,[೨೭] ತೆಕ್ಕಲಕೋಟೆ,[೨೮] ಮತ್ತು ಸಂಗನಕಲ್ಲು,[೨೯] ಇವುಗಳೆಲ್ಲವುಗಳ ಶೋಧನೆಯ ಕಾರ್ಯ ಪ್ರವೃತ್ತಿಯಿಂದ ನೂತನ ಶಿಲಾಯುಗ ಮತ್ತು ಇತಿಹಾಸ ಪ್ರಾರಂಭ ಕಾಲದ ಜೀವನ ಶೈಲಿಯನ್ನು ಇಲ್ಲಿ ಸವಿವರವಾಗಿ ವಿವೇಚಿಸಲಾಗಿದೆ. ಇದರಿಂದ ಕೊಪ್ಪಳ ಗಂಗಾವತಿ ಪ್ರದೇಶಗಳಲ್ಲಿ ಗಮನಾರ್ಹವಾದ ಪರಿಶೀಲನೆಯಿಂದ ಆದಿ ಹಳೆ ಶಿಲಾಯುಗದ ಕಾಲದಿಂದ ಇತಿಹಾಸ ಪ್ರಾರಂಭ ಕಾಲದವರೆಗಿನ ಜನಜೀವನದ ರೂಪುರೇಷೆಗಳನ್ನು ಸಮರ್ಪಕವಾಗಿ ಅರಿಯಲು ಮುಖ್ಯವಾದ ಅಂಶಗಳಾಗಿವೆ.

ಹಳೆ ಶಿಲಾಯುಗದ ಸಂಸ್ಕೃತಿ

ಕೊಪ್ಪಳ-ಗಂಗಾವತಿ ಪ್ರದೇಶದಲ್ಲಿ ಈ ಸಂಸ್ಕೃತಿಯ ನಿಟ್ಟೂರು ಮತ್ತು ಹುಣಸಗಿ ನೆಲೆಗಳು ಕಂಡುಬಂದಿದೆ. ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನಲ್ಲಿ ತುಂಗಭದ್ರ ನದಿಯ ಬಲ ತೀರಿದಲ್ಲಿರುವ ನಿಟ್ಟೂರು ಒಂದು ಮಹತ್ವದ ನೆಲೆಯಾಗಿದ್ದು, ಇಲ್ಲಿ ಅನಿರೀಕ್ಷಿತವಾಗಿ ಹಾಗೂ ಅಪರೂಪವಾಗಿ ಮೊದಲನೆಯ ಬಾರಿಗೆ ಸಾಮಾನ್ಯವಾಗಿ ವರ್ಣಿಸಲಾದ ಬೆನಕನಲ್ಲಿನಿಂದ (ಉಂಡೆಕಲ್ಲು) ಮಾಡಿದ ಮಚ್ಚಿನಂತಹ ಆಯುಧ (ಚಾಪರ)ಗಳು ದೊರೆತವು. ಇವುಗಳೊಡನೆ ಸಸ್ತನಿ ಪ್ರಾಣಿಗಳಾದ ಆಕಳು, ಎತ್ತುಗಳು, ಅಸ್ತಿಗಳ ಪಡಿಯಚ್ಚುಗಳು ದೊರೆತಿವೆ. ಈ ಆಯುಧಗಳನ್ನು ಕಪ್ಪು-ಹಸಿರು ಶಿಲೆ (ಡೊಲೊರೈಟ್)ನಲ್ಲಿ ಮೇಲ್ಮುಖವಾಗಿ ಚಕ್ಕೆಗಳನ್ನು ಎಬ್ಬಿಸುವ ತಾಂತ್ರಿಕ ವಿಧಾನದಿಂದ ಮಾಡಲಾಗಿದೆ. ಇವು ದಕ್ಷಿಣ ಭಾರತದಲ್ಲೆಲ್ಲಾ ಹೆಚ್ಚಾಗಿ ಕಂಡುಬಂದ ಕೈಕೊಡಲಿ, ಸೀಳುಗತ್ತಿ, ಸಂಪ್ರದಾಯಕ್ಕೆ ಹೊಂದದೆ. ಪಾಕಿಸ್ತಾನ ಪ್ರದೇಶದ ಸೋನನದಿ ಬಯಲಿನಲ್ಲಿ ಹೆಚ್ಚಾಗಿ ದೊರೆತಿರುವ ಮಚ್ಚುಗತ್ತಿಯಂತಹ ಶಿಲಾಯುಧಗಳ ಸಂಪ್ರದಾಯದ ಉಪಕರಣಗಳಿಗೆ ಹೋಲುತ್ತವೆ. ದಕ್ಷಿಣ ಭಾರತದಲ್ಲಿ ಈ ಪ್ರಕಾರದ ಆದಿ ಹಳೆಯ ಶಿಲಾಯುಗದ ಈ ಸಂಸ್ಕೃತಿಯ ನೆಲೆ ದೊರೆತದ್ದು, ಇದೆ ಪ್ರಥಮ. ಹೀಗೆ ಈ ಪ್ರದೇಶದಲ್ಲಿ ಒಂದು ಭಿನ್ನ ಸಂಸ್ಕೃತಿಯ ನೆಲೆ ಇರುವುದು ಗಮನಾರ್ಹವಾಗಿದೆ.[೩೦] ಕೊಪ್ಪಳ-ಗಂಗಾವತಿ ತಾಲೂಕು ಪ್ರದೇಶದ ಉತ್ತರಕ್ಕೆ ಇರುವ ಕೃಷ್ಣಾನದಿಯ ಉಪನದಿಯಾದ ಮಲಪ್ರಭಾ ನದಿಯ ಬಯಲು ಪ್ರದೇಶದಲ್ಲಿ ಸುಮಾರು ೧೯ ನೆಲೆಗಳು[೩೧] ಹಾಗೂ ಇವುಗಳ ಉತ್ತರಕ್ಕೆ ಅಂದರೆ ಬಾಗಲಕೋಟೆ, ಅಥಣಿ ಪ್ರದೇಶದ ಕೃಷ್ಣಾನದಿಯ ಬಯಲು

---

೨೬. ಥಾಪರ್ ಬಿ.ಕೆ., ೧೯೫೭, ಮಸ್ಕಿ, ಏ ಕ್ಯಾಲ್ಕೋಲಿಥಿತ್ ಸೈಟ್ ಆಫ್ ಸದರ್ನ್ ಡೆಕ್ಕನ್ ಎ.ಐ.ನಂ-೧೩

೨೭. ಅಲ್ಚಿನ್ ಎಫ್.ಆರ್., ೧೯೫೫, ಆರ್ಕಿಯಾಲಜಿಕಲ್ ಸ್ಟೇಟ್ ಇನ್ ಬೆಣಕಲ್, ಫಾರೆಸ್ಟ್ ಹೈದಾರಾಬಾದ್, ಮ್ಯಾನ್, ಸಂ-೫೫, ಪುಟ-೯೭,೯

೨೮. ನಾಗರಾಜರಾವ್ ಎಂ.ಎಸ್ ಮತ್ತು ಮಲ್ಹೋತ್ರ ಕೆ.ಸಿ., ೧೯೬೫, ದಿ ಸ್ಟೋನ್ ಏಜ್ ಹಿಲ್‌ಡ್ವೆಲ್ಲರ್ಸ್ ಆಫ್ ತೆಕ್ಕಲಕೋಟೆ

೨೯. ಅನ್ಸಾರಿ ಝಡ್ ಡಿ., ಮತ್ತು ನಾಗರಾಜರಾವ್ ಎಂ.ಎಸ್., ೧೯೬೯, ಎಕ್ಸಕಾವೇಷನ್ಸ್ ಎಟ್ ಸಂಗನಕಲ್ಲು ೧೯೬೪-೬೫

೩೦. ತುಂಗ ಮತ್ತು ಭದ್ರಾ ನದಿಯ ಬಯಲು ಪ್ರದೇಶದಲ್ಲಿ ೧೯೮೦ ದಶಕದ ಸುರುವಿನಲ್ಲಿ ಕೆ.ಪಿ.ಪೂಣಚ್ಚ೯೧೯೯೦, ಆರ್ಕಿಯಾಲಜಿ ಆಫ್ ಮಲ್ನಾಡ ರೀಜನ್

೩೧. ಜೋಶಿ ಆರ್.ವಿ., ೧೯೫೫,ಪಿಲೆಸ್ಟೋಸೀಸ್ ಸ್ಟಡೀಸ್ ಇನ್ ದಿ ಮಲಪ್ರಭಾ ಬೇಸಿಸ್, ಪುಟ-೫೧

ಪ್ರದೇಶದಲ್ಲಿ ಸುಮಾರು ೧೨ ನೆಲೆಗಳು[೩೨] ಹುಣಸಗಿ ಸಮೀಪದಲ್ಲಿಯೇ ಇಂತಹ ಇನ್ನು ಕೆಲವು ನೆಲೆಗಳು ಶೋಧವಾಗಿವೆ. ಹಾಗೂ ಶೋಧಿಸುವ ಕಾರ್ಯ ಮುಂದುವರೆಯುವುದು ಮಹತ್ವದ್ದಾಗಿದೆ. ಕೊಪ್ಪಳ-ಗಂಗಾವತಿ ಈ ಪ್ರದೇಶದಲ್ಲಿ ಆದಿ ಹಳೆಯ ಶಿಲಾಯುಗದ ಜನರ ವಾಸ್ತವ್ಯದ ಮೂಲ ನೆಲೆಗಳಲ್ಲಿ ಈ ನೆಲೆಯು ಒಂದಾಗಿದ್ದು. ಇಲ್ಲಿ ಅವರ ವಸತಿಯ ಕುರುಹುಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಸಂಸ್ಕೃತಿಯ ಜನ ನಿಸರ್ಗದಲ್ಲಿ ದೊರೆಯುವ ಆಹಾರ ಸಂಪಾದನೆ ಮಾಡುತ್ತಾ ನೈಸರ್ಗಿಕ ಗುಹೆಗಳಲ್ಲಿ ವಾಸಸ್ಥಾನವಾಗಿ ಕಂಡುಕೊಂಡಿದ್ದರು.

ಮಧ್ಯ ಹಳೆಶಿಲಾಯುಗ ಸಂಸ್ಕೃತಿ

ಕೃಷ್ಣಾ-ತುಂಗಭದ್ರಾ ಪ್ರದೇಶಗಳಲ್ಲಿ ಮತ್ತು ಮರಳಭಾವಿ ಮೊದಲಾದ ಪ್ರದೇಶಗಳಲ್ಲಿ ಶೋಧಿಸಿದ ನೆಲೆಗಳು ಮಧ್ಯ ಹಳೆಯಶಿಲಾಯುಗ ಸಂಸ್ಕೃತಿಗೆ ಸೇರಿದವುಗಳಾಗಿವೆ. ನವಶಿಲಾಯುಗ ಸಂಸ್ಕೃತಿಯ ಆಯುಧಗಳ ಜೊತೆಗೆ ಈ ಸಂಸ್ಕೃತಿಗೆ ಸೇರಿದ ತೊಗಟೆಯುಳ್ಳ ಉಂಡೆಕಲ್ಲಿನಲ್ಲಿ ಮಾಡಿದ ಹರೆಯುವ ಚಕ್ಕೆಗಳು, ಮೊನೆಗಳು ಕೊಪ್ಪಳ-ಹಂಪಿ ಪ್ರದೇಶದ ಸಂಗನಕಲ್ಲಿನಲ್ಲಿ ನಡೆದ ೧೯೬೪ ಉತ್ಖನನ[೩೩]ದಲ್ಲಿ ದೊರೆತಂತವುಗಳು. ಇಲ್ಲಿಯ ಉಪಕರಣಗಳ ಪ್ರಬೇಧಗಳಲ್ಲಿ ಬಂದಿಯಂಚಿನಿಂದ ಹರೆಯುವ ಚಕ್ಕೆಗಳು ಹೆಚ್ಚು ಕೆಲವು ಒಂದಕ್ಕಿಂತ ಹೆಚ್ಚಿನ ಅಂಚುಗಳಿಂದ ಹರೆಯಬಹುದಾದ ಬಹುಪಯೋಗಿ ಚಕ್ಕೆಗಳು ದೊರೆತಿವೆ. ಇಂಥ ಉಪಕರಣಗಳಿದ್ದ ರೇವೆಮಣ್ಣಿನಲ್ಲಿಯ ಅವಶೇಷಗಳ ಇಂಗಾಲ-೧೪ ವೈಜ್ಞಾನಿಕ ಕ್ರಮದಿಂದ ಕಾಲಮಾನವನ್ನು ಗೊತ್ತು ಪಡಿಸಲಾಗಿದೆ. ಅದು ಇಂದಿಗಿಂತ ಕನಿಷ್ಠ ೧೦,೦೦೦ ವರ್ಷ ಪೂರ್ವದ್ದು (ಜಾಗತಿಕ ಸಂದರ್ಭದಲ್ಲಿ ಮಧ್ಯಹಳೇ ಶಿಲಾಯುಗದ ಕಾಲವನ್ನು ಇಂದಿಗಿಂತ ಮುಂಚೆ ೨೦ ಸಾವಿರದಿಂದ ೪೦ ಸಾವಿರ ವರ್ಷಗಳ ನಡುವಣ ಅವಧಿ ಎಂದು ಭಾವಿಸಲಾಗುತ್ತದೆ) ಎಂದು ಗುರುತಿಸಲಾಗಿದೆ. ಈ ಸಂಸ್ಕೃತಿಯ ನೆಲೆಗಳು ನದಿ ದಂಡೆಗಳಿಂದ ದೂರದ ಬಯಲುಗಳಿರುವುದರಿಂದ ಈ ಜನರು ಭಿನ್ನ ಭಿನ್ನ ವಾತಾವರಣಗಳಲ್ಲಿ ಜೀವಿಸಲು ಸಮರ್ಥರಿದ್ದರೆಂದು ಕಾಣುತ್ತದೆ.[೩೪] ಈ ಜನರ ವಾಸಸ್ಥಾನಗಳ ಆಧಾರವನ್ನಾಗಿಟ್ಟುಕೊಂಡು ತಮ್ಮ ನೆಲೆಗಳು ನದಿ ಪ್ರದೇಶದಿಂದ ದೂರದ ಸ್ಥಳಗಳಲ್ಲಿ ಉತ್ತಮವಾಗಿ ಕಂಡುಕೊಂಡಂತಹ ಪರಿಸರದಲ್ಲಿ ಮಾತ್ರವಲ್ಲದೇ ವಾತಾವರಣದ ದೃಷ್ಟಿಯಿಂದ ಲೆಕ್ಕಿಸದೆ ಕಾಲಗಳಿಗೆ ತಕ್ಕಂತೆ ಹೊಂದಿಕೊಳ್ಳುವ ಮನಸ್ಥಿತಿಯನ್ನು ಇವರು ಹೊಂದಿದ್ದರು ಎಂದು ಹೇಳಬಹುದು.

ಅಂತ್ಯ ಹಲೆಶಿಲಾಯುಗ ಸಂಸ್ಕೃತಿ

ಹಳೆ ಶಿಲಾಯುಗ ಸಂಸ್ಕೃತಿಯಲ್ಲಿ ಈ ಹಂತದ ಬಗ್ಗೆ ಮಾಹಿತಿಯೂ ಅತೀ ಕಡಿಮೆಯಾಗಿ ತಿಳಿದುಬಂದಿದೆ. ಕೊಪ್ಪಳ-ಗಂಗಾವತಿ ಪ್ರದೇಶದ ಸಮೀಪದಲ್ಲಿ ಪದ್ದಯ್ಯನವರು ಸಾಲ್ವಡಗಿಯ ಹತ್ತಿರ ಮೇರಲಭಾವಿಯಲ್ಲಿ ಈ ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ಒಂದು ನೆಲೆಯನ್ನು

---

೩೨. ಪಪ್ಪು ಆರ್.ಎಸ್., ೧೯೭೪, ಪಿಲೆಸ್ಟೊಸೀನ್ ಸ್ಟಡೀಸ್ ಇನ್ ದಿ ಅಪ್ಪರ್ ಕೃಷ್ಣಾ ಬೇಸಿನ್
೩೩. ಪದ್ದಯ್ಯ ಕೆ., ೧೯೮೨, ದಿ ಅಶ್ಯೂಲಿಯನ್ ಕಲ್ಚರ್ ಆಫ್ ದಿ ಹುಣಸಗಿ ವ್ಯಾಲಿ, ಪುಟ-೩೩
೩೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೦

ಶೋಧಿಸಿದರು.[೩೫] ೧೯೬೯ರಲ್ಲಿ ಅವರು ಮೇರಲಭಾವಿ, ಗುಲಬಾಲ್, ಬೆನಹಟ್ಟಿ ಮತ್ತು ಹುಣಸಗಿಯಲ್ಲಿ ಹೆಚ್ಚಿನ ಅನ್ವೇಷಣೆ ಮಾಡಿದಾಗ ಮಧ್ಯ ಹಳೆಶಿಲಾಯುಗದ ಆನಂತರ ಮತ್ತು ಸೂಕ್ಷ್ಮ ಶಿಲಾಯುಗದ ಆನಂತರ ಮತ್ತು ಸೂಕ್ಷ್ಮ ಶಿಲಾಯುಗದ ಹಿಂದಿನ ಹಂತದಲ್ಲಿ ಈ ಸಂಸ್ಕೃತಿ ಇದ್ದದ್ದು ಗೊತ್ತಾಯಿತು. ಈ ಸಂಸ್ಕೃತಿಯ ಹಿಮ ಯುಗದ ಹಾಗೂ ಪ್ರಚಲಿತ ಯುಗದ ಪ್ರಾರಂಭದ ಕಾಲದ್ದೆಂದು ತರ್ಕಿಸಲಾಯಿತು.[೩೬] ಈ ಕಾಲವನ್ನು ಪ್ರಚಲಿತ ಕಾಲಮಾನಕ್ಕೆ ಹೋಲಿಸಿದಾಗ ಪ್ರಾರಂಭದ ಹಂತದ್ದೆಂದು ಆಧಾರಗಳನ್ನಿಟ್ಟುಕೊಂಡು ಊಹಿಸಲಾಗಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಕೊಪ್ಪಳ-ಗಂಗಾವತಿ ಪ್ರದೇಶದ ಸಂಗನಕಲ್ಲಿನಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಯು ಕಂಡುಬಂದಿದ್ದು, ಇಲ್ಲಿಯ ನೂತನ ಶಿಲಾಯುಗಕ್ಕಿಂತ ಹಿಂದಿನ ಕಾಲದ ಸಾಂಸ್ಕೃತಿಕ ಪದರುಗಳಲ್ಲಿ ಈ ಸಂಸ್ಕೃತಿಯ ಉಪಕರಣಗಳು ಸಿಕ್ಕಿವೆ. ಆದ್ದರಿಂದ ಈ ಸಂಸ್ಕೃತಿಯು 'ಈಚಿನ ಯುಗದ' ಪ್ರಾರಂಭ ಕಾಲದ ನಂತರದ್ದು ಎಂದು ಸಮಾನಾಂತರ ಅಂಚುಳ್ಳ ನೀಳ ಚುಕ್ಕೆಗಳು, ಅಲ್ಲದೆ ಮೊನೆಗಳು, ಅರ್ಧಚಂದ್ರಾಕೃತಿಯುಂತಹ ತ್ರಿಕೋನಾಕಾರದ ಮತ್ತು ದ್ವಿಬಾಹು ಸಮಾನಾಂತರ ಚತುರ್ಭುಜಾಕೃತಿಯಂತಹ ಮೊದಲಾದ ಉಪಕರಣಗಳ ಆಕೃತಿಗಳಿವೆ. ಇವೆಲ್ಲವು ಸಾಮಾನ್ಯವಾಗಿ ನೀಳಚುಕ್ಕೆಗಳನ್ನು ತುಂಡು ಮಾಡಿ ಅವುಗಳ ಅಂಚುಗಳನ್ನು ಅವಶ್ಯವಾದ ರೀತಿಯಲ್ಲಿ ತಂದು ಉಪಕರಣಗಳನ್ನಾಗಿ ಮಾಡಲಾಗಿದೆ.

ಸಾಮಾನ್ಯವಾಗಿ ಈ ಉಪಕರಣಗಳನ್ನು ಸಮೀಪದಲ್ಲಿಯೇ ಹೆಚ್ಚಾಗಿ ದೊರೆಯುವ ಬೆಣಚುಕಲ್ಲು (ಕ್ವಾರ್ಟ್ಜ್) ಮತ್ತು ಉತ್ತಮ ಜಾತಿ ಕಲ್ಲುಗಳಾದ ಜಾಸ್ಪರ್ ಹಾಗೂ ಚಟ್ಟಿಕಲ್ಲುಗಳಲ್ಲಿ ಮಾಡಿದ್ದಾಗಿದೆ. ಈ ಶಿಲಾಯುಗದ ಉಪಕರಣಗಳನ್ನು ಸಾಧಾರಣವಾಗಿ ಸಣ್ಣ ಪ್ರಮಾಣದ ಗಾತ್ರವನ್ನು ಹೊಂದಿದ್ದ, ೧ ಸೆಂ.ಮೀ. ಹಾಗೂ ೫. ಮಿ.ಮೀ. ಉದ್ದಗಲವಾಗಿ ಹೆಚ್ಚೇನು ಕಂಡುಬರುವುದಿಲ್ಲ. ಇಂತಹ ಸಣ್ಣ ಪ್ರಮಾಣದ ಆಕಾರಗಳ ಆಧಾರದ ಮೂಲಕ ಈ ಸಂಸ್ಕೃತಿಯನ್ನು ಸೂಕ್ಷ್ಮಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಸಿದ್ದಮೂಡಿದ ಒಂದು ಗಿಡದ ರೆಂಬೆಯಲ್ಲಿ ಅವಶ್ಯವಿದ್ದಷ್ಟನ್ನು ಆಳವಾದ ಗೆರೆಗಳನ್ನು ಮೂಡಿಸಿ ಆ ಗೆರೆಯಲ್ಲಿ ಈ ಸಣ್ಣಸಣ್ಣ ಉಪಕರಣಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದನ್ನು ಜೋಡಿಸಿ ವಿವಿಧ ಪ್ರಕಾರದ ವ್ಯವಸಾಯಕ್ಕೆ ಉಪಯೋಗಿಸಲಾಗುತ್ತಿತ್ತು. ಬೇಟೆಯ ದೃಷ್ಟಿಯಲ್ಲಿ ಈ ಸೂಕ್ಷ್ಮಯುಗದ ಸಣ್ಣ ಸಣ್ಣ ಮೊಣಚಿನ ಆಯುಧಗಳನ್ನು ತಮ್ಮ ಕಟ್ಟಿಗೆಯ ತುದಿಗಳಿಗೆ ಕಟ್ಟಿಕೊಂಡು ಪ್ರಾಣಿಗಳನ್ನು ಬಲಿತೆಗೆಯುವಲ್ಲಿ ಉತ್ತಮ ಸಹಾಯವಾಗುತ್ತಿರಬಹುದು. ಈ ಸಂಸ್ಕೃತಿಯಲ್ಲಿ ಬೇರೆ ಬೇರೆಯ ಇಂಥ ನೆಲೆಗಳ ಅಧ್ಯಯನದಿಂದ ಮೂರು ಹಂತಗಳನ್ನು ಗುರುತಿಸಲಾಗಿದೆ. ಕ್ರಿ.ಪೂ. ೫೦೦೦, ಮೂರನೇ ಹಂತ ಸುಮಾರು

---

೩೫. ಪದ್ದಯ್ಯ ಕೆ., ೧೯೮೭, ದಿ ಅಶ್ಯೂಲಿಯನ್ ಕಲ್ಚರ್ ಆಫ್ ದಿ ಹುಣಸಗಿ ವ್ಯಾಲಿ, ಪುಟ-೩೩
೩೬. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೦

ಕ್ರಿ.ಪೂ.೩೦೦೦, ಕಾಲಮಾನವೆಂದು ತರ್ಕಿಸಲಾಗಿದೆ.[೩೭] ಈ ಹಿಂದಿನ ಯುಗದ ಸಂಸ್ಕೃತಿಗಿಂತ ಈ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಯ ಜೀವನ ಪದ್ಧತಿಯು ಭಿನ್ನವಾಗಿ ನಿಲ್ಲುತ್ತದೆ. ಏಕೆಂದರೆ ಈ ಮೊದಲು ಜನಜೀವನ ಪದ್ಧತಿಯೂ ಒಂದು ನೆಲೆಯನ್ನಾಗಿ ತಮ್ಮಲ್ಲಿ ತಾವು ಕಂಡುಕೊಳ್ಳದೇ ಇರುವುದು ತಿಳಿದುಬರುತ್ತದೆ. ಆದರೆ ಈ ಸೂಕ್ಷ್ಮಶಿಲಾಯುಗದಲ್ಲಿ ಬಹುಮಟ್ಟಿಗೆ ಒಂದು ಪ್ರದೇಶದಲ್ಲಿ ತಮ್ಮ ನೆಲೆಯಾಗಿ ನಿಂತು ನಿಸರ್ಗದ ಕೆಲವು ಗಿಡ ಮರಗಳನ್ನು ಬಳಸಿಕೊಂಡು ಗುಡಿಸಲಾಕಾರದ ಆಸರೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರೆಂದು ಕಂಡುಕೊಳ್ಳಲಾಗಿದೆ. ಆಹಾರ ಪದ್ಧತಿಯಲ್ಲಿ ಬಿತ್ತನೆಯ ಒಂದು ಅಂಶವಾಗಿ ಬೀಜಬಿತ್ತಿ ಬೆಳೆಯುವ ಕ್ರಮಪದ್ಧತಿಯನ್ನು ಸ್ವಲ್ಪಮಟ್ಟಿಗೆ ಆರಂಭಿಸಿದರು ಎನ್ನಬಹುದು.

ಬಿತ್ತನೆಯ ನಂತರ ಬೆಳೆದ ಬೆಳೆಯನ್ನು ಹಾಗೂ ಸಂಗ್ರಹಿಸಿದ ದವಸ ಧಾನ್ಯಗಳನ್ನು ಮುಂದಾಲೋಚನೆಯ ದೃಷ್ಟಿಯಿಂದ ಕೂಡಿಡಲು ವಾಸಸ್ಥಳಗಳಲ್ಲಿ ತಗ್ಗು (ಗುಂಡಿ)ಗಳನ್ನು ತೆಗೆದು ಅದರಲ್ಲಿ ದವಸ ಧಾನ್ಯಗಳನ್ನು ಕೆಡದಂತೆ ಇಡಲಾಗುತ್ತಿತ್ತು. ಇಲ್ಲವೆ, ಮಣ್ಣಿನಿಂದ ಮಾಡಿದ ಮಡಿಕೆ-ಕುಡಿಕೆಗಳನ್ನು ಬಿಸಿಲಿನಲ್ಲಿ ಒಣಗಿಸಿದ ನಂತರ ಆಹಾರಗಳನ್ನು ಜೋಪಾನವಾಗಿ ಈ ಪಾತ್ರೆಗಳಲ್ಲಿ ಕೂಡಿಡಲಾಗುತ್ತಿತ್ತು. ಇಂತಹ ಜನಜೀವನ ಪದ್ಧತಿಯ ಜೊತೆಯಲ್ಲಿ ಶವಸಂಸ್ಕಾರ ಪದ್ಧತಿಯೂ ಆರಂಭವಾಗಿತ್ತು. ಇವುಗಳ ಆಧಾರದ ಮೇಲೆ ಸಾಮಾಜಿಕ ಕಾಳಜಿಯಿಂದ ಮೂಲಭೂತ ಅಂಶಗಳು ಈ ಹಂತದಲ್ಲೇ ಕಾರ್ಯೋನ್ಮುಖವಾಗಿದ್ದುದು ತಿಳಿದುಬರುತ್ತದೆ.

ನವಶಿಲಾಯುಗ ಸಂಸ್ಕೃತಿ

ಸಂಸ್ಕೃತಿಯಲ್ಲಿ ಆಯುಧ ಉಪಕರಣಗಳನ್ನು ತಿದ್ದಿ-ತೀಡಿ, ಉಜ್ಜಿನಯಗೊಳಿಸಿ ಬಳಸುವ, ನದಿ ತೀರದ ಫಲವತ್ತಾದ ಭೂಮಿಯಲ್ಲಿ ನೆಲೆಸುವಿಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ನಾಯಿ, ಕುರಿ, ಆಕಳು, ಎತ್ತು, ಎಮ್ಮೆ, ಕುದುರೆ ಮೊದಲಾದ ಸಾಕು ಪ್ರಾಣಿಗಳನ್ನು ಸಾಕುವಿಕೆ, ವ್ಯವಸಾಯ, ಬಿಸಿಲಿನಲ್ಲಿ ಒಣಗಿಸಿದ ಬೂದುಬಣ್ಣದ ಪಾತ್ರೆಗಳನ್ನು ಮಾಡುವುದು, ಇವೆ ಮೊದಲಾದ ಲಕ್ಷಣಗಳಿಂದ ಕೂಡಿದ ಸಂಸ್ಕೃತಿಗೆ ನವಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಹಂತದ ಅತೀ ಮುಖ್ಯ ಲಕ್ಷಣವೆಂದರೆ, ಶಿಲಾಯುಧಗಳ ಜೊತೆಗೆ ತಾಮ್ರ ಅಥವಾ ಕಂಚಿನ ಆಯುಧಗಳ ಬಳಕೆ, ಕೆಲವೆಡೆ ಇವುಗಳ ಜೊತೆಗೆ ಸೂಕ್ಷ್ಮ ಶಿಲಾಯುಧಗಳನ್ನು ಬಳಸುತ್ತಿದ್ದುದರಿಂದ ಈ ಹಂತದ ಸಂಸ್ಕೃತಿಯನ್ನು ಕಂಚಿನ ಅಥವಾ ಶಿಲಾತಾಮ್ರಯುಗವೆಂದು ಕರೆಯಲಾಗಿದೆ.[೩೮]

ತೆಕ್ಕಲಕೋಟೆ, ಸಂಗನಕಲ್ಲು (ಬಳ್ಳಾರಿ ಜಿಲ್ಲೆ) ತಾವರೆಗೆರೆ (ಕುಷ್ಟಗಿ) ಮಸ್ಕಿ, ಪಿಕ್ಕಿಹಾಳ್ ಮತ್ತು ವಟಗಲ್ (ರಾಯಚೂರು ಜಿ) ಈ ಸಂಸ್ಕೃತಿಯ ಮಹತ್ವದ ನೆಲೆಗಳಾಗಿವೆ. ತಾವರೆಗೆಯನ್ನು ಬಿಟ್ಟು ಉಳಿದೆಲ್ಲಾ ನೆಲೆಗಳಲ್ಲಿ ಉತ್ಖನನ ಕೈಗೊಂಡಿದ್ದರಿಂದ ಈ ಪ್ರದೇಶದ ನವಶಿಲಾಯುಗ ಸಂಸ್ಕೃತಿಯ ಬಗ್ಗೆ ತಿಳಿದುಬರುತ್ತದೆ.

---

೩೭. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೧
೩೮. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೨

ಸಂಗನಕಲ್ಲು ಗ್ರಾಮದ (ಬಳ್ಳಾರಿ ಜಿ) ನೆಲೆಯು ಕರ್ನಾಟಕದ ನವ ಶಿಲಾಯುಗದ ಮತ್ತು ತಾಮ್ರ ಶಿಲಾಯುಗದ ಸಂಸ್ಕೃತಿಗಳನ್ನು ಚಿತ್ರಿಸಲು ಕೆಲವೊಂದು ಮಹತ್ವದ ಅಂಶಗಳನ್ನು ನೀಡಿದೆ. ರಾಬರ್ಟ್ ಬ್ರೂಸ್ ಪೂಚ್ ಮೊದಲಿಗೆ ಈ ನಿವೇಶನವನ್ನು ಶೋಧಿಸಿದರು.[೩೯] ಪುಟೆಯ ಡೆಕ್ಕನ್ ಕಾಲೇಜಿನ ಝುಡ್ ಡಿ. ಅನ್ಸಾರಿ ಮತ್ತು ಎಂ.ಎಸ್. ನಾಗರಾಜರವರು (೧೯೬೯) ಇಲ್ಲಿ ವಿವರಣಾಪೂರ್ಣವಾಗಿ ಉತ್ಖನನ ಕಾರ್ಯ ಕೈಗೊಂಡರು. ಇದರಿಂದಾಗಿ ಪೂರ್ವ ಮೆಸೋಲಿತಿಕ್ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಎಂಬ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಹಂತವನ್ನು ಗುರುತಿಸಲಾಗಿದೆ. ಇಲ್ಲಿ ಭೂಗೋಳ, ನೆಲ, ಹವಾಮಾನ ಇದರ ಹಿನ್ನೆಲೆಯಲ್ಲಿ ಉತ್ಖನನ ಕೈಗೊಂಡು ಇಲ್ಲಿಯ ಆಯುಧಗಳನ್ನು ಬಸಾಲ್ಟ್, ಡಯೋರೈಟ್ ಮುಂತಾದ ಶಿಲೆಗಳಿಂದ ಮಾಡಿದ್ದು, ಹರಿತವಾದ ಅಂಚುಗಳು ಆಯುಧ, ಮೊನೆಯುಳ್ಳ ಉಪಕರಣ ಕುಟ್ಟುವ ಅರೆಯುವ ಸಾಧನಗಳು ಅಲ್ಲದೆ ನಯಗೊಳಿಸಿದ ಕಲ್ಲಿನ ಕೊಡಲಿಗಳ ಜೊತೆ ಕೂರಲಗಿನ ಫಲಕಗಳು (ಸೂಕ್ಷ್ಮ ಶಿಲಾಯುಧಗಳು) ದೊರೆತಿದ್ದರಿಂದ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಯೊಂದಿಗೆ ನವಶಿಲಾಯುಗೀನ ಸಂಸ್ಕೃತಿ ಹೇಗೆ ಬೆರೆತುಕೊಂಡಿರಬಹುದೆಂದು ಊಹಿಸಲೂ ಕಷ್ಟಸಾಧ್ಯವಾಗಬುದು.

ಇಲ್ಲಿ ದೊರೆತ ಮಡಿಕೆ ಕುಡಿಕೆಗಳನ್ನು ಜೆಡಿಮಣ್ಣಿನಿಂದ ಮಾಡಿ ಇವುಗಳ ಮೇಲೆ ಮಾಸುಬೂದುವರ್ಣದ್ರವದ ಲೇಪನವನ್ನು ಕೊಟ್ಟದ್ದನ್ನು ಗಮನಾರ್ಹವಾದದ್ದು. ಮೂಳೆಗಳಿಂದ ಮೊನಚಾದ ಡಬ್ಬಣ ತರಹ ಉಪರಕರಣಗಳು, ಕಲ್ಲಿನ ಮತ್ತು ಕಾರ್ಲೇನಿಯನ್ ಮಣಿಗಳು, ಕುದುರೆಯ ಮೂಳೆಗಳು, ದೊರೆತಿವೆ. ನವಶಿಲಾಯುಗದ ನಂತರ ಬೃಹತ್ ಶಿಲಾಯುಗದ ಆರಂಭಕಾಲದ ಸಂಸ್ಕೃತಿಯು ಇಲ್ಲಿ ನಡೆಸಿದ ಉತ್ಖನನದಿಂದ ತಿಳಿಯಲಾಯಿತು. ಮೇಲ್ಪದರಿನಲ್ಲಿ ದೊರೆತ ಬೃಹತ್ ಶಿಲಾಯುಗದ ಅವಶೇಷಗಳಲ್ಲಿ ಕೆಂಪು, ಕಪ್ಪು, ಬಣ್ಣದ ಮಡಿಕೆಗಳು, ಕಬ್ಬಿಣದ ಆಯುಧೋಪಕರಣಗಳು ದೊರೆತಿವೆ. ಇಲ್ಲಿಯ ಉತ್ಖನನದಲ್ಲಿ ತೋರಿಬಂದ ಮುಖ್ಯವಾದವುಗಳಲ್ಲಿ ನೂತನ ಶಿಲಾಯುಗದ ಒಂದು ಗುಡಿಸಲಿನ ಮನೆಯ ಅವಶೇಷ ಮುಖ್ಯವಾಗಿದೆ. ಈ ವೃತ್ತಾಕಾರದ ಗುಡಸಲಿನಲ್ಲಿ ನೆಲಕ್ಕೆ ಗ್ರಾನೈಟ್ ಕಲ್ಲಿನ ಚೂರುಗಳನ್ನು ಹಾಕಿ ದುಮ್ಮಸ್ಸು ಮಾಡಲಾಗಿತ್ತು. ಬಳ್ಳಿ ಮತ್ತು ಗಿಡದ ಕಾಂಡಗಳಿಂದ ಮಾಡಿದ ತಡಿಕೆಗೆ ಕಲಸು ಮಣ್ಣನ್ನು ಮೆತ್ತಿ ಗೋಡೆಯನ್ನು ಮಾಡಿ, ಗುಡಿಸಲಿನ ಮಧ್ಯಮದಲ್ಲಿ ಅತೀ ಎತ್ತರ ಕಂಬವನ್ನು ನೆಟ್ಟು, ಕಂಬದ ತುದಿಯಿಂದ ಗೋಡೆಯ ಮೇಲೆ ಇಳಿ ಬೀಳುವ ಹಾಗೆ ಮಾಡು ಇದ್ದಿತು. ಈ ರೀತಿಯ ನೂತನ ಶಿಲಾಯುಗದ ಜನರ ಒಂದು ಸಾಮಾನ್ಯ ವಾಸದ ಮನೆ ಹೇಗೆ ಇರುತ್ತಿತ್ತು, ಎಂಬುದು ಈ ಶೋಧನೆಯಿಂದ ಖಚಿತವಾಗಿದೆ.[೪೦]

---

೩೯. ಪೂಟ್ ಆರ್.ಬಿ., ಪೂರ್ವೋಕ್ತ

೪೦. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೩

ಈ ಉತ್ಖನನದಲ್ಲಿ ಕೆಳಕಂಡ ಸಂಸ್ಕೃತಿ ಘಟ್ಟಗಳನ್ನು ಈ ಕೆಳಗೆ ಅನುಕ್ರಮವಾಗಿಸಿದೆ.[೪೧]

ತಾಮ್ರ ಶಿಲಾಯುಗದ ಸಂಸ್ಕೃತಿ	ಸು. ಕ್ರಿಪೂ. ೧೦೦೦-೪೦೦
ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ	ಸು.ಕಿ.ಪೂ. ೨೦೦-೫೦
ಆದಿ ಚಾರಿತ್ರಿಕ ಸಂಸ್ಕೃತಿ	ಸು.ಕಿ.ಪೂ. ೫೦-೩೦೦
ಮಧ್ಯಯುಗೀನ ಸಂಸ್ಕೃತಿ	ಸು.ಕಿ.ಶ. ೧೦೦೦-೧೬೦೦

ಇಲ್ಲಿಯ ತಾಮ್ರ ಶಿಲಾಯುಗದ ಸಂಸ್ಕೃತಿಯ ಘಟ್ಟದಲ್ಲಿ ತಾಮ್ರದ ಬಳಕೆ ಕಡಿಮೆಯಾಗಿದ್ದಂತೆ ತೋರಿ, ಹೆಚ್ಚಿನ ಆಯುಧೋಪಕರಣಗಳಲ್ಲಿ ಚರ್ಟ್ ಜಾತಿಯ ಹರಿತವಾದ ಚಾಕುವಿನಂತಹ ಆಯುಧ, ಕುಡುಗೋಲಿನಂತಹ ಉಪಕರಣಕ್ಕೆ ಹೊಂದುವ ಸಣ್ಣ ಸಣ್ಣ ಚಕ್ಕೆ ಚೂರುಗಳು, ಸೂಕ್ಷ್ಮ ಶಿಲಾಯುಧಗಳು, ಮತ್ತು ಅವುಗಳನ್ನು ತಯಾರಿಸಲು ಬಳಸುತ್ತಿದ್ದ ದಿಂಡು ಕಲ್ಲುಗಳೂ ಹಾಗೂ ನಯವಾದ ಕರಿಕಲ್ಲಿನ ಕೊಡಲಿಗಳು ಅಲ್ಲದೆ ದನಕುರಿ ಮೊದಲಾದ ಸಾಕುಪ್ರಾಣಿಗಳ ಮೂಳೆಗಳು ಇಲ್ಲಿ ದೊರೆತಿವೆ. ಮನೆಗಳ ಬಗ್ಗೆ ಸರಿಯಾಗಿ ತಿಳಿದುಬಂದಿಲ್ಲ.

ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿಯ ಕಾಲದ ವಿಶೇಷಗಳೆಂದರೆ ಬೃಹತ್ ಶಿಲಾಸಮಾದಿಗಳು ಮತ್ತು ಕಬ್ಬಿಣದ ಬಳಕೆ, ಕಪ್ಪು ಮತ್ತು ಕೆಂಪು ಬಣ್ಣದ ತಿಗರಿಯ ಮೇಲೆ ಮಾಡಿದ ಮಡಿಕೆಗಳು, ಶಂಖದ ಬಳೆ, ಮಣ್ಣಿನ ಮಣಿ, ಚಿಕ್ಕ ಚಿಕ್ಕ ಆಟದ ಬಿಲ್ಲೆಗಳು ಹಾಗೂ ಗೋಲಿಗಳು ಇಲ್ಲಿ ದೊರೆತಿವೆ.

ಇತಿಹಾಸ ಆರಂಭಕಾಲಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಕೆಂಪು ಮತ್ತು ಕಪ್ಪು ಹಾಗೂ ನಸುಗೆಂಪು ಬಣ್ಣದ ಮಡಿಕೆಗಳು; ಸೌದೆಯ ನೀಳಗಳಿಂದ ಅಲಂಕೃತವಾದ ಮಡಿಕೆಗಳು, ಚರ್ಟ್‌ಜಾತಿಯ ಕಲ್ಲುಗಳು ಹಾಗೂ ಸುಟ್ಟ ಮಣ್ಣಿನ ಮಗಿಗಳು ಅಲ್ಲದೆ ಕಂಬದ ಬಳೆಗಳು ಮಾತ್ರವಲ್ಲದೆ, ಕಬ್ಬಿಣದ ವಸ್ತುಗಳು ಅಲ್ಪಪ್ರಮಾಣದಲ್ಲಿ ದೊರೆತಿವೆ. ಈ ಕಾಲದಲ್ಲಿ ನಾಣ್ಯಗಳ ಬಳಕೆ ರೂಪಿಸಿದ್ದು, ಇಲ್ಲಿನ ಉತ್ಖನನದಲ್ಲಿ ಒಂದು ಸತವು ಎಂಬ ಮಿಶ್ರ ಲೋಹದ ನಾಣ್ಯ ದೊರೆತಿದೆ. ಈ ರೀತಿಯ ದೊರೆತ ವಿಫಲ ಸಾಮಗ್ರಿಗಳಿಂದ ನೆಲೆಯು ಬಹಳ ಮಹತ್ವದ ಪ್ರಾಗೈತಿಹಾಸಿಕ ನಿವೇಶನ ಎಂದು ಗೊತ್ತಾಗುತ್ತದೆ. ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಕಾಲದಲ್ಲಿ ಇದು ಬೃಹತ್ ನಗರವಾಗಿರಬೇಕೆಂದು, ಅಶೋಕನ ಶಿಲಾಶಾಸನಗಳಲ್ಲಿ ಉಲ್ಲೇಖಗೊಂಡಿರುವ ಸುವರ್ಣಗಿರಿಯ ಮಸ್ಕಿ ಎಂದು ಈ ಉತ್ಖನನ ವಿದ್ವಾಂಸರು ಪರೀಕ್ಷಿಸಿ ಅಭಿಪ್ರಾಯಪಟ್ಟಿದ್ದಾರೆ.

ಈ ಮೇಲಿನ ಉತ್ಖನನಗೊಂಡ ನೆಲೆಗಳಲ್ಲದೆ ಕೊಪ್ಪಳ ಸುತ್ತಮುತ್ತಲಿನ ಮತ್ತು ಗಂಗಾವತಿ ತಾಲೂಕಿನಲ್ಲಿ ವಿಶೇಷವಾಗಿ ಅ. ಸುಂದರ ಅವರು ನೂತನ ಶಿಲಾಯುಗ ಸಂಸ್ಕೃತಿಯ ಇನ್ನಷ್ಟು

---

೪೧. ಕಾಲಮಾನದ ಈ ಅನುಕ್ರಮಣಿಕೆಗಳನ್ನು ಉತ್ಖನನವಾದ ೧೯೫೪ರ ಸಂದರ್ಭದ ತಿಳುವಳಿಕೆಯ ಆಧಾರದ ಮೇಲೆ ಗುರುತಿಸಲಾಗಿದೆ. ಆದರೆ ನಂತರದಲ್ಲಿ ನಡೆದ ಅನೇಕ ಉತ್ಖನನಗಳು ಮತ್ತು ಇಂಗಾಲ ೧೪, ಕಾಲನಿರ್ಣಬ ವಿಧಾನದನ್ವಯ ಈ ಸಂಸ್ಕೃತಿಗಳ ಕಾಲವಗಳನ್ನು ಪುನರ್ ವಿಮರ್ಶಿಸಲಾಗಿದ್ದು ಅವು ತೋರಿಸಲಾಗಿದೆ.

ನೆಲೆಗಳನ್ನು ಶೋಧಿಸಿದ್ದಾರೆ.[೪೨] ಅವು ಕೊಪ್ಪಳ, ಶಿವಪುರ, ಬಂಡಿಹರ್ಲಾಪುರ, ಬಿಳೇಭಾವಿ, (ಕೊಪ್ಪಳ ತಾ) ತಿಪ್ಪನಾಳ, ಗೂಡೂರು, ಬಸರಿಹಾಳ, ಜಿರಾಳಕಲ್ಗುಡಿ, ಬಂಡರಹಾಳ, ಗಡ್ಡಿ ಮತ್ತು ಚಿಕ್ಕಮಾದಿಹಾಳ, ಚಿಕ್ಕಬೆಣಕಲ್, ಆಗೋಲಿ, ಮಲ್ಲಾಪುರ, ಕಲ್ಲಪ್ಪನಕ್ಯಾಂಪ್, ಹಿರೇಬೆಣಕಲ್ ಈ ಗ್ರಾಮಗಳ ನೆಲೆಗಳಲ್ಲಿ ದುಂಡು ಕಟ್ಟೆಗಳ, ಶವ-ಕುಣಿಗಳು ಮತ್ತು ಕಂಡಿಕೋಣಿ ಗೋರಿಗಳೆಂದು ಮೂರು ವಿಧದ ಬೃಹತ್ ಶಿಲಾ ಗೋರಿಗಳು ಕಂಡುಬಂದು ಇವು ಮಸ್ಕಿಯ ಬೃಹತ್ ಶಿಲಾಗೋರಿಗಲಿಗೆ ಹೋಲುತ್ತವೆ.

ಕಬ್ಬಿಣ ಯುಗ ಬೃಹತ್ ಶಿಲಾ ಸಂಸ್ಕೃತಿಯ ಜನ ನೂತನ ಶಿಲಾಯುಗದ ಜನರಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿದ್ದರು. ಇದಕ್ಕೆ ಆಧಾರವಾಗಿ ನಿಲ್ಲುವ ಜೀವನ ವೈಶಿಷ್ಟ್ಯವೆಂದರೆ ಶವಸಂಸ್ಕಾರ ಕ್ರಮ, ದೊಡ್ಡಕಲ್ಲು ಬಂಡಿಗಳಿಂದ ಗೋರಿಗಳನ್ನು ನಿರ್ಮಿಸುತ್ತಿದ್ದರು. ನೀರಿನ ಸೌಕರ್ಯವುಳ್ಳ ಪ್ರದೇಶಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುವ, ಇವರ ಎಲ್ಲಾ ಆಯುಧ, ಸಲಕರಣೆಗಳು ಕಬ್ಬಿಣದಾಗಿದ್ದವು. ಕತ್ತಿಗಳು, ಕೊಡಲಿ, ಬಾಚಿ, ಈಟಿ, ಬಾಣ, ತಾಮ್ರದ ಗಂಟೆ ಸಾಮಾನ್ಯವಾದವು. ಹೆಚ್ಚಾಗಿ ಮಣ್ಣಿನ ಪಾತ್ರೆಗಳು ಒಳಭಾಗ ಮತ್ತು ಹೊರ ಮೈಮೇಲ್ಭಾಗದಲ್ಲಿ ಅಚ್ಚ ಕಪ್ಪಾಗಿ ಒಳ್ಳೆಯ ಹೊಳಪಿನಿಂದ ಕೂಡಿದ ಕೆಳಭಾಗ ಕೆಂಪು ಬಣ್ಣದಲ್ಲಿರುತ್ತಿದ್ದವು. ದೊಡ್ಡ ಗುಡಾಣ, ಹರವಿ, ಬಾನಿ, ಕೊಡ, ತಟ್ಟೆ, ಲೋಟ ಮುಖ್ಯವಾಗಿದ್ದವು.[೪೩] ವ್ಯವಸಾಯ ಸುಧಾರಿಸಿದ್ದು, ಗದ್ದೆಗಳಲ್ಲಿ ಭತ್ತ, ರಾಗಿ, ಬೆಳೆಯುತ್ತಿದ್ದರು. ಅಲಂಕಾರ ಪ್ರಿಯರಲ್ಲದ ಇವರು ಸುಟ್ಟ ಮಣ್ಣಿನ ಉತ್ತಮ ಜಾತಿಯ ಕಲ್ಲಿನ ಮತ್ತು ತಾಮ್ರದ, ಚಿನ್ನದ ಮಣಿಗಳ ಸರ ಬಳೆ, ಕಿವಿಯೋಲೆಗಳನ್ನು ಧರಿಸುತ್ತಿದ್ದರು. ಇವರು ನೂತನ ಶಿಲಾಯುಗದ ಜನರಂತೆ ಬಂಡೆ, ಗವಿಗಳಲ್ಲಿ ಚಿತ್ರಗಳನ್ನು ಬರೆಯುತ್ತಿದ್ದರು. ಹಿರೇಬೆಣಿಕಲ್‌ನಲ್ಲಿ ಇಂತಹ ಚಿತ್ರಗಳ ಗವಿಗಳಿವೆ. ಈ ಚಿತ್ರದಲ್ಲಿ ಮುಖ್ಯವಾಗಿ ಕುದುರೆ ಸವಾರ, ಗುಂಪು ಕುಣಿತದ ದೃಶ್ಯ, ಜಿಂಕೆ, ಆಕಳು, ನವಿಲು ಕಂಡುಬರುತ್ತವೆ.

ಈ ಜನರ ಸಂಸ್ಕೃತಿಯು ಇವರ ಹಿಂದಿನ ಶಿಲಾಯುಗದ ಜನರಂತೆ ಗ್ರಾಮ ಜೀವನಾವಸ್ಥೆ ಇದ್ದರೂ ಸಹ ನಾಗರೀಕ ಸಂಸ್ಕೃತಿಗೆ ಮುನ್ನುಡಿ ಬರೆದವರು ಈ ಜನರೆಂದು ಹೇಳಬಹುದು. ಇದಕ್ಕೆ ಮುಖ್ಯವಾಗಿ ತಮ್ಮ ದೈನಂದಿನ ಕೆಲಸಕ್ಕೆ ಹಾಗೂ ಜೀವರಕ್ಷಣೆಗೆ ಇವರು ಕಬ್ಬಿಣ ಉಪಕರಣಗಳು ಮತ್ತು ಆಯುಧಗಳು ಉಪಯೋಗಿಸುತ್ತಿದ್ದರು. ಕಬ್ಬಿಣ ಉಪಕರಣಗಳ ಬಳಕೆಯಿಂದ ಹೆಚ್ಚು ಆಕರ್ಷಿತರಾಗಿ ಕಲ್ಲಿನ ಉಪಕರಣಗಳನ್ನು ಬಳಸುವ ಅವಶ್ಯಕತೆ ಕ್ರಮೇಣ ಇಲ್ಲದಂತಾಗಿ ಶಿಲಾಯುಗ ಕೊನೆಗೊಂಡಿತು. ಕಬ್ಬಿಣದ ಉಪಕರಣಗಳು ಗಟ್ಟಿ ಮುಟ್ಟಾಗಿ ಮತ್ತು ಚೂಪಾಗಿ, ಹರಿತವಾಗಿ ಕಂಡಬಂದು ಭೇಟೆ, ಸೌಧೆಗಳಂತಹ ಗಿಡ–ಮರಗಳನ್ನು ಕತ್ತರಿಸುವ ದೃಷ್ಟಿಯಿಂದ ಉತ್ತಮವಾದ ಕೆಲಸಕಾರ್ಯಗಳು ಬೇಗನೆ ಮುಗಿಯುತ್ತಿದ್ದವು. ಅಲ್ಲದೆ ವ್ಯವಸಾಯಕ್ಕೆ ಭೂಮಿಯನ್ನು

---

೪೨. ಸಂದರ ಅ., ೧೯೭೩, ಗಂಗಾವತಿತಾಲೂಕಿನ ಪ್ರಾಚ್ಯವಸ್ತುಗಳು, ಕ.ಬ.೯೧, ಪುಟ-೬೪-೭೫
೪೩. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೫೮

ಬಳಸಿಕೊಳ್ಳಲು ಕಾಡುಗಳಲ್ಲಿನ ಕೆಲ ಭೂಭಾಗವನ್ನು ಬೇಕಾದ ರೀತಿಯಲ್ಲಿ ಕೃಷಿಗೆ ಅಳವಡಿಸಲು ಸಾಧ್ಯವಾಯಿತು.

ಇದರಿಂದ ವ್ಯವಸಾಯ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿಯು ಉತ್ತಮವಾಯಿತು. ಇವರೆಡು ರಾಜಕೀಯ ಪರಂಪರೆಗೆ ಬುನಾದಿಯನ್ನು ಹಾಕಿದವು. ಆದ್ದರಿಂದ ಮಾನವನ ಸಾಂಸ್ಕೃತಿಕ ಪ್ರಾರಂಭದ ದಿನಗಳ ಇತಿಹಾಸದಲ್ಲಿ ಈ ಹೆಜ್ಜೆ ಗುರುತುಗಳು ಮುಖ್ಯವಾದ ಘಟ್ಟವಾಗಿ ನಿಲ್ಲುತ್ತದೆ.

ಸಾಂಸ್ಕೃತಿಕ ಪರಿಸರ

ಈ ಕೊಪ್ಪಳ ಜಿಲ್ಲೆಯ ಭೂ ಭಾಗವು ಕ್ರಿ.ಪೂ. ೪,೩ನೇ ಹೊತ್ತಿಗೆ ಮೌರ್ಯರ ಸಾಮ್ರಾಜ್ಯದಲ್ಲಿ ಸೇರಿತ್ತು. ಇದಕ್ಕೆ ಆಧಾರವಾಗಿ ಕೊಪ್ಪಳದಲ್ಲಿಯೇ ದೊರೆತಿರುವ ಎರಡು ಅಶೋಕನ ಶಾಸನಗಳು ಹೊಂದಿ ಬೌದ್ಧರ ಕೇಂದ್ರವಾಗಿ, ೧೧ನೇ ಶತಮಾನಕ್ಕೆ ಜೈನರ ತೀರ್ಥಕ್ಷೇತ್ರವಾಗಿ, ೧೨ನೇ ಶತಮಾನದ ಸುಮಾರಿಗೆ ವೀರಶೈವ ಧರ್ಮ ಮಹತ್ವದ ಕ್ಷೇತ್ರವಾಗಿ, ಕದಂಬ ವಂಶ ಸ್ಥಾಪಕ ಮಯೂರವರ್ಮನ ಒಂದು ಶಾಸನದಲ್ಲಿ ಕೊಪ್ಪಳವನ್ನು "ಕುಪಣಚಮೂ" (ಕ.ಸಾ.ಪ.ಪ ೯೯-೨) ಎಂದೆನಿಸಿಕೊಂಡು, ೨ನೆಯ ಪುಲಕೇಶಿಯ ಕಾಲದಲ್ಲಿ ಬಂದಿದ್ದ ಚೀನಾ ಪ್ರವಾಸಿ ಹುಯೆನ್‌ತ್ಸಾಂಗ್‌ನು ಈ ಸ್ಥಳವನ್ನು "ಕೊಂಕಣಪುಲೋವು" ಎಂದು ಹೆಸರಿಸಿದ್ದಾನೆ. ಒಂಬತ್ತನೇ ಶತಮಾನದ 'ಕವಿರಾಜ ಮಾರ್ಗ' ಲಾಕ್ಷಣಿಕ ಗ್ರಂಥದಲ್ಲಿ 'ತಿರುಳ್ಗನ್ನಡಗಳಲ್ಲೇ ವಿಶೇಷವಾಗಿ ಕೊಪ್ಪಳಕ್ಕೆ ವಿಧಿತ 'ಮಹಾಕೊಪಣ'ವೆಂದು ಅಂದಿನ ಕೊಪ್ಪಳದ ತಿರುಳ್ಗನ್ನಡತೆಯ ಖ್ಯಾತಿಗೆ; ಸಾಹಿತ್ಯ ಸಂಸ್ಕೃತಿ, ಇತಿಹಾಸಕ್ಕೆ ಸಾಕ್ಷಿಯಾಗಿದೆ. ಇದನ್ನು 'ರನ್ನ' ಕವಿಯು ಮತ್ತೊಮ್ಮೆ ಕನ್ನಡ ಸಾಹಿತ್ಯದಲ್ಲಿ ಅತ್ತಿಮಬ್ಬೆಯ ಚರಿತ್ರೆಯನ್ನು ವರ್ಣಿಸುವಾಗ ನೆಗಳ್ದ ಕೊಪಣಾಚಲದಂತೆ ಎಂದು ಕರೆದಿದ್ದಾನೆ. ಶಾಸನಗಳಲ್ಲಿ ಕೊಪ್ಪಳವನ್ನು ಆದಿತೀರ್ಥವೆಂದೂ, ಮಹಾತೀರ್ಥವೆಂದೂ ವರ್ಣಿಸಿದೆ. ಹೀಗೆ ಶಾಸನ ಹಾಗೂ ಕಾವ್ಯಗಳಲ್ಲಿ ವರ್ಣಿತಗೊಂಡ ಕೊಪ್ಪಳವು ಹದಿನಾರು, ಹದಿನೇಳನೇ ಶತಮಾನದವರೆಗೆ ಜೈನ ತೀರ್ಥಕ್ಷೇತ್ರವಾಗಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಕೊಪ್ಪಳವು ಮೌರ್ಯರ, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಗಂಗರ, ಕಲ್ಯಾಣ ಚಾಲುಕ್ಯರ ಆಡಳಿತದಲ್ಲಿ ಬರುವ ಪ್ರದೇಶವಾಗಿತ್ತು. ಮುಂದಿನ ದಿನಮಾನಗಳಲ್ಲಿ ಮರಾಠರ, ಬಹುಮನಿ ಆದಿಲ್‌ಶಾಹಿಗಳ, ಹೈದರ್, ಟಿಪ್ಪುಸುಲ್ತಾನರ ಆಡಳಿತಕ್ಕೊಳಪಟ್ಟ ಅಂಶವು ಐತಿಹಾಸಿಕ ಆಧಾರಗಳ ಚರಿತ್ರೆಯಿಂದ ತಿಳಿದುಬರುತ್ತದೆ.

ಯಲಬುರ್ಗಿ(ಯಲಬುರ್ಗಾ)ಯ ಸಿಂಧರು, ಕಿಸುಕಾಡು ೭೦, ಕೆಳವಾಡಿ ೩೦೦, ಮತ್ತು ನೆರೆಯಂಗಲ್ಲು ೧೨ನ್ನಾಳುತ್ತಿದ್ದರು. ಇವರಲ್ಲಿ ೧ನೆಯ ಆಚುಗಿ, ಚಾಲುಕ್ಯ ತ್ರಿಭುವನಮಲ್ಲನ ಕಟ್ಟಿದಲಗಿನಂತಿದ್ದನಂತೆ. ಇವನು ಮತ್ತು ಇವನ ಮಗ ೧ನೆಯ ಪೆರ್ಮಾಡಿದೇವರು ಹೊಯ್ಸಳ ವಿಷ್ಣುವರ್ಧನನ್ನು ಸೋಲಿಸಿದಾಗಿ ತಿಳಿದುಬರುತ್ತದೆ. ಪೆರ್ಮಾಡಿದೇವ ೨ನೆಯ ಭೋಜ ಎಂದು ಖ್ಯಾತನಾಗಿದ್ದು, ಬ್ರಹ್ಮನು ಇವನ ಭಕ್ತನಾಗಿ, ಕಾಮನು ಇವನೊಂದಿಗೆ ಹೋರಾಟಕ್ಕಿಳಿದು ಸೋತು, ಕುಬೇರನು ಪ್ರೀತಿಯಿಂದ ತನ್ನ ಸಂಪತ್ತನ್ನು ಧಾರೆಯೆರೆದು ಕೊಟ್ಟನಂತೆ ಈ ಕಾಲದಲ್ಲಿ ಚಾಲುಕ್ಯರ ಪ್ರತಿಸ್ಪರ್ಧಿಯಾಗಿ ನಿಂತವರು ಕಲಚೂರ್ಯರು. ಬಿಜ್ಜಳ, ರಾಯಮುರಾರಿ, ಸೋಯಿದೇವರನ್ನು ಇಲ್ಲಿನ ಶಾಸನಗಳು ಪ್ರಸ್ತಾಪಿಸುತ್ತಿವೆ. ಸಂಕಮದೇವನ ಕಾಲದಲ್ಲಿ ಧನುಂಗಿ ದಂಡನಾಯಕನು

ತನ್ನ ತಾಯಿ ಅಕ್ಕಂದಿರೊಂದಿಗೆ ಕುಕ್ಕನೂರಿಗೆ(ಕೊಪ್ಪಳ ತಾ) ಬಂದು, ಕಾಳಿಕಾಜೇಷ್ಠಿಗೆ ಬೆನತೂರನ್ನು ದಾನವಿತ್ತನು.[೪೪]

ತರುವಾಯ ಹೊಯ್ಸಳರ ಆಡಳಿತಕ್ಕೆ ಒಳಪಟ್ಟು ಜೈನ ಧರ್ಮವನ್ನು ಬೆಳೆಸಿದರು. ವೀರಬಲ್ಲಾಳನ ಮಹಾಮಂತ್ರಿಯಾಗಿದ್ದ, ಕವಡೆಯ ಬೊಪ್ಪನು ಕೊಪಣ ತೀರ್ಥಕ್ಷೇತ್ರಕ್ಕೆ ಬಂದುದರಿಂದ ಅದು ಊರ್ಜಿತವಾಯಿತು. ಇತನು ದಾನ-ಧರ್ಮದಲ್ಲಿ ಅಪಾರ ಶ್ರೀಮಂತನಾಗಿದ್ದನು.

ಮುಂದೆ ಮುಸಲ್ಮಾನರ ದಾಳಿ ಆರಂಭವಾಗಿ ನೇಮಿಖಾನನು ಕೊಪ್ಪಳ ರಾಜ್ಯವನ್ನು ಇರಿದು ಕೆಡಿಸುವ ಬರಲು ಆನೆಗೊಂದಿಯ ಕಂಪಿಲ, ಕುಮಾರರಾಮರು ಅವನನ್ನು ಸೋಲಿಸಿದರು. ಕೊಪಣವೊಂದು ಬಲಾಢ್ಯ ದುರ್ಗವೆಂದೂ ಅಲ್ಲಿ ತಿಮ್ಮರಾಜನೆಂಬುವವನು ಕಂಪಿಲನ ಮಾಂಡಲೀಕನಾಗಿದ್ದನೆಂದೂ ಕುಮಾರರಾಮನ ಸಾಂಗತ್ಯ ಹೇಳಿದೆ.[೪೫]

ನಂತರ ಇದು ವಿಜಯನಗರದ ಅರಸರ ವಶವಾಯಿತು. ಹರಿಹರ ಮತ್ತು ಭಕ್ತಸಮೂಹ ಸೇರಿ ಸಿಂಹನಂಧ್ಯಾಚಾರ್ಯರ ನಿಶಧಿಗೆ ನಿಲ್ಲಿಸಿದುದಾಗಿ ಶಾಸನದಲ್ಲಿ ಹೇಳಿದೆ. ಕುಷ್ಟಗಿ ತಾಲ್ಲೂಕಿನ ಪುರದ ಒಂದು ಶಾಸನದಲ್ಲಿ ವೀರಪ್ರತಾಪದೇವ ರಾಯನಿಗೆ ಧರ್ಮವಾಗಬೇಕೆಂದು ಆತನ ರಾಣಿವಾಸದ ಓರ್ವ ವ್ಯಕ್ತಿ ಸೋಮೇಶ್ವರ ದೇವರ ನಿತ್ಯಪೂಜೆಗೆ ಮೊದಲಾದವುಗಳಿಗೆ ಭೂದಾನವಿತ್ತುದಾಗಿ ಹೇಳಿದೆ. ಕೃಷ್ಣದೇವರಾಯನ ಕಾಲದ ಎರಡು ಶಾಸನಗಳು ಇಲ್ಲಿ ದೊರೆತಿವೆ. ರಕ್ಕಸಗಿತಂಗಡಗಿ ಯುದ್ಧದಲ್ಲಿ ಮಡಿದ ರಾಮರಾಯನ ಮಗ ಶ್ರೀರಾಮರಾಜನು ವಿಜಯವಿಠಲನ ದಕ್ಷಿಣದ್ವಾರದ ಆರಂಭ ಕಾಲಕ್ಕೆ ದಾನವಿತ್ತ ಆರು ಹಳ್ಳಿಗಳಲ್ಲಿ ಕೊಪ್ಪಳ ದೇಶದ ಲೇಪಗೇರಿಯೂ ಒಂದು. ಇದರಿಂದ ಈ ಕಾಲದಲ್ಲಿ 'ಕೊಪ್ಪಳ ದೇಶ' ಎಂದು ಪ್ರಸಿದ್ಧಿ ಪಡೆದುದು ತಿಳಿಯುತ್ತದೆ.

ವಿಜಾಪುರದ ಆದಿಲ್‌ಷಾನ ಕಾಲದಲ್ಲಿ ಈ ಸ್ಥಳವನ್ನು 'ಮುಜ಼ಾಫರ್ ನಗರ' ಎಂದು ಮುಂದೆ ೨ನೆಯ ಬಹುಲೋಲ ಎಂದು ಬಿರುದು ಪಡೆದ ಅಬ್ದುಲ್ ರಹೀಮನಿಗೆ ಜಹಗೀರಾಗಿ ಕೊಡಲ್ಪಟ್ಟಿತು. ತರುವಾಯ ಶಿವಾಜಿ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡು ಸುಭಾನಜಿರಾವ್‌ನಿಗೆ ಕೊಟ್ಟನು. ಇದರ ಮೂಲಕ ಮರಾಠರು ತುಂಗಾಭದ್ರಾ ನದಿಯಾಚೆ ರಾಜ್ಯ ವಿಸ್ತರಿಸುವಂತೆ ಮಾಡಿದರು. ತದನಂತರ ಈ ಪ್ರದೇಶವು ಹೈದರಾಲಿಯ ಕೈ ಸೇರಿ ಈ ನಾಡನ್ನು ಆಳಲು ಮಹ್ಮದ್ ಉಸ್ಮಾನ್ ಕೋವಾರನನ್ನು ನೇಮಿಸಿದನು. ಇವನು ಕೊಪ್ಪಳ ಕೋಟೆಯ ೨ನೆಯ ಬಾಗಿಲನ್ನು ಬಹುದ್ದೂರ ಬಂಡೆಯ ಕೋಟೆಯನ್ನೂ ಕಟ್ಟಿಸಿದನು. ಮರಾಠರಿಂದ ವಶಪಡಿಸಿಕೊಂಡ ಈ ಸ್ಥಳವನ್ನು ಟಿಪ್ಪುಸುಲ್ತಾನನು 'ಸುಲ್ತಾನಗಡ' ಎಂದು ಕರೆದನು.

ಕ್ರಿ.ಶ.೧೭೯೦ರಲ್ಲಿ ಕರ್ನಲ್ ಕಿಡ್‌ನು ಕೊಪ್ಪಳವನ್ನು ಹಿಡಿದುಕೊಂಡನು. ಮುಂದೆ ಬ್ರಿಟೀಷರು ೧೮೬೧ರಲ್ಲಿ ಈ ಭಾಗವನ್ನು ನವಾಬ ಸಾಲಾರಜಂಗ ಅವ್ವಲ್ ಅವನಿಗೆ ಜಹೀಗಿರಾಗಿ ಕೊಡಲ್ಪಟ್ಟಿತು. ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಈ ಪ್ರದೇಶ ಸಾಲಾರಜಂಗನ ಆದಿಪತ್ಯದಲ್ಲಿಯೇ ಇದ್ದಿತು.[೪೬]

---

೪೪. ಅಲ್ಲಮಪ್ರಭು ಬೆಟ್ಟದೂರು (ಸಂ)., ೨೦೦೫, ಕೊಪ್ಪಳ ಜಿಲ್ಲಾ ದರ್ಶನ, ಪುಟ-೧೧

೪೫. ಅಲ್ಲಮಪ್ರಭು ಬೆಟ್ಟದೂರು (ಸಂ)., ೨೦೦೫, ಕೊಪ್ಪಳ ಜಿಲ್ಲಾ ದರ್ಶನ, ಪುಟ-೧೧

೪೬. ಅಲ್ಲಮಪ್ರಭು ಬೆಟ್ಟದೂರು (ಸಂ)., ೨೦೦೫, ಕೊಪ್ಪಳ ಜಿಲ್ಲಾ ದರ್ಶನ, ಪುಟ-೧೨

ವಿಜಯನಗರದ ಕೃಷ್ಣದೇವರಾಯನನ್ನು ಉಲ್ಲೇಖಿಸುವ ಶಾಸನವೊಂದು ವೆಂಕಟೇಶ್ವರ ದೇವಾಲಯದಲ್ಲಿದ್ದು, ವೈಷ್ಣವ ಧರ್ಮದ ಅಸ್ತಿತ್ವವನ್ನು ಸಾರುತ್ತಿದೆ. ಬಿಜಾಪುರದ ಬಾದಶಾ, ಹೈದರಾಲಿ, ಟಿಪ್ಪು, ನಿಜಾಂರ ಮುಸ್ಲಿಂ ಧರ್ಮಾಭಿಮಾನಿ ಅರಸರಿಂದ ಇಲ್ಲಿ ಮುಸ್ಲಿಂ ಸಂಸ್ಕೃತಿಯು ಬೆಳೆದುಬಂದಿದೆ. ೨ನೆಯ ಶತಮಾನದ ಬೌದ್ಧ, ಜೈನ, ಧರ್ಮಗಳು, ಕ್ರಿ.ಶ.೧೦ನೆಯ ಶತಮಾನದ ಶೈವ, ವೀರಶೈವ ಧರ್ಮಗಳು, ೧೬ನೆಯ ಶತಮಾನದಿಂದೀಚೆ ಮುಸ್ಲಿಂ ಧರ್ಮವು ಬೆಳೆದು ಒಂದನ್ನೊಂದು ಸೌಹಾರ್ದ ಭಾವನೆಯಿಂದ ಬಾಳುತ್ತಿರುವುದು ನೋಡಬಹುದು.

ಶಿಲ್ಪಕಲೆಯನ್ನು ಶ್ರೀಮಂತವಾಗಿ ಈ ಕೊಪ್ಪಳ ಜಿಲ್ಲಾವಾರು ಮಹತ್ವದ ನೆಲೆಯನ್ನು ಕಂಡುಕೊಂಡಿದೆ. ೭೭೨ ಬಸ್ತಿ(ಜಿನಾಲಯಗಳು)ಗಳನ್ನು ಇಲ್ಲಿ ಕಾಣಬಹುದು. ೧೦-೧೧ನೆಯ ಶತಮಾನದ ನಂತರ ದೇವಾಲಯಗಳ ಅಸ್ತಿತ್ವ ಪಡೆದು ಗವಿಮಠ, ಮಳೆಮಲ್ಲೇಶ್ವರ ಮುಂತಾದವು ನಿರ್ಮಾಣವಾದವು. 'ದೇವಾಲಯಗಳ ಚಕ್ರವರ್ತಿ' ಎಂದೂ ಇಟ್ಟಗಿಯ ಮಹಾದೇವ ಮಂದಿರ ಪ್ರಸಿದ್ಧಿ ಪಡೆದಿದೆ. ನವಲಿಂಗಗಳಿಂದಲೂ ಒಂಭತ್ತು ಶಕ್ತಿ ಪೀಠಗಳಿಂದಲೂ ಕೂಡಿಕೊಂಡು 'ಶಿವಶಕ್ತಿ ಸುರತ್ ಸಂಪುಟ ಕ್ಷೇತ್ರ ಎಂದು ಕರೆಯಿಸಿಕೊಂಡ ಕುಕನೂರು ಹಲವಾರು ದೇವಾಲಯಗಳನ್ನೊಳಗೊಂಡಿದೆ. ಕಲ್ಲಿನಾಥನ ಭವ್ಯ ದೇವಾಲಯದ ಕಲ್ಲೂರಿನಲ್ಲಿದೆ. ಕುಷ್ಟಗಿಯ ತಾಲ್ಲೂಕು ಪುರದ ಕೋಟಿಲಿಂಗಗಳ ಸೋಮೇಶ್ವರ ದೇವಾಲಯ, ತಳಕಲ್ಲಿನ ಮೌಲಾದರ್ಗಾ, ಕೊಪ್ಪಳದ ರಾಜಾಭಕ್ಷಿದರ್ಗಾ, ಪ್ರಸಿದ್ಧ ಧಾರ್ಮಿಕ ಸ್ಥಳಗಳಾಗಿ ಕಾಣಬಹುದು. ಈ ಜಿಲ್ಲೆಯ ಅಳವಂಡಿ, ಮಾದಿನೂರು, ಕವಲೂರು, ಮುಧೋಳ, ತಳಕಲ್ಲು ಮೊದಲಾದವು ವಿದ್ಯಾಕೇಂದ್ರಗಳೆಂದು ಅಗ್ರಹಾರಗಳೆಂದು ಪ್ರಸಿದ್ಧಿ ಪಡೆದಿದ್ದವು.

ಹೀಗೆ ಈ ನಾಡು ಪ್ರಾಚೀನ, ಐತಿಹಾಸಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಮಹತ್ವದ ಪ್ರದೇಶವಾಗಿ ತನ್ನ ಒಡಲಲ್ಲಿ ಬೆಳೆಸಿಕೊಂಡು ಬಂದಿದೆ.

* * *

ಅಧ್ಯಾಯ – ಮೂರು

ಗಂಗಾವತಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು

ಅಧ್ಯಾಯ - ಮೂರು

ಗಂಗಾವತಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು

ಗಂಗಾವತಿ ತಾಲೂಕು ಪ್ರದೇಶವು ಬೆಟ್ಟ ಸಾಲುಗಳಿಂದ ಕೂಡಿಕೊಂಡಿದೆ. ಈ ಬೆಟ್ಟದಲ್ಲಿನ ಕಲ್ಲುಗುಂಡುಗಳು ಸಾಮಾನ್ಯವಾಗಿ ಕಂದು ಇಲ್ಲವೇ ಬೂದು ಬಣ್ಣದ ಗ್ರಾನೈಟ್ ಶಿಲೆಯಿಂದ ಕೂಡಿದ್ದಾಗಿದೆ. ಉಷ್ಣ ಶೀತಗಳ ವೈಪರೀತ್ಯ ಹೆಚ್ಚಾಗಿ ನಿಸರ್ಗದ ನಿಯಮದಂತೆ ಈ ಶಿಲೆಗಳು ದೊಡ್ಡ ದೊಡ್ಡ ಕಲ್ಲುಗುಂಡುಗಳು ಸೀಳಿ ಹೋಗುವುದರಿಂದ ಮತ್ತು ಸವಕಳಿಯಿಂದ ಪೂರ್ವಾದಿತದಿಂದ ಗವಿ ಕಲ್ಲಾಸರೆಗಳು ಉಂಟಾಗಿವೆ, ಈ ಪ್ರದೇಶದಲ್ಲಿ ತುಂಗಭದ್ರಾ ನದಿಯು ಬೆಟ್ಟಗಳ ಮಧ್ಯೆಯೇ ಹರಿದು ಹೋಗಿದೆ, ಇದರಿಂದ ಇಲ್ಲಿ ಫಲವತ್ತತೆಯಿಂದ ಕೂಡಿದ ಭೂಮಿಯು ಉಂಟಾಗಿ, ಸಸ್ಯ, ಮರಗಳ ಪರಿಸರವಾಗಿ ಹೆಚ್ಚೇನು ಕಾಣದಿದ್ದರೂ ಪ್ರಾಣಿ ಜೀವಜಂತುಗಳಿಗೆ ಆಶ್ರಯ ನೀಡಿತ್ತು. ಇದರ ಅವಶ್ಯಕತೆಗಾಗಿ ಆದಿಮಾನವನು ತನ್ನ ಆಹಾರ ರೂಪವಾಗಿ ಇಂತಹ ಸ್ಥಳಗಳಲ್ಲಿ ಹೆಚ್ಚು ಕಾಲವನ್ನು ಕಳೆಯಲಾರಂಭಿಸಿದನು. ಇವನ ಆಶ್ರಯ ಸ್ಥಳವನ್ನಾಗಿ ಗವಿ, ಪೊದೆ, ಕಲ್ಲಾಸರೆಗಳನ್ನು ನೋಡಿಕೊಂಡನು. ಇತಂಹ ಗವಿ, ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳಿರುವುದು ಕಂಡುಬಂದಿದೆ.

ಈ ಪ್ರದೇಶದಲ್ಲಿ ೧೯೩೫ ರಲ್ಲಿ ಆಂಗ್ಲ ಭೂಗರ್ಭ ತಜ್ಞರಾದ ಲಿಯೋನಾರ್ಡ್‌ಮನ್ ಅವರು ಪ್ರಥಮವಾಗಿ ಹಿರೇಬೆಣಕಲ್‌ನಲ್ಲಿ ಮೂರು ಚಿತ್ರಿತ ಗವಿಗಳನ್ನು ಬೆಳಕಿಗೆ ತಂದರು,[1] ನಂತರ ಪುರಾತತ್ವಜ್ಞ ಡಾ. ಅ. ಸುಂದರ ಅವರು ಮತ್ತಷ್ಟು ಗವಿಗಳನ್ನು ಶೋಧಿಸಿದರು.[2] ಇವರುಗಳಲ್ಲದೆ ಡಾ. ಶರಣಬಸಪ್ಪ ಕೋಲ್ಕಾರ್ ಅವರು ಕೆಲವು ೭೩ ಗವಿ ಕಲ್ಲಾಸರೆ ಬಂಡೆ ಚಿತ್ರ ನೆಲೆಗಳನ್ನು ಶೋಧಿಸಿದರು.[3] ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ನಾನು ಕ್ಷೇತ್ರಕಾರ್ಯದ ಮುಖಾಂತರ ಮತ್ತೆ ೧೨ ಗವಿ, ಕಲ್ಲಾಸರೆ, ಬಂಡೆ ಚಿತ್ರದ ನೆಲೆಗಳು ಶೋಧಿಸಲ್ಪಟ್ಟವು. ಇವುಗಳಲ್ಲಿ ಗವಿವರ್ಣ

೦೧. ಪೊಟ್ ಆರ್.ಬಿ., ೧೯೧೬, ಪೂರ್ವೋಕ್ತ

೦೨. ಸುಂದರ ಅ., ಐ.ಎ.ಆರ್, ೧೯೬೧-೬೨ ರಿಂದ ೧೯೭೯-೮೦ರ ವರಗಿನ ವರದಿಗಳು ಮತ್ತು ೧೯೭೪

೦೩. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೬೨

ಚಿತ್ರಗಳು ಅಧಿಕವಾಗಿದ್ದು, ಕಲ್ಲಾಸರೆ, ಬಯಲು ಬಂಡೆ ಚಿತ್ರಗಳು ಅತಿಕಡಿಮೆಯಾಗಿ ಕಂಡುಬಂದಿವೆ. ವರ್ಣಚಿತ್ರ ಮತ್ತು ಕುಟ್ಟು, ಗೀರು, ಚಿತ್ರಗಳ ಪರಂಪರೆಯನ್ನು ಸಂಶೋಧನೆಯ ಅಧ್ಯಯನ ದೃಷ್ಟಿಯಿಂದ ಅವುಗಳನ್ನು ಈ ರೀತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ ಪೂರ್ವಶೋಧಿತ ಮತ್ತು ಪ್ರಸ್ತುತ ಶೋಧಿತ ಗವಿ, ಕಲ್ಲಾಸರೆಯ ಚಿತ್ರಗಳ ವಿವರವನ್ನು ಈ ಕೆಳಗೆ ನೀಡಲಾಗಿದೆ.

ಗವಿ, ಕಲ್ಲಾಸರೆ ವರ್ಣಚಿತ್ರ ನೆಲೆಗಳು

ಗಂಗಾವತಿ ತಾಲೂಕು

ಕ್ರಸಂ.	ಸ್ಥಳ	ಪೂರ್ವಶೋಧಿತ	ಪ್ರಸ್ತುತಶೋಧಿತ	ಒಟ್ಟು
೦೧.	ಹಿರೇಬೆಣಕಲ್	೧೭		೧೭
೦೨.	ಚಿಕ್ಕಬೆಣಕಲ್	೦೩		೦೩
೦೩.	ಎಮ್ಮಿಗುಡ್ಡ	೦೨		೦೨
೦೪.	ಗಡ್ಡಿ	೦೩	೦೧	೦೪
೦೫.	ಆಗೋಲಿ	೦೭	೦೨	೦೯
೦೬.	ಹಂಪಸದುರ್ಗ	೦೨	೦೩	೦೫
೦೭.	ಬೊಮ್ಮಸಾಗರ ತಾಂಡ	೦೧	–	೦೧
೦೮.	ರಾಮದುರ್ಗ	೦೧	೦೧	೦೨
೦೯.	ಆನೆಗುಂದಿ	೦೯	೦೩	೧೨
೧೦.	ಆಂಜನಹಳ್ಳಿ	೦೨	–	೦೨
೧೧.	ಮಲ್ಲಾಪುರ	೧೪	–	೧೪
೧೨.	ತೆಂಬಾ	೦೫	–	೦೫
೧೩.	ತಿರುಮಲಾಪುರ	೦೧	–	೦೧
೧೪.	ಚಿಕ್ಕರಾಂಪುರ	೦೬	–	೦೬
೧೫.	ರಾಂಪುರ	೦೩	–	೦೩
೧೬.	ಸಂಗಾಪುರ	೧೦	–	೧೦
೧೭.	ಗೂಗಿಬಂಡಿ	೦೧	–	೦೧
೧೮.	ಕಡೆಬಾಗಿಲು	–	೦೨	೦೨
	ಒಟ್ಟು	೭೭	೧೨	೮೯

ಹಿರೇಬೆಣಕಲ್

ಈ ಹಿರೇಬೆಣಕಲ್ ಗ್ರಾಮವು ಗಂಗಾವತಿಯಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಕೊಪ್ಪಳಕ್ಕೆ ಹೋಗುವ ಮುಖ್ಯರಸ್ತೆಯ ಎಡಕ್ಕೆ ಈ ಗ್ರಾಮ ಇದ್ದು, ಗ್ರಾಮದ ದಕ್ಷಿಣ ದಿಕ್ಕಿನಲ್ಲಿರುವ ಶಿಲಾಬೆಟ್ಟಗಳಲ್ಲಿ ೧೭ ಗವಿ ಕಲ್ಲಾಸರೆಯ ಚಿತ್ರಗಳು ಕಂಡುಬಂದಿವೆ.

ಕಲ್ಲಾಸರೆ : ಒಂದು

ಈ ಗ್ರಾಮದ ಹತ್ತಿರದಲ್ಲಿರುವ ಶಿಲಾಬೆಟ್ಟದ ಭಾಗವಾದ ದುರ್ಗದ ಅಡಿಯಿಂದ ಆಗ್ನೇಯ ದಿಕ್ಕಿಗೆ ಶಿಲಾ ಸಮಾಧಿ ಮತ್ತು ಮೋರೆರ ಮನೆಗಳ ನೆಲೆಗೆ ಹೋಗುವ ದಾರಿಯ ಬಲಕ್ಕೆ ಬೆಟ್ಟದ ಮಧ್ಯದಲ್ಲಿ ಈ ಕಲ್ಲಾಸರೆ ಇದ್ದು, ಇದೊಂದು ದೊಡ್ಡ ಗುಂಡಕಲ್ಲು ಇದೆ. ಈ ಗುಂಡಿನ ಕಲ್ಲಾಸರೆಯ ಮೇಲೆ ಕಂದು ಕೆಂಪು ಬಣ್ಣದ ಹಲವು ಚಿತ್ರಗಳಿವೆ. ಇದರ ಎಡಭಾಗಕ್ಕೆ ದಕ್ಷಿಣಾಭಿಮುಖವಾಗಿ ನಿಂತ ಒಂದರೊಳಗೊಂದು ಸೇರಿದಂತಿರುವ ಪ್ರಾಣಿಗಳಲ್ಲಿ ಮೇಲ್ಗಡೆ ಎಡಭಾಗದಿಂದ ಕೈಕೈ ಹಿಡಿದು ಸಾಲಾಗಿ ನಾಲ್ಕು ಜನರ ಮುಂದೆ ಕುದುರೆ ಸವಾರ, ಕೈ ಹಿಡಿದು ನಿಂತ ಜೋಡಿ ವ್ಯಕ್ತಿಗಳು, ವ್ಯಕ್ತಿಯ ತೊಡೆಭಾಗದವರೆಗೆ ಚಿತ್ರಗಳಿವೆ. ಎತ್ತು, ಆಡು, ಕೈ ಕೈ ಹಿಡಿದು ಸಾಲಾಗಿ ನಿಂತ ೧೩ ಜನರ ಗುಂಪಿನ ಚಿತ್ರಗಳು ಕಾಲಿನ ಪಾದಗಳನ್ನು ಹೊಂದಲಾಗಿದೆ. ಚಿಕ್ಕ ನವಿಲುಗಳು, ಕುದುರೆ ಸವಾರ, ಜೋಡಿನವಿಲು, ಚಿಕ್ಕ ವ್ಯಕ್ತಿ ಜೋಡಿ ವ್ಯಕ್ತಿಗಳು, ಕುದುರೆ ಸವಾರ, ವ್ಯಕ್ತಿ ಎತ್ತು, ಎತ್ತಿನ ಸವಾರ, ಒಬ್ಬವ್ಯಕ್ತಿ, ಕೈ ಕೈ, ಹಿಡಿದು ನಿಂತ ೧೦ ಜನರ ಗುಂಪು ಕೈಯಲ್ಲಿ ಭರ್ಚಿ ಹಿಡಿದು ಎಸೆಯುವ ಭಂಗಿಯಲ್ಲಿರುವ ಮೂವರು ಕುದುರೆ ಸವಾರರು ಕೈ ಕೈ ಹಿಡಿದು ನಿಂತು ಕೋನೆಯ ವ್ಯಕ್ತಿಯ ಕೈಯಲ್ಲಿ ಕೊಡಲಿ ಇದೆ. ಇದರ ಮೇಲೆ ಚಿಕ್ಕ ಗಾತ್ರದ ಮೂವರ ಚಿತ್ರಗಳಿವೆ. ಎತ್ತನ್ನು ಬಾಹ್ಯ ರೇಖೆಗಳಿಂದ ರಚಿಸಿದೆ. ಇದರ ಮುಂದೆ ಕೈ ಕೈ ಹಿಡಿದು ನಿಂತ ೧೦ ಜನರ ಗುಂಪಿನಲ್ಲಿ ಕೊನೆಯವನು ಕೊಡಲಿಯನ್ನು ಎತ್ತಿದ್ದಾನೆ. ಒಂದು ಎತ್ತುವು ನಿಂತಿದೆ. ಐದು ಜಿಂಕೆಗಳಿದ್ದು, ಮನುಷ್ಯ ಡಾಲು ಹಿಡಿದು ಭರ್ಚಿಯನ್ನು ಎಸೆಯುವ ಚಿತ್ರ ಮೂಡಿದೆ.

ಈ ಮೇಲಿನ ಚಿತ್ರಗಳಲ್ಲಿ ಕೈ ಕೈ ಹಿಡಿದು ನಿಂತಿರುವ ಮನುಷ್ಯ ರೀತಿಯ ಚಿತ್ರಗಳ ಗುಂಪು ಎರಡು, ಮೂರು, ನಾಲ್ಕು, ಹತ್ತು, ಆರು, ಹೀಗೆ ಹತ್ತರವು ಎರಡು ಮತ್ತು ಹದಿಮೂರು ಜನರಿದ್ಧ ಒಟ್ಟು ಆರು ಗುಂಪುಗಳು ಕಂಡುಬರುತ್ತವೆ. ಮೇಲ್ಭಾಗದ ಜೋಡಿ ವ್ಯಕ್ತಿ, ಕೆಳಭಾಗದ ಮೂವರು ವ್ಯಕ್ತಿಗಳು ತಲೆ ಸುತ್ತಲೂ ಕೂದಲುಗಳನ್ನು ಚಿಕ್ಕ ಚಿಕ್ಕ ರೇಖೆಗಳ ಮೂಲಕ ತೋರಿಸಲಾಗಿದೆ. ಮೂರು ಜನರ ಗುಂಪಿನ ಕೊನೆಯ ಮತ್ತು ಕೆಳಗಿನ ಹತ್ತು ಜನರ ಗುಂಪಿನ ಕೊನೆಯ ವ್ಯಕ್ತಿಯಲ್ಲಿ ಪರಶು (ಕೊಡಲಿ)ಗಳನ್ನು ಕೊಡಲಾಗಿದೆ. ಇವುಗಳೆಲ್ಲವೂ ಕಂದು-ಕೆಂಪು ಬಣ್ಣದಿಂದ ಕಡ್ಡಿ ಆಕಾರದ ಚಿತ್ರಗಳಾಗಿ ಕಂಡುಬರುತ್ತವೆ.

ಇಲ್ಲಿಯ ಅಶ್ವಸವಾರರ ಎಂಟು ಚಿತ್ರಗಳಲ್ಲಿ ಮೂರಕ್ಕೆ ಕತ್ತು ಮತ್ತು ಬಾಲದ ಮೇಲೆ ಹೆಚ್ಚು ರೋಮಗಳನ್ನು ಚಿಕ್ಕ ಚಿಕ್ಕ ಗೆರೆಗಳ ರೂಪದಲ್ಲಿ ತೋರಿಸಿದೆ. ಇನ್ನೂ ಆರು ಕುದುರೆ ಸವಾರರ ಕುದುರೆಗಳ ಬಾಲಕ್ಕೆ ಅಧಿಕವಾದ ರೋಮಗಳನ್ನು ರಚಿಸಲಾಗಿದೆ. ಇವುಗಳಲ್ಲಿ ನಾಲ್ಕು ಕುದುರೆ ಸವಾರರ ಕೈಯಲ್ಲಿ ಖಡ್ಗ ರೀತಿಯ ಸಾಧನ ಇದ್ದು, ಇನ್ನು ಎರಡು ಅಶ್ವಸವಾರರ ಕೈಯಲ್ಲಿ ಭರ್ಚಿರೂಪದ ಸಾಧನವನ್ನು ಎಸೆಯುವ ರೀತಿಯಲ್ಲಿ ರಚಿಸಲಾಗಿದೆ. ವ್ಯಕ್ತಿಗಳು ಚಿತ್ರಗಳು ವ್ಯಕ್ತಿಗಳ

೧ನೇ ಕಲ್ಲಾಸರೆ ಚಿತ್ರಗಳು ಹಿರೇಬೆನಕಲ್



ಸಾಲುನಿಂತ ಮನುಷ್ಯರು, ಅಶ್ವದಾರಿಗಳು



ಸಾಲು ಮನುಷ್ಯರು



ಕುದುರೆ ಸವಾರರು


೧ನೇ ಕಲ್ಲಾಸರೆಯ ಚಿತ್ರಗಳು ಹಿರೇಬನಕಲ್



ಸಾಲುನಿಂತ ಮನುಷ್ಯರು



ಕೊಡಲಿ, ಭರ್ಚಿದಾರಿ ಮನುಷ್ಯ




ಸಾಲುನಿಂತ ಮನುಷ್ಯರು, ಕೊನೆಯಲ್ಲಿ ಕೊಡಲಿ ಹಿಡಿದ ಮನುಷ್ಯ

೧ನೇ ಕಲ್ಲಾಸರೆಯ ಹಿರೇಬನಕಲ್ ಚಿತ್ರಗಳು



ಅಶ್ವದಾರಿ, ಸಾಲುನಿಂತ ಮನುಷ್ಯರು




ಸಾಲಾಗಿನಿಂತ ಮನುಷ್ಯರು



ಕುದುರೆ ಸವಾರರು


ಹಿರೇಬೆನಕಲ್ಲಿನ ಕಲ್ಲಾಸರೆಯ ಚಿತ್ರಗಳು



೨ನೇ ಕಲ್ಲಾಸರೆಯ ರೇಖಾಚಿತ್ರಗಳು



೧೬ನೇ ಕಲ್ಲಾಸರೆಯ ಹಲ್ಲಿ ರೇಖಾಚಿತ್ರಗಳು



೧೭ನೇ ಕಲ್ಲಾಸರೆಯ ರೇಖಾಚಿತ್ರಗಳು

ಗುಂಪನ್ನು ಹೊರತುಪಡಿಸಿ ಇಲ್ಲಿ ೧೨ ಜನರ ಬಿಡಿ ಚಿತ್ರಗಳಿವೆ. ಒಬ್ಬವ್ಯಕ್ತಿ ಚಿತ್ರ ತೊಡೆಯವರೆಗಿನ ದೊಡ್ಡ ವ್ಯಕ್ತಿಯ ಚಿತ್ರವಾಗಿದೆ. ಇನ್ನುಳಿದ ಜನರ ಚಿತ್ರಗಳು ಚಿಕ್ಕದಾಗಿ ಅಲ್ಲಲ್ಲಿ ವಿವಿಧ ಭಂಗಿಯಲ್ಲಿ ರಚಿಸಲಾಗಿದೆ. ಇದರಲ್ಲಿ ಎರಡು ಕೈಯಲ್ಲಿ ಬಡಿಗೆ (ಬಿದರು) ಹಿಡಿದು ಮೇಲಕ್ಕೆ ಎತ್ತಿ ನಿಂತಿರುವ ವ್ಯಕ್ತಿ ಚಿತ್ರವಿದೆ. ಇದರ ಮೇಲೆಯೆ ಎತ್ತಿನ ಮೇಲೆ ಹಿಮ್ಮುಖವಾಗಿ ಕುಳಿತ ಮನುಷ್ಯನ ಚಿತ್ರವಿದೆ. ಐದು ನವಿಲುಗಳು ನೈಜರೂಪಕ್ಕೆ ಹತ್ತಿರವಾಗಿದ್ದು, ಕುಳಿತ ಭಂಗಿಯಲ್ಲಿವೆ. ಮೂರು ಇಣಿಯುಳ್ಳ ಎತ್ತು, ಜಿಂಕೆ, ಪ್ರಾಣಿಗಳು ಸರಳ ರೇಖೆಗಳ ಮೂಲಕ ನೈಜತೆಗೆ ಸಮೀಪವಾಗಿ ತೋರಿಸಲಾಗಿದೆ. ಒಟ್ಟಾರೆಯಾಗಿ ಈ ಆದಿಚಿತ್ರಕಲೆಯ ಕಲ್ಲಾಸರೆಯ ಕೃತಿಯು ನೋಡುಗರ ಮನಸ್ಸಿಗೆ ಕುತೂಹಲ ಮಾಡುವಂತೆ ಮಾಡುತ್ತದೆನ್ನಬಹುದು.

ಗಡ್ಡಿ

ಗಂಗಾವತಿಯಿಂದ ದಾಸನಾಳದ ಮೂಲಕ ಆಗೋಲಿಗೆ ಹೋಗುವ ರಸ್ತೆಯಲ್ಲಿ ಗಡ್ಡಿ ಎಂಬ ಚಿಕ್ಕ ಗ್ರಾಮವಿದೆ. ಗಂಗಾವತಿಯಿಂದ ಸುಮಾರು ೧೦ ಕಿ.ಮೀ. ದಾಸನಾಳ ಇಲ್ಲಿಂದ ಸು-೪ ಕಿ.ಮೀ. ದೂರದಲ್ಲಿ ಗಡ್ಡಿಯಿದೆ.

ಕಲ್ಲಾಸರೆ : ಒಂದು

ಗಡ್ಡಿ ಗ್ರಾಮದಿಂದ ಸು. ೩ ಕಿ.ಮೀ. ದೂರದಲ್ಲಿ ಶಿಲಾಬೆಟ್ಟ ಒಂದನ್ನು ಹತ್ತಿ (ಏರಿ) ಇಳಿದು ಇನ್ನೊಂದು ಗುಡ್ಡ(ಬೆಟ್ಟ)ವನ್ನು ಹತ್ತಬೇಕು. ಇಲ್ಲಿ ಬೃಹದಾಕಾರದ ಗುಂಡುಗಳು ಒಂದನ್ನೊಂದು ಗುಂಪು ಕಟ್ಟಿಕೊಂಡಂತೆ ಕಾಣುತ್ತದೆ. ಇದು ದೊಡ್ಡ ಗವಿಯನ್ನು ಹೊಂದಿದೆ. ಈ ಗವಿ ಬಲ ಗುಂಡಿನ ಭಾಗದಲ್ಲಿ ಏಳು ಜನರ ಕಂದು-ಕೆಂಪು ಬಣ್ಣದಿಂದ ರಚಿಸಲಾಗಿದೆ. ಈ ಚಿತ್ರಗಳು ಎರಡರಿಂದ ಮೂರು ಅಡಿಗಳಷ್ಟು ಅಳತೆಯನ್ನು ಹೊಂದಿವೆ. ಮತ್ತು ಮುಂಗಾಲುಗಳನ್ನು ಎತ್ತರಿಸಿಕೊಂಡು ನಿಂತ ಕುದುರೆಯ ಸವಾರನು ಇದ್ದಾನೆ. ಮೇಲಿನ ಮೊದಲ ಮನುಷ್ಯನ ಚಿತ್ರದಲ್ಲಿ ದೇಹದ ತುಂಬೆಲ್ಲಾ ರೇಖೆಗಳ ಮೂಲಕ ತೋರಿಸಲಾಗಿದ್ದು, ಇವನ ಕೈಯಲ್ಲಿ ಭಾಣವನ್ನು ಬಿಡುವಂತೆ ಬಿಲ್ಲನ್ನು ತೋರಿಸಲಾಗಿದೆ. ಈ ಇಬ್ಬರು ಮನುಷ್ಯರು ಒಬ್ಬರನ್ನೊಬ್ಬರು ಎದುರು ಮುಖ ಭಂಗಿಯಲ್ಲಿದ್ದು, ಕಾದಾಟದ ಸನ್ನಿವೇಶದಲ್ಲಿ ರಚಿಸಲಾಗಿದೆ. ಈ ಚಿತ್ರದ ಕೆಳಗೆ ನಿಂತ ಮನುಷ್ಯನ ಕೈಯಲ್ಲಿ ಬಿಲ್ಲನ್ನು ಹಿಡಿದ ಕುದುರೆ ಸವಾರನನ್ನು ಕಾಣಬಹುದು. ಇವನ ಹಿಂದೆ ಒಬ್ಬ ಕುದುರೆ ಸವಾರನಿದ್ದು, ಇವನ ಕುದುರೆಯು ಅಸ್ಪಷ್ಟವಾಗಿದೆ. ಇದರ ಹಿಂದಕ್ಕೆ ಕಾಡು ಜಿಂಕೆಯನ್ನು ಮುಖದಿಂದ ದೇಹದ ಭಾಗದವರೆಗೆ ರಚಿಸಲಾಗಿದೆ. ಈ ಚಿತ್ರದ ಮುಂದೆ ಎರಡು ಕಾಲುಗಳು ಅಗಲಿಸಿಕೊಂಡು ನಿಂತ ಮನುಷ್ಯನ ಚಿತ್ರವಿದೆ. ಬಿಲ್ಲು ಹಿಡಿದ ಕುದುರೆ ಸವಾರನ ಮುಂದಕ್ಕೆ ಚಿಕ್ಕ ಮನುಷ್ಯನಿದ್ದು, ಇದರ ಮುಂದೆ ಚಿಕ್ಕವನಿಗಿಂತ ಸ್ವಲ್ಪ ದೊಡ್ಡ ಮನುಷ್ಯನು ಎರಡು ಕಾಲುಗಳನ್ನು ಅಗಲಿಸಿಕೊಂಡು ನಿಂತ ವ್ಯಕ್ತಿಯ ಚಿತ್ರವಿದೆ. ಒಟ್ಟಾರೆಯಾಗಿ ಈ ಸನ್ನಿವೇಷವನ್ನು ನೋಡಿದರೆ ಕುದುರೆ ಸವಾರರು ಭೇಟಿಯ ಸಂದರ್ಭದಲ್ಲಿದ್ದುದ್ದಾಗಿ ಕಂಡುಬರುತ್ತದೆ.

ಗಡ್ಡಿಯ ೧ನೇ ಕಲ್ಲಾಸರೆ ಚಿತ್ರಗಳು



ಮನುಷ್ಯರು, ಅಶ್ವಸವಾರರು



ಗಡ್ಡಿ ಗ್ರಾಮಸ್ಥರೊಂದಿಗೆ ಸಂಶೋಧಕ

ಆಗೋಲಿ

ಗಂಗಾವತಿಯಿಂದ ದಾಸನಾಳ ಮೂಲಕ, ಹಂಪಸದುರ್ಗಕ್ಕೆ ಹೋಗುವ ರಸ್ತೆಯಲ್ಲಿ ಆಗೋಲಿ ಗ್ರಾಮವಿದೆ. ಇಲ್ಲಿ ಎರಡು ಬಯಲು ಬಂಡೆ ಚಿತ್ರಗಳಿದ್ದು, ಒಂದು ರೇಖಾವರ್ಣದಿಂದ ಮತ್ತೊಂದು ಗೀರು ಚಿತ್ರದಿಂದ ಕೂಡಿವೆ.

ಬಯಲು ಬಂಡೆ : ಒಂದು

ಆಗೋಲಿ ಗ್ರಾಮದಿಂದ ಹುಸೇನ್ ಎಚ್. ಓಲಕ್ಕೆ ಸು. ಒಂದು ಕಿ.ಮೀ. ದೂರವಿದ್ದು, ಈ ಓಲದ ಹತ್ತಿರವೇ ಬೆಟ್ಟದ ಕೆಳಗೆ ಬಯಲು ಬಂಡೆಯ ಗುಂಡಿನ ಭಾಗದಲ್ಲಿ ಮಂಡಲಕ್ಕೆ ಸಂಬಂಧಿಸಿದ ಕೆಂಪುವರ್ಣದ ಚಿತ್ರವಿದ್ದು. ರೇಖೆಗಳ ಮೂಲಕ ನಾಲ್ಕು ಮುಖವನ್ನು ನಾಲ್ಕು ದಿಕ್ಕಿನ ಕಡೆ ಇರುವ ಆಮೆಯ ಹೋಲಿಕೆಯ ಮಂಡಲ ಚಿತ್ರ ಇದಾಗಿದೆ. ಇದರ ಎಡ ಭಾಗದ ಕೆಳಗೆ ಬಿಳಿ ವರ್ಣದ ಚಿಕ್ಕ ಮನುಷ್ಯನ ಹೋಲಿಕೆಯ ಚಿತ್ರವಿದೆ. ಇದಲ್ಲದೇ ಇನ್ನೂ ಕೆಳಗಿನ ಭಾಗದಲ್ಲಿ ಅತೀ ಚಿಕ್ಕ ಚಿಕ್ಕ ರೇಖಾ ಚಿತ್ರಗಳು ಕಂಡುಬರುತ್ತವೆ. ಬಿಳಿ ಮತ್ತು ಅತಿ ಚಿಕ್ಕ ಚಿಕ್ಕ ಕೆಂಪು ವರ್ಣ ಚಿತ್ರಗಳು ಇತಿಹಾಸ ಕಾಲಕ್ಕೆ ಸಂಬಂಧಿಸಿದವು ಎನ್ನಬಹುದು. ಆದರೆ ಮಂಡಲ ಚಿತ್ರವು ಇತಿಹಾಸ ಕಾಲದ ಪೂರ್ವದ್ದು ಎಂದು ತಿಳಿಯಬಹುದು.

ಬಯಲು ಬಂಡೆ : ಎರಡು

ಈ ಬಯಲು ಬಂಡೆ ಚಿತ್ರವಿರುವ ಒಂದನೆಯ ಬಯಲು ಬಂಡೆಯ ಹತ್ತಿರದಲ್ಲಿದ್ದು, ಇದು ಗುಂಡಿನ ಮೇಲಿನ ಆನೆಯ ಗೀರು ಚಿತ್ರವಾಗಿದೆ. ಎಡಮುಖವಾಗಿ ನಿಂತದ್ದು ತೋರುತ್ತದೆ. ಸೊಂಡಲಿನ ಭಾಗವು ಅಸ್ಪಷ್ಟವಾಗಿದ್ದು, ಬಾಲದ ಕೊನೆಯಲ್ಲಿ ರೋಮಗಳನ್ನು ತೋರಿಸಲಾಗಿದೆ. ಇದು ಎರಡುವರೆಯಿಂದ ಮೂರು ಅಡಿಯ ಅಂದಾಜು ಚಿತ್ರವಾಗಿದೆ. ಇದರ ಹಿಂಬದಿಯಲ್ಲಿ ಹೂವಿನ ಆಕಾರದ ಗೀರು ಚಿತ್ರವಿದೆ.

ಹಂಪಸದುರ್ಗ

ಹಂಪಸದುರ್ಗ ದಾಸನಾಳದಿಂದ ಆಗೋಲಿ ನಂತರ ಈ ಗ್ರಾಮವಿದೆ. ಇಲ್ಲಿ ಒಂದು ಗವಿ ಚಿತ್ರ ಮತ್ತು ಕಲ್ಲಾಸರೆ ವರ್ಣಚಿತ್ರಗಳು ಕಂಡುಬಂದಿವೆ.

ಕಲ್ಲಾಸರೆ : ಒಂದು

ಈ ಕಲ್ಲಾಸರೆಯು ಹಂಪಸದುರ್ಗ ಗ್ರಾಮದಿಂದ ಕಾಲುದಾರಿಯ ಮಾರ್ಗವಾಗಿ ಸು. ಒಂದುವರೆ ಕಿ.ಮೀ. ದೂರದ ಬೆಟ್ಟದಲ್ಲಿದೆ. ಈ ಕಲ್ಲಾಸರೆಯ ಮೇಲೆ ಕಂದು-ಕೆಂಪು ವರ್ಣದಿಂದ ನಿಂತ ಭಂಗಿಯ ಆಂಜನೇಯನನ್ನು ಅಲಂಕೃತವಾಗಿ ಚಿತ್ರಿಸಲಾಗಿದೆ. ಈ ಚಿತ್ರವು ಅಸ್ಪಷ್ಟವಾಗಿದ್ದು, ರೇಖೇಗಳಿಂದ ಆಕಾರವನ್ನು ರಚಿಸಿರುವುದು ಕಂಡುಬರತ್ತದೆ. ಇದರ ಮೇಲೆಯೇ ಬಿಳಿವರ್ಣದ ರೋಮನ್ ಸಂಖ್ಯೆಯ 'U'ವನ್ನು ಒಂದರ ಮೇಲೊಂದರಂತೆ ಸಣ್ಣ ಮತ್ತು ದೊಡ್ಡವುಗಳನ್ನು




ಮಂಡಲ ಚಿತ್ರ ಆಗೋಲಿ, ೧ನೇ ಕಲ್ಲಾಸರೆ



ಆಗೋಲಿ, ೧ನೇ ಕಲ್ಲಾಸರೆ



ಆನೆಯ ಗೀರುಚಿತ್ರ, ಆಗೋಲಿ



ಹೂವಿನ ಗೀರುಚಿತ್ರ, ಆಗೋಲಿ



ಆನೆ ಮತ್ತು ಹೂವಿನಚಿತ್ರ ಆಗೋಲಿ ೨ನೇ ಕಲ್ಲಾಸರೆ

ಹಂಪಸದುರ್ಗ ಕಲ್ಲಾಸರೆಯ ಚಿತ್ರಗಳು



ಹಂಪಸದುರ್ಗ ಎತ್ತುಗಳು, ೨ನೇ ಕಲ್ಲಾಸರೆಯ ಗವಿಚಿತ್ರ




ಗವಿ ಕಲ್ಲಾಸರೆ ೨



ಆಂಜನೇಯ ೧



ಬಿಳಿವರ್ಣದ ಮಂಡಲಚಿತ್ರ ಹಂಪಸದುರ್ಗ ೩ನೇ ಕಲ್ಲಾಸರೆ



ಬಿಳಿವರ್ಣದ ರೇಖಾಚಿತ್ರಗಳು, ಹಂಪಸದುರ್ಗಾ, ೩ನೇ ಕಲ್ಲಾಸರೆ

ಇಂದಿನ ಆಧುನಿಕವಾಗಿ ಬರೆಯಲಾಗಿದೆ. ಇದು ಆಂಜನೇಯನ ಚಿತ್ರದ ಭಾಗವನ್ನು ಆವರಿಸಿದೆ. ಇದರಿಂದ ಆಂಜನೇಯನ ಚಿತ್ರವು ಸ್ಪಷ್ಟವಾಗಿ ಕಾಣದೇ ಇರುವುದು ಮತ್ತು ಈ ಕಲ್ಲಾಸರೆ ಸ್ಥಳವು ಓಲಕ್ಕೆ ಹೋಗುವ ಗುಡ್ಡದ ದಾರಿಯಲ್ಲಿದ್ದರಿಂದ ಜನರು ದೇವರ ಸ್ವರೂಪವಾಗಿ ಕಂಡು ಅದರ ಮೇಲೆ ಕುಂಕುಮ ಭಂಡಾರ ಇತ್ಯಾದಿಗಳನ್ನು ಹಚ್ಚಿರುವುದು ಕಂಡುಬರುತ್ತದೆ.

ಕಲ್ಲಾಸರೆ :ಎರಡು

ಈ ಗವಿ ವರ್ಣಚಿತ್ರ ನೆಲೆಯ ಹಂಪಸದುರ್ಗ ಗ್ರಾಮದಿಂದ ಬೆಟ್ಟದ ಓಲಕ್ಕೆ ಸುಮಾರು ಎರಡುವರೆ ಕಿ.ಮೀ. ದೂರದಲ್ಲಿದೆ. ಈ ಓಲಕ್ಕೆ ಹತ್ತಿರವೇ ಕಲ್ಲುಗುಂಡುಗಳಿಂದ ಕೂಡಿ ಒಂದು ಗವಿ ಕಲ್ಲಾಸರೆಯಿದೆ ಈ ಗವಿಯ ಒಂದು ಗುಂಡಿನ ಮೇಲೆ ಕಂದು-ಕೆಂಪು ವರ್ಣದ ಮೂರು ಎತ್ತಿನ ಚಿತ್ರಗಳಿವೆ. ಇವು ಹೊರ ರೇಖೆಗಳಿಂದ ನೈಜರೂಪಕ್ಕೆ ಹತ್ತಿರವಾಗಿ ತೋರಿಸಲಾಗಿದೆ. ಈ ಗುಂಪಿನ ಎತ್ತುಗಳು ಒಂದನ್ನೊಂದು ಮುಖಮಾಡಿಕೊಂಡು ನಿಂತಂತೆ ತೋರುತ್ತವೆ. ಆದರೆ ಸ್ವಲ್ಪ ನಾಶವಾದಂತೆ ಕಾಣುವ ಈ ನೆಲೆಯ ಚಿತ್ರಗಳು ನೋಡುಗರು ಬಸವ ಚಿತ್ರಗಳು ಎಂದು ಕರೆಯುವ ವಾಡಿಕೆಯಿದೆ.

ರಾಮದುರ್ಗ

ಹಂಪಸದುರ್ಗದಿಂದ ಸು. ೨. ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಒಂದು ಗವಿವರ್ಣ ಕಲ್ಲಾಸರೆ ಕಂಡುಬಂದಿದೆ.


ಕಲ್ಲಾಸರೆ : ಒಂದು

ರಾಮದುರ್ಗ ಕೆರೆಯ ದಂಡೆಯ ಪಕ್ಕದಲ್ಲಿ ಅರಣ್ಯ ಇಲಾಖೆಯ ಗಿಡ ಮರಗಳು ಇವೆ. ಇಲ್ಲಿಯೇ ನೀರಿನ ಚೆಕ್‌ಡ್ಯಾಂನ್ನು ಚಿಕ್ಕದಾಗಿ ಕಲ್ಲಿನ ಗೋಡೆಯನ್ನು ನಿರ್ಮಾಣಮಾಡಲಾಗಿದೆ.ಇದರ ಹತ್ತಿರ ಆಡಿನಗುಡ್ಡ ಇದೆ. ಇದರ ಕಾಲುದಾರಿಯಲ್ಲಿ ಮುಂದಕ್ಕೆ ಹೋದರೆ ಅಲ್ಲಿ ಗವಿಕಲ್ಲಾಸರೆಯ ನೆಲೆಯಿದೆ. ಈ ಸ್ಥಳದ ಒಂದು ದೊಡ್ಡ ಇಳಿಜಾರಿನ ಗುಂಡಿನ ಮೇಲೆ ಬಿಳಿ ವರ್ಣದಿಂದ ಹಳೆಯಗನ್ನಡ ಲಿಪಿಯಲ್ಲಿ ಸಣ್ಣ ಒಂಬತ್ತು ಸಾಲುಗಳನ್ನು ಬರೆಯಲಾಗಿದೆ. ಇದರ ಕೆಳಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ ಎರಡು ಗಂಡು ಮತ್ತು ಒಂದು ಹೆಣ್ಣುವಿನ ಮನುಷ್ಯಾಕೃತಿಗಳು ಬಿಳಿವರ್ಣದಿಂದ ರಚಿತವಾಗಿವೆ. ವ್ಯಕ್ತಿಯ ಚಿತ್ರಗಳ ಕೈಯಲ್ಲಿ ಕಟ್ಟಿಗೆ ರೂಪದ ಸಾಧನವನ್ನು ಹಿಡಿದುಕೊಂಡದ್ದು ಕಂಡುಬರುತ್ತದೆ. ಇದರಲ್ಲಿನ ಒಂದು ವ್ಯಕ್ತಿ ಚಿತ್ರವು ತನ್ನ ಕೈಯಲ್ಲಿನ ಬಡಗಿಯಿಂದ ಹೆಣ್ಣಾಕೃತಿಯ ಕಡೆಗೆ ತೋರಿಸಲಾಗಿದೆ. ಹೆಣ್ಣಾಕೃತಿಯನ್ನು ಸರಳವಾದ ರೇಖೆಗಳಿಂದ ಚಿತ್ರಿಸಿದ್ದು, ರುಂಡ ಇಲ್ಲದೆ ಕುತ್ತಿಗೆಯಿಂದ ಕಾಲುಗಳು, ಇಳಿಬಿಟ್ಟ ಕೈಗಳು, ಮತ್ತು ಎರಡು ಸ್ತನಗಳನ್ನು ನಡುವಿನ ಅಕ್ಕಪಕ್ಕದಲ್ಲಿ ಚೋರಿಸಲಾಗಿದೆ. ಈ ಮೂರು ಚಿತ್ರಗಳು ಒಂದುಕಡೆಯಿದ್ದು, ಇನ್ನೊಂದು ಬಿಳಿವರ್ಣದ ವ್ಯಕ್ತಿಚಿತ್ರವು ಬಡಿಗೆ ರೂಪದ ಸಾಧನ ಹಿಡಿದು ಸ್ವಲ್ಪದೂರದಲ್ಲಿ ನಿಂತಿರುವುದು ಕಂಡು ಬರುತ್ತದೆ. ಈ ಒಟ್ಟಾರೆ ಚಿತ್ರವನ್ನು ಹಳೆಗನ್ನಡದಲ್ಲಿ ಬರೆದ ಲಿಪಿಯ ಸಾಲುಗಳ ಅರ್ಥಕ್ಕೆ ಹೊಂದಿಕೊಂಡಂತೆ

ರಾಮದುರ್ಗದ (ಗಂಗಾವತಿ ತಾಲೂಕು) ೧ನೇ ಕಲ್ಲಾಸರೆಚಿತ್ರಗಳು



ಮನುಷ್ಯರ ಚಿತ್ರಗಳು ಮತ್ತು ಶಾಸನ



ಶಾಸನ



ಮನುಷ್ಯರ ಚಿತ್ರಗಳು

ರಚಿಸಿರಬಹುದು. ಯಾಕೆಂದರೆ ಚಿತ್ರಕ್ಕೂ ಮತ್ತು ಅಕ್ಷರಗಳ ಲಿಪಿಗೂ ಬಿಳಿವರ್ಣ ಮತ್ತು ಮೂಡಿಸಿದ ವಿಧಾನ ಒಂದೆಯಂತೆ ಮೇಲಿನ ನೋಟಕ್ಕೆ ಕಂಡುಬರುತ್ತದೆ.

ಆನೆಗುಂದಿ

ಗಂಗಾವತಿಯಿಂದ ದಕ್ಷಿಣಕ್ಕೆ ಸುಮಾರು ೧೨ ಕಿ.ಮೀ. ದೂರದಲ್ಲಿ, ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಈ ಗ್ರಾಮವಿದೆ. ಈ ಗ್ರಾಮದ ಹತ್ತಿರ ಮೂರು ಚಿತ್ರ ಕಲ್ಲಾಸರೆಗಳು ಕಂಡುಬಂದಿವೆ.

ಕಲ್ಲಾಸರೆ : ಒಂದು

ಆನೆಗೊಂದಿಯಿಂದ ಗಂಗಾವತಿ ರಸ್ತೆಯ ಎಡಕ್ಕೆ ಮಲ್ಲೇದೇಶ್ವರ ದೇವಸ್ಥಾನದ ಪಕ್ಕದಲ್ಲಿ ಬಾಳೆತೋಟದ ಮೂಲಕ ಸ್ವಲ್ಪ ನಡೆದು ಹೋದರೆ ಅಲ್ಲಿ ಸಣ್ಣದಾಗಿ ಗುಡ್ಡ ಕಾಣುತ್ತದೆ. ಆ ಗುಡ್ಡದ ಛಾವಣಿಯ ಕಲ್ಲಾಸರೆಯಲ್ಲಿ ರುಂಡವಿಲ್ಲದ ಒಂದು ಮನುಷ್ಯಾಕೃತಿ ಇದೆ. ಈ ಚಿತ್ರದಲ್ಲಿ ಎಡಗೈ, ಭುಜದ ನೇರವಾಗಿ ಚಾಚಿ, ಬಲಭುಜ ಅಸ್ಪಷ್ಟವಾಗಿದ್ದು, ಕೆಳ ಇಳಿಬಿಟ್ಟಂತೆ ತೋರುತ್ತದೆ. ಕಾಲುಗಳ ಪಾದಗಳನ್ನು ಸೊಂಟದ ಭಾಗದಿಂದ ಬಾಲವನ್ನು ಇಲ್ಲಿ ತೋರಿಸಲಾಗಿದೆ. ಈ ಚಿತ್ರವು ಕಂದು-ಕೆಂಪು ವರ್ಣದಿಂದ ರಚಿಸಿರುವುದು ಕಂಡುಬರುತ್ತದೆ.

ಈ ಕಲ್ಲಾಸರೆಯ ಎಡದ ಹಿಂದಕ್ಕೆ ಅದೇ ರೀತಿಯ ಎತ್ತರದ ಛಾವಣಿಯ ಕೆಂಪು ವರ್ಣದ ರೇಖಾ ಚಿತ್ರವಿದೆ. ಇದು ಸ್ಪಶ್ಟವಾಗಿಲ್ಲದೆ ಇರುವುದರಿಂದ ಯಾವ ಪ್ರಕಾರದ ಚಿತ್ರವೆಂಬುವುದು ಗೋಚರಿಸದೆ ಇರುವುದಕ್ಕೆ ಕಾರಣವಾಗಿದೆ.


ಈ ಕಲ್ಲಾಸರೆಯ ಛಾವಣಿಯು ಎತ್ತರದಲ್ಲಿರುವುದರಿಂದ ಯಾವುದೆ ರೀತಿಯಲ್ಲಿ ಹತ್ತಿರದಿಂದ ನೋಡಲು ಆ ಚಿತ್ರದ ಸ್ಥಳಕ್ಕೆ ಹೋಗಲು ಬಹಳ ಕಷ್ಟವಾಗಿ ಕಂಡುಬರುತ್ತದೆ.

ಕಲ್ಲಾಸರೆ : ಎರಡು

ಆನೆಗುಂದಿ-ಗಂಗಾವತಿಯ ರಸ್ತೆಯ ಬಲಕ್ಕೆ ನಾರಾಣಪ್ಪನ ಬಾಳೆ ತೋಟದ ಹತ್ತಿರ ಬೆಟ್ಟದ ಕಡಿದಾದ ಒಂದು ಕಲ್ಲಾಸರೆಯಿದೆ. ಇಲ್ಲಿ ಗವಿಕಲ್ಲಾಸರೆ ಬಂಡೆಯ ಛಾವಣಿಗೆ ಬಿಳಿ (ಸುಣ್ಣ)ದಂತೆ ಕಾಣುವ ವರ್ಣದಿಂದ ಕಡ್ಡಿಯಂತಹ ಮನುಷ್ಯಾಕೃತಿಗಳು, ಪ್ರಾಣಿಗಳು, ಹೆಚ್ಚಾಗಿದ್ದು ಇನ್ನು ಕೆಲವು ಸವಾರರಾಗಿ ಇರುವ ಸನ್ನಿವೇಷದ ಚಿತ್ರಗಳಿವೆ. ಮತ್ತು ದುಂಡಾಕಾರದ ಚುಕ್ಕೆಗಳು ಇಲ್ಲಿ ಕಾಣಬಹುದು. ಇವುಗಳಲ್ಲದೆ ಆನೆಯನ್ನು ಹೋಲುವ ಪ್ರಾಣಿಯನ್ನು ರಚಿಸಲಾಗಿದೆ. ಮನುಷ್ಯ, ಪ್ರಾಣಿಗಳು ಒಂದರಪಕ್ಕ ಒಂದರಂತೆ ಗುಂಪಾಗಿ ರಚಿಸಿದ್ದು, ನೋಡುಗರಿಗೆ ಚಿತ್ರಗಳು ಗುರುತಿಸುವಲ್ಲಿ ಗೊಂದಲವನ್ನು ಉಂಟುಮಾಡುತ್ತದೆ. ಆದರೂ ಕೆಲವು ಚಿತ್ರಗಳನ್ನು ಇಲ್ಲಿ ಬಿಡಿ ಬಿಡಿಯಾಗಿ ಛಾಯಾಚಿತ್ರದ ಮೂಲಕ ತೋರಿಸಲಾಗಿದೆ. ಆನೆಯನ್ನು ಹೋಲುವ ಪ್ರಾಣಿ, ಬಿಲ್ಲುಬಾಣ, ಹಿಡಿದು ಪ್ರಾಣಿಯ ಮೇಲೆ ಕುಳಿತಿರುವ ಮಾನವಾಕೃತಿ ಇದ್ದು, ಅಶ್ವ ಸವಾರನಂತೆ ತೋರುತ್ತದೆ. ಮತ್ತು ಇನ್ನೊಂದು ಚಿತ್ರವು ಪ್ರಾಣಿಯ ಮೇಲೆ ಕುಳಿತುಕೊಂಡ ಮನುಷ್ಯಾಕೃತಿ, ಈ ಪ್ರಾಣಿಯ



ಮನುಷ್ಯನಿಗೆ ಬಾಲವಿರುವ ಚಿತ್ರ, ಆನೆಗುಂದಿ ೧ನೇ ಕಲ್ಲಾಸರೆ




ರೇಖಾಚಿತ್ರ ಆನೆಗುಂದಿ, ೧ನೇ ಕಲ್ಲಾಸರೆ



ಆನೆಗುಂದಿ ೧ನೇ ಕಲ್ಲಾಸರೆ



ಆನೆಯಚಿತ್ರ, ಆನೆಗುಂದಿ ೨ನೇ ಕಲ್ಲಾಸರೆ



ಕುದುರೆ ಸವಾರ, ಆನೆಗುಂದಿ ೨ನೇ ಕಲ್ಲಾಸರೆ



ಬಿಲ್ಲುದಾರಿ ಅಶ್ವಸವಾರ, ಆನೆಗುಂದಿ (೨)

ಬಾಲವು ಅತೀ ಉದ್ದವಾಗಿ ತೋರಿಸಿದ್ದು, ತಲೆಯ ಮೇಲೊಂದು ಗರಿಯಂತೆ ಇರುವ ಆಕಾರವನ್ನು ರಚಿಸಲಾಗಿದೆ. ಈ ಗವಿ ಕಲ್ಲಾಸರೆಯಲ್ಲಿ ಅತೀ ಹೆಚ್ಚು ಮನುಷ್ಯರನ್ನು ರೇಖಾ ಕಡ್ಡಿಂತೆ ತೋರಿಸಿದ್ದು, ನೈಜತೆಗೆ ಹೋಲಿಕೆಯಾಗಿ ಕಂಡುಬರುತ್ತವೆ. ಕೆಲವು ಚಿತ್ರಗಳ ಕೈಯಲ್ಲಿ ಬಡಿಗೆಯನ್ನು ಇದ್ದು, ಇನ್ನುಳಿದವುಗಳ ಕಾಲು, ಕೈಗಳು ಅಗಲಿಸಿಕೊಂಡು ನಿಂತಂತೆ ತೋರುತ್ತವೆ.

ಈ ಗವಿಕಲ್ಲಾಸರೆಯ ನೆಲೆಯಲ್ಲಿನ ಚಿತ್ರಗಳನ್ನು ರಚಿಸುವುದು ಸ್ವಲ್ಪ ಕಷ್ಟವು ಹೌದು ಏಕೆಂದರೆ ಕುಳಿತು ಕೊಳ್ಳಲು ಆಗದೆ ಇರುವ ಈ ಸ್ಥಳವು ಮಲಗಿಕೊಂಡು ರಚನೆಯನ್ನು ಮಾಡಿರಬಹುದು.

ಒಟ್ಟಾರೆಯಾಗಿ ವಿಶ್ರಾಂತಿ ಪಡೆಯುವ ಸಮಯದಲ್ಲಿ ಈ ಚಿತ್ರಗಳನ್ನು ರಚಿಸಿರಬಹುದು.

ಕಲ್ಲಾಸರೆ : ಮೂರು

ಎರಡನೇ ಕಲ್ಲಾಸರೆಯಿಂದ ಅನತಿ ದೂರದಲ್ಲಿ ಬಾಳೆ ತೋಟದ ಹತ್ತಿರದಲ್ಲಿ ಈ ಗವಿ ಕಲ್ಲಾಸರೆಯಿದೆ. ಗವಿಯ ಗೂಡಿನ ಛಾವಣಿಯಂತೆ ಮಲಗಿರುವ ಕಲ್ಲು ಬಂಡೆಗೆ ಬಿಳಿ ಮತ್ತು ಕಂದು ಕೆಂಪು ವರ್ಣದಿಂದ ಮಾನವಾಕೃತಿ, ಪ್ರಾಣಿ, ವೃತ್ತಾಕಾರದ ಚುಕ್ಕೆಗಳು ಮೂಡಿಬಂದಿವೆ. ಕೆಂಪುವರ್ಣದ ಚಿತ್ರಗಳು ಬೆರಳೆಣಿಕೆಯಲ್ಲಿದ್ದರೆ ಬಿಳಿವರ್ಣದ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಕುದುರೆ ಸವಾರನು ತನ್ನ ಕೈಯಲ್ಲಿ ಭರ್ಚಿಯನ್ನು ಎಸೆಯುವಂತೆ ಒಂದು ಚಿತ್ರವಿದೆ. ಇದರ ಹಿಂದುಗಡೆ ಕುದುರೆ ಸವಾರನ ಕೈಯಲ್ಲಿ ಒಂದು ವೃತ್ತಾಕಾರದ ಚೆಂಡನ್ನು ಹಿಡಿಯಲಾಗಿದೆ. ಈ ಎರಡೂ ಕುದುರೆ ಸವಾರರ ಚಿತ್ರಗಳ ಮುಂಚಿತವಾಗಿ ಕೆಂಪು ವರ್ಣ ಚಿತ್ರಗಳೆರಡು, ಮನುಷ್ಯಾಕೃತಿಯಲ್ಲಿ ಕಂಡುಬರುತ್ತವೆ. ಮತ್ತು ಇನ್ನೊಂದು ಇದೆ. ಕೆಂಪು ವರ್ಣ ಚಿತ್ರದ ಮನುಷ್ಯನು ಕುದುರೆ ಸವಾರರ ಹಿಂದಕ್ಕೆ ಖಾಲಿಯಿರುವ ಸ್ಥಳದಲ್ಲಿ ರಚಿಸಲಾಗಿದೆ. ಈ ಚಿತ್ರವು ಕೈ. ಕಾಲುಗಳೆರಡು ಅಗಲಿಕೊಂಡು ನಿಂತಿರುವುದು ಇಲ್ಲಿದೆ. ಈ ಚಿತ್ರದ ಕೆಳಗೆ ಒಂದು ವೃತ್ತವನ್ನು ಹಾಕಿ ಅದರ ಮೇಲೆ ಎಂಟು ಸಣ್ಣ ಸಣ್ಣ ಗೆರೆಗಳನ್ನು ಎಳೆದು ಮಧ್ಯದಲ್ಲಿ ಚಿಕ್ಕ ವ್ಯಕ್ತಿ ಅಥವಾ ಹುಡುಗನಂತಿರುವ ಚಿತ್ರವನ್ನು ಬರೆದು ವೃತ್ತಾಕಾರದ ಸುತ್ತಲೂ ಕೈ ಕೈ ಹಿಡಿದು ಒಂಬತ್ತು ಜನರು ನಿಂತಿರುವಂತೆ ಚಿತ್ರ ರಚನೆ ಮಾಡಲಾಗಿದೆ. ಇದರ ಕೆಳಗಡೆ ಒಂದು ವೃತ್ತದಲ್ಲಿ ಮನುಷ್ಯನಿಂತು ಎಡಗೈ ಮೊಣಕೈಯಿಂದ ಕೆಳಕ್ಕೆ ಇಳಿಹಾಕಿ, ಬಲಗೈ ಚಾಚಿ ಮುಂದೆ ಒಂದು ಸಣ್ಣ ವೃತ್ತದಲ್ಲಿ ಕೆಂಪು ವರ್ಣದಿಂದ ಬಿಳಿವರ್ಣದ ಬಾಹ್ಯಾರೇಖೆಗಳನ್ನು ಬಿಟ್ಟು ಪೂರ್ಣವಾಗಿ ಲೇಪಿಸಲಾಗಿದೆ, ಈ ಮನುಷ್ಯನ ಸುತ್ತಲೂ ಇರುವ ವೃತ್ತವು ಈ ಮೊದಲ ಇರುವ ಮನುಷ್ಯನ ವೃತ್ತಕ್ಕಿಂತಲೂ ಸ್ವಲ್ಪ ದೊಡ್ಡದಾಗಿದ್ದು, ಇದರ ಸುತ್ತಲು ಮನುಷ್ಯರನ್ನು ನಿಲ್ಲಿಸಿದಂತೆ ತೋರಿಸಲಾಗಿದೆ. ಆದರೆ ಕೈ ಕೈ ಹಿಡಿಯಲಾರದೆ ದೂರ ದೂರವಾಗಿ ಚಿತ್ರದಲ್ಲಿ ರಚನೆಮಾಡಲಾಗಿದೆ. ಇನ್ನು ಇವುಗಳಲ್ಲದೆ ಹಲವಾರು ಚಿಕ್ಕ ಚಿಕ್ಕ ಮನುಷ್ಯ, ಪ್ರಾಣಿ, ಮುಂತಾದ ಸಾಂಕೇತಿಕವಾದ ಚಿತ್ರಗಳು ಮೂಡಿಬಂದಿವೆ. ಈ ನೆಲೆಯಲ್ಲಿರುವ ಎಲ್ಲಾ ಚಿತ್ರಗಳು ಕಡ್ಡಿ ಚಿತ್ರಗಳಾಗಿದ್ದು, ಬಾಹ್ಯರೇಖೆಗಳಿಂದ ಕೂಡಿವೆ. ಒಟ್ಟಾರೆಯಾಗಿ ಈ ಸನ್ನಿವೇಷವನ್ನು ಗಮನಿಸಿದರೆ ಕ್ರೀಡೆಗೆ ಸಂಬಂಧಿಸಿದ ಚಿತ್ರಗಳಾಗಿ


ಗೋಚರಿಸಬಹುದು. ಇಲ್ಲಿ ಚಿತ್ರಗಳೆಲ್ಲಾ ಬೆರಳಿನಲ್ಲಿ ಅಥವಾ ಕಡ್ಡಿಯಿಂದ ಬಿಳಿವರ್ಣ(ಸುಣ್ಣ)ದಿಂದ ಚಿತ್ರಗಳನ್ನು ರಚಿಸಿರಬಹುದು.

ಕಡೆಬಾಗಿಲು

ಗವಿಕಲ್ಲಾಸರೆ : ಒಂದು

ಆನೆಗುಂದಿಯಿಂದ ಸು.೩ ಕಿ.ಮೀ. ದೂರದಲ್ಲಿ ಗಂಗಾವತಿಗೆ ಹೋಗುವ ರಸ್ತೆಯಲ್ಲಿ ಈ ಗ್ರಾಮವಿದೆ. ಈ ಗ್ರಾಮದ ಪಕ್ಕದಲ್ಲೇ ಬೆಟ್ಟವಿದ್ದು, ಬೆಟ್ಟದ ಮೇಲೆ ಗವಿವರ್ಣ ಚಿತ್ರವಿದೆ. ಇರುವ ನೆಲೆಯು ಚಿಕ್ಕ ಕಡಿದಾದ ಗುಂಡುಗಳ ಮಧ್ಯೆಯಿಂದ ಹೋಗಬೇಕಾಗುತ್ತದೆ. ಇಲ್ಲಿನ ಗವಿಕಲ್ಲಾಸರೆ ಪ್ರಾಗೈತಿಹಾಸಿಕ ಚಿತ್ರವು ಅಂದಾಜು. ಎರಡುರಿಂದ ಮೂರು ಅಡಿಗಳಷ್ಟು ಇದ್ದು, ಕಂದು-ಗೆಂಪು ವರ್ಣದಿಂದ ಚಿತ್ರಗಳು ರಚನೆಯಾಗಿವೆ. ಮೇಲಿನ ಎಡಭಾಗದಲ್ಲಿ ಅಸ್ಪಷ್ಟವಾಗಿ ಕಾಣುವ ಚಿತ್ರಗಳಲ್ಲಿ ಒಂದು ನಾಯಿಯಂತಹ ಪ್ರಾಣಿಯ ತಲೆಯ ಮೇಲೆ ಐದು ಸಣ್ಣ ಗೆರೆಗಳನ್ನು ಕೂದಲಿನಂತೆ ಎಳೆಯಲಾಗಿದ್ದು, ಚಿಕ್ಕ ಬಾಲದಂತೆ ಹಿಂಭಾಗದಲ್ಲಿ ಕೆಲವು ರೇಖೇಗಳನ್ನು ತೋರಿಸಲಾಗಿದೆ. ಮುಂದೊಂದು ಹಿಂದೊಂದು ಕಾಲುಗಳು ಇದ್ದು, ನೋಡುಗನಿಗೆ ಬಲದಿಕ್ಕಿನ ಮುಖವಾಗಿ ಪ್ರಾಣಿಯನ್ನು ತೋರಿಸಲಾಗಿದೆ. ಈ ಚಿತ್ರವು ಚಿಕ್ಕದಾಗಿದೆ. ಈ ಚಿತ್ರದ ಹಿಂದೆ ಕಂದುಕೆಂಪು ವರ್ಣದ ಚಿತ್ರಗಳು ವೈಪರಿತ್ಯದಿಂದ ನಾಶವಾಗಿ ಅಸ್ಪಷ್ಟವಾದಕಾರಣ ಯಾವ ಚಿತ್ರಗಳು ಎಂದು ಗುರುತಿಸುವುದು ಕಷ್ಟವಾದರೂ ಇದೇ ರೀತಿಯ ಪ್ರಾಣಿಯ ಗುಂಪಾಗಿ ಒಂದರಯಿಂದೆ ಇನ್ನೊಂದು ಎಂಬಂತೆ ಇರುವುದು ಕಂಡುಬರುತ್ತದೆ. ಈ ಪ್ರಾಣಿಯ ಕೆಳಭಾಗದಲ್ಲಿ ಇಬ್ಬರು ವ್ಯಕ್ತಿಗಳು ಜೋಡಿಯಾಗಿ ನಿಂತಿರುವ ಚಿತ್ರಗಳಿವೆ. ಈ ಚಿತ್ರಗಳ ಬಲಭಾಗದ ಕೆಳಗಡೆ ನೋಡುಗನಿಗೆ ಎಡಮುಖವಾಗಿ ನಿಂತಿರುವ ಒಂದು ಕವಲು ಕೊಂಬಿನ ತಲೆ, ಮುಖ, ಕುತ್ತಿಗೆ ದೇಹ, ಹಿಂದಿನ ತೊಡೆಯ ಭಾಗವಿದ್ದು, ಮುಂದೊಂದು ಹಿಂದೊಂದು ಎರಡು ಕಾಲುಗಳ ಚಿಗರೆ ಪ್ರಾಣಿಯನ್ನು ತೋರಿಸಲಾಗಿದೆ. ಇದರ ಭಾಗವನ್ನು ಕಂದುಕೆಂಪು ಬಣ್ಣದಿಂದ ಪೂರ್ಣವಾಗಿ ಲೇಪನ ಮಾಡಿ ಚಿತ್ರ ರಚನೆಮಾಡಲಾಗಿದೆ. ಇದರ ಹಿಂದೆ ಸಾಲಾಗಿ ಕವಲು ಕೊಂಬಿನ ಚಿಗರೆಗಳನ್ನು ಅಸ್ಪಷ್ಟವಾದ ರೂಪದಿಂದ ನೋಡಬಹುದು. ಈ ಚಿತ್ರಗಳ ಕೆಳಗೆ ಕಂದು-ಕೆಂಪು ಬಣ್ಣದ ಲೇಪನವಿದೆ. ಇದರ ಅರ್ಧ ಕೆಳಗಿನ ಭಾಗದಲ್ಲಿ ಕೈ ಕೈ ಹಿಡಿದ ೧೦ ಹೆಣ್ಣುಮಕ್ಕಳು ಸಾಲಾಗಿ ಒಂದು ಸಮನಾದ ರೇಖೆಯ ಮೇಲೆ ಸಮವಾಗಿ ಅಳತೆಯಂತೆ ನಿಂತಿದ್ದು, ಇದೇ ರೀತಿಯಲ್ಲಿ ಕೆಳಗೆ ೧೨ ಮಂದಿ ಹೆಣ್ಣುಮಕ್ಕಳು ನಿಂತಿದ್ದಾರೆ. ಇದರ ಪಕ್ಕದಲ್ಲಿ ಕೆಳಗಿನ ಎಡಕ್ಕೆ ಎತ್ತುವಿನ ಆಕಾರವಿರುವ ಒಂದು ಕಂದುಗೆಂಪು ವರ್ಣದ ಪ್ರಾಣಿಯ ಚಿತ್ರವಿದೆ.

ಹತ್ತು ಮಂದಿ ಹೆಣ್ಣುಮಕ್ಕಳು ಕೈ ಕೈ ಹಿಡಿದು ಸಾಲಾಗಿ ನಿಂತಿರುವ ತಂಡದಲ್ಲಿ ಪ್ರತಿಯೊಬ್ಬ ಮಹಿಳೆಯ ತಲೆಯ ಮೇಲೆ ನಾಲ್ಕು ಅಥವಾ ಐದು ಗೆರೆಗಳನ್ನು ಕೂದಲಿನಂತೆ ಎಳೆಯಲಾಗಿದೆ.



ಕಡೆಬಾಗಿಲು ಕಲ್ಲಾಸರೆ ೨



ಕಡೆಬಾಗಿಲು ೨ನೇ ಕಲ್ಲಾಸರೆ




ಸಾಲು ಹೆಣ್ಣುಮಕ್ಕಳ ತಂಡ ಮತ್ತು ಜಿಂಕೆಗಳು, ೨ನೇ ಕಲ್ಲಾಸರೆ



ನಾಯಿ ಮತ್ತು ಜಿಂಕೆಗಳ ಚಿತ್ರ ಕಡೆಬಾಗಿಲು



ಜೋಡಿ ಮನುಷ್ಯರು



ಸಾಲುನಿಂತ ಹೆಣ್ಣುಮಕ್ಕಳ ತಂಡ ಮತ್ತು ಜಿಂಕೆಗಳು, ಕಡೆಬಾಗಿಲು ೧ನೇ ಕಲ್ಲಾಸರೆ

ಈ ಕೇಶರಾಶಿಯನ್ನು ಆಧುನಿಕ ಯುಗದ ಬಾಬ್‌ಕಟ್ ಎಂದು ಕರೆಯುವ ವಿಧಾನದಲ್ಲಿರುವಂತೆ (ಅರ್ಧಕೇಶರಾಶಿ) ತೋರಿಸಲಾಗಿದೆ. ಮತ್ತು ದೇಹವನ್ನು ಹೆಣ್ಣುವಿನ ದೇಹದ ಆಕಾರವಾಗಿ ಎದೆಯ ಭಾಗ ಉಬ್ಬಿಸಿದ್ದು, ನಡುವು ಸಣ್ಣದಾಗಿದ್ದು, ನಡುವಿನ ಕೆಳಭಾಗ ಎದೆಯಭಾಗಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉಬ್ಬಿಸಿ, ಅಗಲವಿರುವಂತೆ, ಅಲ್ಲದೇ ತೊಡೆಯಿಂದ ಕಾಲುಗಳವರೆಗೆ ದಪ್ಪದಿಂದ ತೆಳುವಾಗಿ ತೋರಿಸಲಾಗಿದೆ. ಇದೇ ರೂಪವಾಗಿ ಎರಡನೆಯ ೧೨ ಜನ ಹೆಣ್ಣುಮಕ್ಕಳ ಸಾಲು ಚಿತ್ರಕೂಡ ಮೈತುಂಬಿಕೊಂಡು ನಿಂತಿರುವಂತೆ ಕಾಣುತ್ತವೆ.

ಈ ನೆಲೆಯ ಚಿತ್ರಗಳು ಹಿರೇಬೆಣಕಲ್‌ನ ಒಂದನೆಯ ಕಲ್ಲಾಸರೆಯ ಸಾಲಾಗಿ ಕೈ ಕೈ ಹಿಡಿದ ಜನರ ಚಿತ್ರಗಳಿಗೆ ಹೋಲಿಕೆಯಾಗುತ್ತದೆ. ಆದರೆ ಹಿರೇಬೆಣಕಲ್ ಚಿತ್ರಗಳಿಗಿಂತ ಬೆಳವಣಿಗೆ, ಸೃಜನಾತ್ಮಕತೆ ರೂಪಕವಾಗಿ ಕಡೆಬಾಗಿಲನ ಗವಿ ವರ್ಣ ಚಿತ್ರಗಳು ಕಂದುಗೆಂಪುವರ್ಣಸಮೇತವಾಗಿ ಹಿರೇಬೆಣಕಲ್ ಚಿತ್ರಗಳಿಗಿಂತ ತುಂಬ ಸ್ಪಷ್ಟವಾಗಿ ಕಂಡುಬರುತ್ತವೆ. ಕಡೆಬಾಗಿಲಿನ ಗವಿಚಿತ್ರಗಳು ಸಾಲಾಗಿ ನಿಂತುಕೊಂಡಿರುವುದು ನೋಡಿದರೆ ಯಾವುದೊಂದು ಸಂಭ್ರಮದ ಸಂಕೇತವಾಗಿ ಆಚರಿಸುವಂತೆ ಕಂಡುಬರುತ್ತದೆ.

ಕಲ್ಲಾಸರೆ : ಎರಡು

ಆ ಕಲ್ಲಾಸರೆಯ ಮೊದಲ ಕಲ್ಲಾಸರೆ ಮುಂಚಿತವಾಗಿ ಕೆಳಭಾಗ ಬೆಟ್ಟದ ಸ್ಥಳದಲ್ಲಿ ಕಂಡುಬರುತ್ತದೆ.ಈ ನೆಲೆಯಲ್ಲಿರುವ ಚಿತ್ರವು ಕಂದುಗೆಂಪು ಚಿತ್ರಗಳಾಗಿದ್ದು, ಅಸ್ಪಷ್ಟವಾದ ಡಮರು, ತ್ರಿಶೂಲ, ಮನುಷ್ಯಕಲಾಕೃತಿಯ ಚಿತ್ರಗಳಂತೆ ಅನಿಸುತ್ತವೆ. ಈ ಚಿತ್ರದ ನೆಲೆಯು ಗ್ರಾಮದ ಜನರು ಬೇಸಿಗೆ ಮತ್ತು ಧಣಿದ ಸಮಯದಲ್ಲಿ ಈ ಸ್ಥಳದಲ್ಲಿ ತಂಪಾಗಿ ಗಾಳಿ ಬರುವುದರಿಂದ ಇಲ್ಲಿಗೆ ಬಂದು ಮಲಗುವುದು, ಧಣಿವರಿಸುವುದನ್ನು ಮಾಡುತ್ತಾರೆ ಇದರಿಂದ ಚಿತ್ರಗಳಿಗೆ ಮುಟ್ಟುವುದು ಇನ್ನಿತರೆ ವಸ್ತಗಳಿಂದ ಅವುಗಳ ಮೆಲೆ ಗೀರುವುದರಿಂದ ಅತಿಯಾಗಿ ನಾಶವಾಗಿ ಕಂಡುಬರುತ್ತವೆ. ಈ ಸ್ಥಳದಲ್ಲಿ ಮಲಗಿಕೊಂಡು ಚಿತ್ರಗಳ ವೀಕ್ಷಣೆ ಮಾಡಬೇಕಾಗುತ್ತದೆ.

ಮಲ್ಲಾಪುರ

ಗಂಗಾವತಿಯಿಂದ ಆನೆಗುಂದಿ ರಸ್ತೆಯಲ್ಲಿ ಸಂಗಾಪುರದಿಂದ ೪ ಕಿ.ಮೀ. ದೂರದಲ್ಲಿ ಈ ಮಲ್ಲಾಪುರ ಗ್ರಾಮವಿದೆ. ಇಲ್ಲಿ ಒಂದು ಕಲ್ಲಾಸರೆ ಇದೆ.

ಕಲ್ಲಾಸರೆ : ಒಂದು


ಮಲ್ಲಾಪುರದಿಂದ ಕಾಲುವೆಯ ಮಾರ್ಗವಾಗಿ ಬಸ್ಸಪಟ್ಟಣಾಕ್ಕೆ ಬೆಟ್ಟದ ಮೂಲಕ ರಸ್ತೆಯ ಎಡವಾಗಿ ವಾನಭದ್ರೆಶ್ವರ ದೇವಸ್ಥಾನ ಕಂಡು ಬರುತ್ತದೆ. ಈ ದೇವಾಲಯದ ಹಿಂದಿನ ಚಿಕ್ಕ ಕೆರೆಯು ಇದೆ. ಇದರ ಮೇಲೆಯ ಗುಂಡಿನ ಕಲ್ಲಾಸರೆಯಲ್ಲಿ ಚಿಕ್ಕದಾದ ಎರಡು ಕೋಡಿನ ಕೆಂಪುವರ್ಣದಿಂದ ರಚಿತವಾಗಿದುದ್ದು ಕಂಡುಬರುತ್ತದೆ. ನೋಡುಗನಿಗೆ ಎಡಮುಖ ಮಾಡಿಕೊಂಡು



ಜಿಂಕೆಯ ಚಿತ್ರ, ಮಲ್ಲಾಪೂರ ೧ನೇ ಕಲ್ಲಾಸರೆ



ಜಿಂಕೆ ೧ನೇ ಕಲ್ಲಾಸರೆಯ ಚಿತ್ರ




ಕೊಪ್ಪಳದ ೪ನೇ ಕಲ್ಲಾಸರೆ, ಸಾಲು ಕುಣಿತ



ಕೊಪ್ಪಳದ ಎತ್ತಿನ ಚಿತ್ರ



ನಗ್ನಪುರುಷ ೨ನೇ(ಅ) ಕಲ್ಲಾಸರೆ ಮಲ್ಲಾಪುರ



ನಗ್ನಪುರುಷ ೨ನೇ(ಬ) ಕಲ್ಲಾಸರೆ ಮಲ್ಲಾಪುರ

ನಿಂತಂತೆ ತೋರುತ್ತದೆ. ಬಾಲ ಉದ್ದ, ಕೋಡುಗಳು ರೋಮನ್ ಸಂಖ್ಯೆಯ 'V' ಆಕಾರವನ್ನು ಹೋಲುತ್ತವೆ. ಭುಜದ ಮೇಲೆ ಡುಬ್ಬವನ್ನು ತೋರಿಸಿದ್ದು, ಮುಂದೊಂದು ಹಿಂದೊಂದು ಕಾಲುಗಳನ್ನು ತೋರಿಸಲಾಗಿದೆ. ಈ ಚಿತ್ರದ ಕೆಳಗೆ ಮತ್ತು ಬದಿಗೆ ಅನೇಕ ಚಿತ್ರಗಳಿದ್ದವು ಎಂಬುವುದು ಕಂದುಕೆಂಪು ವರ್ಣದ ಛಾಯೆಯು ಸ್ವಲ್ಪ ಕಂಡುಬರುತ್ತವೆ. ಈ ರೀತಿಯಾಗಿ ನಾಶವಾಗಲು ಪರಿಸರವೈಪರಿತ್ಯ ಕಾರಣವಾಗಿರುದು ಮೇಲಿನ ನೊಟಕ್ಕೆ ಕಂಡುಬರುತ್ತದೆ.

ಕಲ್ಲಾಸರೆ : ಎರಡು

ಈ ಕಲ್ಲಾಸರೆಯು ಮಲ್ಲಾಪುರದಿಂದ ಉತ್ತರಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಅರವಟ್ಟಿಗೆ ದಾರಿಯ ಬಲಭಾಗದ ಗುಡ್ಡದಲ್ಲಿ ಈ ಚಿತ್ರನೆಲೆಯು ಬೆಟ್ಟದ ಮಧ್ಯಶಿಲಾಭಾಗದಲ್ಲಿ ಹೊರಚಾಚಿದೆ. ಗವಿಯ ಅದರ ಛಾವಣಿಯಲ್ಲಿ ಒಂದು ನಗ್ನ ಮನುಷ್ಯನ ಮತ್ತು ಹಿಂದಿನ ಭಾಗದಲ್ಲಿ ಒಂದು ಗವಿ ಕಲ್ಲಾಸರೆಯಲ್ಲಿ ಚಿತ್ರಗಳಿವೆ.

ನಗ್ನ ಪುರುಷ :(ಅ)

ನಗ್ನ ಪುರುಷ ತನ್ನ ಎರಡು ಕಾಲುಗಳನ್ನು ಅಗಲಿಸಿಕೊಂಡು, ಕೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾನೆ. ಅಂಗೈಗಳು, ಪಾದಗಳು ಇಲ್ಲದಿರುವುದು ಕಂಡುಬರುತ್ತದೆ. ಎರಡೂ ಕಾಲುಗಳ ಮಧ್ಯದಲ್ಲಿ ಶಿಶ್ನ ದಂತೆ ರಚಿಸಲಾಗಿದೆ. ರೇಖೆಗಳಿಂದ ನಗ್ನ ದೇಹದ ಎಲ್ಲಾ ಭಾಗಗಳಿಗೆ ಎಳೆಯಲಾಗಿದ್ದು, ಭುಜದ ಕೆಳದಿಂದ ನಡುವಿನವರೆಗೆ ತ್ರಿಕೋನಾಕಾರದಲ್ಲಿ ನಾಲ್ಕು ಭಾಗಗಳಾಗಿ ಮೂಡಿಬರುವಂತೆ ಬಹಳ ರೇಖೆಗಳನ್ನು ಎಳೆಯಲಾಗಿದ್ದು, ಕತ್ತು ಮತ್ತು ತಲೆಯ ಭಾಗಗಳಲ್ಲಿ ಇದೆ ರೀತಿಯ ನೇರ ರೇಖೆಗಳನ್ನು ಎಳೆದು, ಕೈಗಳಿಗೆ ಭುಜದಿಂದ ಮುಂಗೈವರೆಗೆ ಗೆರೆಗಳನ್ನು ತೋರಿಸಲಾಗಿದೆ. ಈ ರೇಖೆಗಳನ್ನು ಇಂದಿನ ರೇಖಾಚಿತ್ರಗಳನ್ನು ಅನಾಟಮಿಯ ಕೆಲವು ಚಿತ್ರಗಳಲ್ಲಿ ನೋಡಲಾಗಿದ್ದು, ಆಸ್ಪತ್ರೆಗಳಲ್ಲಿ ಇಂತಹ ಚಿತ್ರಗಳನ್ನು ದೇಹದ ಭಾಗಗಳಾಗಿ ತೋರಿಸಿ ಪ್ರದರ್ಶನರೂಪವಾಗಿ ಭಿತ್ತಿಯ ಮೇಲೆ ತಗಲು ಹಾಕಲಾಗಿರುತ್ತದೆ.

ನಗ್ನಪುರುಷ : (ಬ)

ಈ ಮನುಷ್ಯನ ಚಿತ್ರವಿರುವ ನೆಲೆಯು ಮೊದಲನೇ ನಗ್ನ ಚಿತ್ರವಿರುವ ನೆಲೆಯಿಂದ ಪೂರ್ವ ದಿಕ್ಕಿನ ಒಂದು ಕಿ.ಮೀ. ದೂರದ ಇನ್ನೊಂದು ಗುಹೆಕಲ್ಲಾಸರೆ ಇದೆ. ಗುಡ್ಡಾದ ಮೇಲೆತ್ತರಕ್ಕೆ ದೊಡ್ಡ ಗುಂಡುಗಳ ದುರ್ಗಮಯವಾದ ಗುಹೆಯ ದ್ವಾರದ ಛಾವಣಿ ಮೇಲೆ ಸು.೨.ಮೀ. ಎತ್ತರದ ಒಂದು ನಗ್ನಮನುಷ್ಯನ ಕಂದುಗೆಂಪು ವರ್ಣದಿಂದ ಚಿತ್ರರಚಿಸಲಾಗಿದೆ. ತಲೆ, ದೇಹ, ವಿದ್ದು, ತೊಡೆಗಳನ್ನು ಅಗಲಿಸಿ, ಕೈಗಳನ್ನು ಮೇಲಕ್ಕೆತ್ತಿಕೊಂಡು ನಿಂತ ಭಂಗಿಯಲ್ಲಿದ್ದು, ಕಾಲಿನ ಪಾದಗಳಂತೆ ಚಿತ್ರರಚಿಸಿ ಬಲಗೈಯ ಹತ್ತಿರ ಭಾಗದಲ್ಲಿ ರೇಖೆಗಳನ್ನು ಎಳೆಯುವ ಮೂಲಕ ಬೆರಳಿನ ರೂಪವಾಗಿ ಚಿತ್ರ ಮೂಡಿಬಂದದ್ದು ಕಂಡುಬರುತ್ತದೆ. ನೋಡುಗನಿಗೆ ಬಲತೊಡೆಯನ್ನು ಅಂಟಿರುವ

ಮೂರು ತ್ರಿಕೋನಗಳನ್ನು ಚೂಪಾಗಿರುವ ತ್ರಿಕೋನದ ಭಾಗವನ್ನು ಹೊರಮುಖವಾಗಿ ತೋರಿಸಲಾಗಿದೆ. ಇದು ಒಂದು ಮಾಂತ್ರಿಕ ಶಕ್ತಿಯಾಗಿ ಬಳಸಿಕೊಂಡಿರಬಹುದು.

ಕಲ್ಲಾಸರೆ : ಮೂರು

ಮೇಲಿನ ನಗ್ನಪುರುಷನ ಚಿತ್ರವಿರುವ ಗವಿ ಕಲ್ಲಾಸರೆ ನೆಲೆಯ ಚಿತ್ರದ ಎಡ ಅಂದರೆ ನೋಡುಗರಿಗೆ ಎಡಮುಖ ಮಾಡಿಕೊಂಡು ಬಲಿಷ್ಠ ಗೂಳಿಯನ್ನು ಕಾಣಬಹುದು. ಇದು ಅಂದಾಜು ಎರಡು ಮೀಟರ್ ಉದ್ದವಿದ್ದು, ನಾಲ್ಕು ಕಾಲು, ಒಂದು ಬಾಲ, ಒಂದುಕೊಂಬುಗಳನ್ನು ಚಿತ್ರಿಸಲಾಗಿದೆ. ಕೊಂಬುವನ್ನು ಮುಖದ ಹಣೆಯ ಮುಂದೆ ತೋರಿಸಲಾಗಿದೆ. ಈ ಚಿತ್ರವು ಒಂದು ಬಲಿಷ್ಠಗೂಳಿಯನ್ನು ತೋರಿಸುವ ಪ್ರಯತ್ನವಾಗಿರಬಹುದು.

ಚಿಕ್ಕರಾಂಪುರ


ಗಂಗಾವತಿಯಿಂದ ಮುನಿರಾಬಾದ್‌ಗೆ ಹೋಗುವ ರಸ್ತೆಯಲ್ಲಿ ರಾಂಪುರ ಕ್ರಾಸ್‌ನಿಂದ ರಾಂಪುರ ಕಡೆ ಹೋಗುದಾರಿಯ ಎಡಭಾಗಕ್ಕೆ ಗದ್ದೆಯ ಪಕ್ಕದ ಗುಡ್ಡದಲ್ಲಿ ಕಲ್ಲಾಸರೆಯ ನೆಲೆಯು ಕಾಣುತ್ತದೆ. ರಾಂಪುರ ಕ್ರಾಸ್‌ನಿಂದ ಈ ಸ್ಥಳಕ್ಕೆ ಸು.೨. ಕಿ.ಮೀ. ದೂರವಿದೆ. ಇಲ್ಲಿ ಆರು ಗವಿ ಕಲ್ಲಾಸರೆ ಚಿತ್ರಗಳು ಕಂಡುಬಂದಿವೆ.

ಕಲ್ಲಾಸರೆ : ಒಂದು

ಮೊದಲ ಕಲ್ಲಾಸರೆಯ ೧.೫೭ ಮೀಟರ್ ಅಳತೆಯ ಬಗೆಯಲ್ಲಿ ಮೂರು ಮಂಡಲ ಚಿತ್ರಗಳಿದ್ದು, ಒಂದು ಎತ್ತುವಿನ ಚಿತ್ರವಿದೆ. ಮೇಲಿನ ಮಂಡಲ ಒಂಬತ್ತು ವೃತ್ತಗಳನ್ನು, ಮೂರು ಸಾಲಿನಲ್ಲಿ ಮೇಲೆ, ಮಧ್ಯ ಕೆಳಗೆ ಒಂದಕ್ಕೊಂದು ಅಂತರದಲ್ಲಿ ಬಿಡಿಸಲಾಗಿದೆ. ಈ ಚುಕ್ಕೆ ವೃತ್ತಗಳನ್ನು ಜೋಡಿಸುವಂತೆ ಮೂರು ಲಂಬರೇಖೆಗಳನ್ನು ನಾಲ್ಕು ವಕ್ರ ರೇಖೆಗಳನ್ನು ಜೋಡಿಸಿದ್ದರಿಂದ ಮಧ್ಯದಲ್ಲಿ ವೃತ್ತವುಳ್ಳ, ಚೌಕವುಳ್ಳ, ವಜ್ರಾಕೃತಿಯಾಗಿ ರಚಿತವಾಗಿವೆ.

ಎರಡನೇಯ ದೊಡ್ಡ ಮಂಡಲದಲ್ಲಿ ಅರ್ಧಭಾಗ ಅಸ್ಪಷ್ಟವಾಗಿ, ಇನ್ನೂ ಅರ್ಧಭಾಗವು ಸ್ಪಷ್ಟವಾಗಿದೆ. ಜೋಡಿ ರೇಖೆಯ ಆಯತಾಕಾರದ ಆವರಣವಿದೆ. ಅದರ ಮೇಲ್ಭಾಗದ ಆವರಣ ಮಧ್ಯದಲ್ಲಿ ಮೇಲಕ್ಕೆ ಇದ್ದು, ಈ ಆವರಣದ ಮಧ್ಯಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಹೊರಳಿಕೆಗಳು ಹೊಂದಿರುವ ಮಂಡಲವಿದೆ. ಈ ಮಂಡಲಗಳಿಗೆ ವಿರುದ್ಧವಾಗಿ ಮಂಡಲವು ವಕ್ರವಾಗಿ ತೋರಿಸಲಾಗಿದೆ. ಇದರ ಮಧ್ಯೆ 'ಳ' ಅಕ್ಷರದ ಒತ್ತಕ್ಷರದಂತೆ ರೇಖೆಯಿಂದ ತೋರಿಸಲಾಗಿದೆ. ಈ ಮಂಡಲ ಚಿತ್ರದ ಬಾಹ್ಯ ರೇಖೆಗಳ ಸುತ್ತಲೂ ಸಣ್ಣ ಸಣ್ಣ ರೇಖೆಗಳನ್ನು ತೋರಿಸಲಾಗಿದೆ.

ಮೂರನೆಯ ಮಂಡಲ ಚಿತ್ರವು ಚಿಕ್ಕದಾಗಿದೆ. ವೃತ್ತದೊಳಗೆ ನಾಲ್ಕು ಮೂಲೆಗಳಲ್ಲಿ ತಿರುವುಗಳನ್ನು ಹೊಂದಿರುವ ದ್ವಿರೇಖೆಯ ಮಂಡಲವನ್ನು ಹೊಂದಿದೆ. ಈ ಮಂಡಲದ ಮುಂಭಾಗ ಎತ್ತು (ಗೂಳಿ) ಚಿತ್ರವಿದ್ದು, ಕೋಡು ದೊಡ್ಡ ಇಣಿಯಿದೆ, ಶಿಶ್ನ, ವೃಷಣ ಹೊಂದಿದ ತುಂಬಿದ ದೇಹವನ್ನು ಹೊಂದಿದ ಮದದ ಗೂಳಿಯಿದಾಗಿದೆ. ಆದರೆ ಅಸ್ಪಷ್ಟವಾಗಿ ಕಾಣುತ್ತದೆ.




ಮಂಡಲ, ಜಿಂಕೆ, ಮನುಷ್ಯ ಚಿತ್ರಗಳು, ೧ನೇ ಕಲ್ಲಾಸರೆ, ಚಿಕ್ಕರಾಂಪುರ



ಜಿಂಕೆಚಿತ್ರ ೧ನೇ ಕಲ್ಲಾಸರೆ, ಚಿಕ್ಕರಾಂಪುರ




ಎತ್ತಿನಚಿತ್ರ ೧ನೇ ಕಲ್ಲಾಸರೆ, ಚಿಕ್ಕರಾಂಪುರ



ಎತ್ತಿನಚಿತ್ರ ೧ನೇ ಕಲ್ಲಾಸರೆ, ಚಿಕ್ಕರಾಂಪುರ



ಮಂಡಲ ಚಿತ್ರಗಳು, ೧ನೇ ಕಲ್ಲಾಸರೆ, ಚಿಕ್ಕರಾಂಪುರ



ಮಂಡಲ ಮತ್ತು ಪ್ರಾಣಿಯ ಚಿತ್ರಗಳು, ೧ನೇ ಕಲ್ಲಾಸರೆ, ಚಿಕ್ಕರಾಂಪುರ

ಅದೇ ಬೃಹದಾಕಾರದ ಗುಂಡಿನ ಎರಡನೇ ಕಲ್ಲಾಸರೆ ೧.೭೦x೧.೧ಳ ಅಳತೆಯ ಅಗಲವಾದ ಸ್ಥಳದ ಕಲ್ಲಾಸರೆಯ ಮೇಲೆ ಎರಡು ಮಂಡಲ, ಒಂದು ಜೋಡಿ ಮನುಷ್ಯರು, ಜಿಂಕೆ, ಒಂದು ಎತ್ತಿನ, ರೇಖಾಚಿತ್ರವಿದೆ. ಮಂಡಲ ಚಿತ್ರಗಳು ಮೊದಲನೆಯ ಕಲ್ಲಾಸರೆಯ ಮಂಡಲಗಳನ್ನು ಹೆಚ್ಚು ಹೋಲುತ್ತವೆ. ಜಿಂಕೆಯನ್ನು ಬಾಹ್ಯರೇಖೆಯ ಮೂಲಕ ತೋರಿಸಿದ್ದು, ಚಿಕ್ಕದಾಗಿದೆ. ಮನುಷ್ಯರ ಜೋಡಿಕೂಡ ಚಿಕ್ಕದಾಗಿದ್ದು, ಅಸ್ಪಷ್ಟತೆಯಿಂದ ಕೂಡಿದೆ.

ಒಟ್ಟಾರೆಯಾಗಿ ಇವು ಮಂಡಲ ಚಿತ್ರಗಳಂತೆ ಕೆಂಪುವರ್ಣದಿಂದ ಬಾಹ್ಯರೇಖೆಗಳಿಂದ ರಚಿತವಾದ ಸುಗ್ಗಿಯ ಚಿತ್ರಗಳಾಗಿರಬಹುದು.

ಕಲ್ಲಾಸರೆ-ಎರಡು

ರಾಂಪುರಕ್ಕೆ ಹೋಗುವ ರಸ್ತೆಯ ಎಡಭಾಗಕ್ಕೆ ಒನಕೆಕಂಡಿ ಇದೆ. ಈ ಒನಕೆಕಂಡಿಯ ದಾರಿಯ ಮೂಲಕ ಒಳಪ್ರವೇಶಿಸಿದರೆ ಬೆಟ್ಟಗಳ ನಡುವೆ ಸುಮಾರು ಇಪ್ಪತ್ತು ಎಕರೆಯಷ್ಟು ವಿಶಾಲವಾದ ಬಯಲು ಇದ್ದು, ಸುತ್ತಲೂ ಬೆಟ್ಟದ ಗವಿ ಮತ್ತು ಕಲ್ಲಾಸರೆಗಳಲ್ಲಿ ಐದು ನೆಲೆಯಲ್ಲಿ ವರ್ಣ ಚಿತ್ರಗಳಿವೆ. ಈ ಪ್ರದೇಶಕ್ಕೆ ಒಂದೇ ಇಕ್ಕಟ್ಟಾದ ದಾರಿಯಿದೆ. ಇದೆ ಒನಕೆಕಂಡಿದಾರಿಯಾಗಿದೆ.

ಒನಕೆ ಕಂಡಿ ದಾರಿಗೆ ಹೋಗುವಾಗ ಎಡಭಾಗಕ್ಕೆ ಈ ಕಲ್ಲಾಸರೆ ಇದೆ. ಇಲ್ಲಿನ ದೊಡ್ಡ ಶಿಲಾಬಂಡೆಯ ಮುಖಭಾಗದಲ್ಲಿ ಎದುರು ಬದುರಾಗಿ ನಿಂತ ಎರಡು ದೊಡ್ಡ ದೊಡ್ಡ ದನಗಳ ಚಿತ್ರಗಳಿದ್ದವು ಆದರೆ ಪರಿಸರದ ವೈಪರಿತ್ಯದಿಂದ ಇಂದು ಪೂರ್ಣವಾಗಿ ನಾಶವಾಗಿದ್ದು ಕಂಡುಬರುತ್ತದೆ. ಕುಂದುಗೆಂಪು ವರ್ಣ ಚಿತ್ರಗಳು ಬಯಲಿಗೆ ಇದ್ದು, ಗಾಳಿ, ಬಿಸಿಲು, ಮಳೆಯ ಪರಿಣಾಮದಿಂದ ಮಾಸಿವೆ ಎಂದು ಹೇಳಬಹುದು. ಈ ಕಲ್ಲಾಸರೆಯ ಚಿತ್ರಗಳನ್ನು ೨೦೦೮ರ ವರ್ಷದಲ್ಲಿ ಬಿ.ವಿ.ಇಡಿಯ ಕೋರ್ಸಿನ ಸಂದರ್ಭದಲ್ಲಿ ನೋಡಿದಾಗ ಚಿತ್ರಗಳು ಸ್ವಲ್ಪಮಾಸಿದ್ದವು.

ಕಲ್ಲಾಸರೆ : ಮೂರು


ಎರಡನೆಯ ಕಲ್ಲಾಸರೆಯಿಂದ ಎಡದಿಕ್ಕಿಗೆ ಮುಂದೆ ಹೋದರೆ ಅಲ್ಲಿಯೆ ಈ ಕಲ್ಲಾಸರೆಯಿದ್ದು, ಇಲ್ಲಿನ ಬಂಡೆಕಲ್ಲು ಛಾವಣಿ ಮತ್ತು ಈ ಛಾವಣಿಪಕ್ಕದ ಕಲ್ಲಿನ ಆಸರೆಗೂ ಚಿತ್ರಗಳನ್ನು ರಚಿಸಲಾಗಿದೆ. ಇಲ್ಲಿಯ ಮೂಲ ಚಿತ್ರಗಳು ಅಸ್ಪಷ್ಟವಾಗಿದ್ದು, ಅವುಗಳ ಅಂದರೆ ಚಿತ್ರಗಳ ಮೇಲೆ ಬೆರಳು ಅಥವಾ ಕಡ್ಡಿಯಿಂದ ಕಂದುಗೆಂಪು ಮತ್ತು ಬಿಳಿ ಬಣ್ಣದಿಂದ ಕಡ್ಡಿ ಮನುಷ್ಯ ಚಿತ್ರಗಳನ್ನು, ಅಲ್ಲಾದೇವರ (ಮುಸಲ್ಮಾನರ) ಪಂಜಾಗಳ ಚಿತ್ರಗಳನ್ನು ರಚಿಸಲಾಗಿದೆ. ಪ್ರಾಣಿಗಳ ಚಿತ್ರಗಳು ಇವೆ.

ಕಲ್ಲಾಸರೆ : ನಾಲ್ಕು


ಮೂರನೆಯ ಕಲ್ಲಾಸರೆಯ ಬಲ (ನೋಡುಗನಿಗೆ ಎಡ) ದಿಕ್ಕಿಗೆ ಸ್ವಲ್ಪ ಹಿಂದೆ ಗವಿಕಲ್ಲಾಸರೆ ಇದೆ. ಗವಿಯ ಮುಖಭಾಗದ ಪಕ್ಕದ ಶಿಲೆಯೊಂದಕ್ಕೆ ಕಂದುಗೆಂಪು ವರ್ಣಚಿತ್ರಗಳಿವೆ. ಇಲ್ಲಿ ಎದುರು ಮುಖಮಾಡಿ ನಿಂತ ಎರಡು ಜೋಡಿ ಎತ್ತಿನ ಚಿತ್ರಗಳು, ಸಿಂಹ ಮತ್ತು ಆಕಳು



ಆದಿ ಚಿತ್ರಗಳ ಮೇಲೆ ಇತ್ತೀಚಿನ ಚಿತ್ರಗಳು ಚಿಕ್ಕರಾಂಪುರ, ೨ನೇ ಕಲ್ಲಾಸರೆ



ಚಿಕ್ಕರಾಂಪುರ ೩ನೇ ಕಲ್ಲಾಸರೆ ಚಿತ್ರ




ಮನುಷ್ಯಚಿತ್ರ ಚಿಕ್ಕರಾಂಪುರ, ೫ನೇ ಕಲ್ಲಾಸರೆ



ಪ್ರಾಣಿಗಳ ಪದಗ್ರಹಣ, ಅಶ್ವಸವಾರರು, ಬಿಲ್ಲುದಾರಿ, ಚಿಕ್ಕರಾಂಪುರ, ಆನೇ ಕಲ್ಲಾಸರೆ



ಬಿಲ್ಲುದಾರಿ ಮನುಷ್ಯ, ಆನೇ ಕಲ್ಲಾಸರೆ



ಎತ್ತಿನಚಿತ್ರ, ಆನೇ ಕಲ್ಲಾಸರೆ



ಕುದುರೆ ಸವಾರ, ಚಿಕ್ಕರಾಂಪುರ, ಆನೇ ಕಲ್ಲಾಸರೆ ಚಿತ್ರ

ಎದುರು ನೋಟದಲ್ಲಿದೆ. ಒಂದು ಸಣ್ಣ ಆಕಳಿನ ಚಿತ್ರವಿದೆ. ಇಲ್ಲಿಯ ದೊಡ್ಡ ಎತ್ತುಗಳ ಜೋಡಿಯ ಮಧ್ಯದಲ್ಲಿ ಓರ್ವ ಅರ್ಧಭಾಗದ ಮನುಷ್ಯನ ಚಿತ್ರವಿದೆ. ಎದೆಯ ಭಾಗ, ಭುಜ, ರುಂಡ ಇದ್ದು, ಮೊಣಕೈವರೆಗಿನ ಎಡಗೈಯಲ್ಲಿ ಒಂದು ಸಣ್ಣ ಬೆತ್ತ (ಕಟ್ಟಿಗೆ) ವಿಡಿದದ್ದು, ತಲೆಯಲ್ಲಿ ಎಡಮುಖವಾಗಿ ಹೊರಳಿದ ರೋಮುಗಳಂತೆ ರೇಖೆಗಳನ್ನು ತೋರಿಸಲಾಗಿದೆ. ಎತ್ತುಗಳಿಗೆ ನಾಲ್ಕುಕಾಲು, ಎರಡು ಕೋಡು, ಒಂದು ಬಾಲ, ಡುಬ್ಬ ವಿದ್ದು, ಬಲಿಷ್ಠವಾಗಿ ತೋರುತ್ತವೆ. ಬಾಲಕ್ಕೆ ಕೂದಲ ರೂಪವಾಗಿ ಮೂರು ಗೆರೆಗಳನ್ನು ಎಳಿಯಲಾಗಿದೆ. ಅಶ್ವಸವಾರನ ಎಡ ಮತ್ತು ಬಲಕ್ಕೆ ಬಿಲ್ಲುದಾರಿಗಳ ಚಿತ್ರವಿದ್ದು, ಬಾಣವನ್ನು ಬಿಲ್ಲುವಿನಿಂದ ಬಿಡುತ್ತಿರುವ ಭಂಗಿಯಲ್ಲಿವೆ. ನಡುವಿನ ಭಾಗದಲ್ಲಿ ಖಡ್ಗ ಅಥವಾ ಕಟ್ಟಿಗೆ ಕಟ್ಟಿಕೊಂಡಂತೆ ಕಂಡುಬರುತ್ತದೆ. ಈ ಎರಡು ಮನುಷ್ಯರ ಪಾದದ ಮೇಲಿನ ಕಾಲುಗಳವರೆಗೆ ಚಿತ್ರರಚನೆಯಾಗಿದೆ. ಅಶ್ವಸವಾರನ ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಕುದುರೆಯ ಲಗಾಮ ಹಗ್ಗ ಹಿಡಿದು ಕುಳಿತ ಚಿತ್ರವಿದೆ. ಕುದುರೆ ಬಾಲಕ್ಕೆ ಹಲವಾರು ಗೆರೆಗಳನ್ನು ಎಳೆದು ಕುದುರೆಯ ಬಾಲದ ಸಹಜತೆಗೆ ತರಲಾಗಿದೆ. ಈ ಸವಾರನ ಕಾಲುಗಳನ್ನು ತೋರಿಸದೆ ಇರುವುದು ಕಾಣಬಹುದು. ಕೆಳಗಡೆ ಸಿಂಹ ಮತ್ತು ಆಕಳುವಿನ ದೃಶ್ಯವು ಒಂದು ಕುತೂಹಲವಾಗಿ ಕಂಡುಬರುತ್ತದೆ. ಏಕೆಂದರೆ ಸಿಂಹ ಆಕಳವನ್ನು ಹಿಡಿಯುವ ಮುಂಚೆ ಗುರಾಯಿಸಿಕೊಂಡು ಎದುರು ನಿಂತ ಭಂಗಿಯಂತೆ ತೋರುತ್ತದೆ. ನಾಲ್ಕು ಕಾಲು, ಒಂದು ಬಾಲ, ಈ ಸಿಂಹ ಮತ್ತು ಆಕಳಿಗೆ ಇದ್ದು, ಸಿಂಹಕ್ಕೆ ಕುತ್ತುಗೆಯ ಭಾಗದಲ್ಲಿ ಗುಂಪಾಗಿ ಕೂದಲುಗಳಂತೆ ವರ್ಣದಲ್ಲಿ ತೋರಿಸಿರುವುದು ಕಂಡುಬರುತ್ತದೆ. ಈ ಚಿತ್ರದ ಅಂದರೆ ಆಕಳದ ಹಿಂದುಗಡೆ ಸಣ್ಣ ಆಕಳಿವಿನ ಚಿತ್ರವು ದೊಡ್ಡ ಆಕಳಿನ ಬೆನ್ನಿಗೆ ಬೆನ್ನುತೋರಿಸಿ ನಿಂತಂತೆ ತೋರಿಸಲಾಗಿದೆ.

ಒಟ್ಟಾರೆಯಾಗಿ ಪ್ರಾಣಿಪದಗ್ರಹಣ, ಬೇಟೆಯನ್ನು ಆಡಲು ಹೋದಂತೆ ಮನುಷ್ಯರು, ಕುದುರೆ ಸವಾರರ ಚಿತ್ರಗಳು ಕಂಡುಬರುತ್ತವೆ.

ಕಲ್ಲಾಸರೆ : ಐದು

ಮೂರನೆಯ ಕಲ್ಲಾಸರೆಯ ಎಡ ನೋಡುಗನಿಗೆ ಬಲ ಬದಿಯಲ್ಲಿ ಈ ಕಲ್ಲಾಶ್ರಯ ನೆಲದಿಂದ ಸುಮಾರು, ೮,೧೦ ಮೀಟರ್ ಎತ್ತರದಲ್ಲಿದ್ದು, ಇಲ್ಲಿಯ ಮೇಲಿನ ಗುಂಡಿನ ಛಾವಣಿಗೆ ಅಡ್ಡ ಚಾಚಿರುವ ಬಂಡೆಯ ಒಳಮೈ ಮೇಲೆ ಒಬ್ಬ ಮನುಷ್ಯನ ಚಿತ್ರವಿದೆ. ಇದು ಸಂಪೂರ್ಣ ಬದ್ದ ದೇಹದಿಂದ ಇದು ಸ್ವಲ್ಪ ಕೆಳಕ್ಕೆ ಎತ್ತಲ್ಪಟ್ಟಿವೆ.

ಕಲ್ಲಾಸರೆ : ಆರು

ಮೂರು ಮತ್ತು ನಾಲ್ಕನೆಯ ಕಲ್ಲಾಸರೆ ಎದುರಿನಲ್ಲಿ ಬೆಟ್ಟದ ಗವಿಯೊಂದು ಬಯಲು ಪ್ರದೇಶದಲ್ಲಿ ಕಾಣುತ್ತದೆ. ಇದು ಇಲ್ಲಿಯ ಎಲ್ಲಾ ಗವಿಕಲ್ಲಾಸರೆಗಳ ಚಿತ್ರಗಳಿಗಿಂತ ಈ ಗವಿಕಲ್ಲಾಸರೆಯ



ಸಾಲು ಮನುಷ್ಯರು ಚಿಕ್ಕರಾಂಪುರ, ೬ನೇ ಕಲ್ಲಾಸರೆ




ಮನುಷ್ಯರು ೬ನೇ ಕಲ್ಲಾಸರೆ




ಭರ್ಚಿ ಹಿಡಿದ ಮನುಷ್ಯ, ಚಿಕ್ಕರಾಂಪುರ ೬ನೇ ಆಸರೆ



ಮನುಷ್ಯರು ಚಿಕ್ಕರಾಂಪುರ ೬ನೇ ಕಲ್ಲಾಸರೆಚಿತ್ರ



ಎತ್ತುಗಳು, ಮನುಷ್ಯರು, ನವಿಲುಗಳು, ಚಿಕ್ಕರಾಂಪುರ, ೬ನೇ ಕಲ್ಲಾಸರೆಚಿತ್ರಗಳು



ಶಿಲಾ ಸಮಾದಿ, ಚಿಕ್ಕರಾಂಪುರ, ೬ನೇ ಕಲ್ಲಾಸರೆಚಿತ್ರ



ಹಾವಿನಹೆಡೆ ಚಿಕ್ಕರಾಂಪುರ, ೬ನೇ ಕಲ್ಲಾಸರೆಚಿತ್ರ

೬ನೇ ಕಲ್ಲಾಸರೆ ಚಿತ್ರಗಳು ಚಿಕ್ಕರಾಂಪುರ



ಎತ್ತು, ಪ್ರಾಣಿಗಳು, ಮನುಷ್ಯರು, ನವಿಲುಗಳು




ಪ್ರಾಣಿಗಳು



ನವಿಲು ಮತ್ತು ಮನುಷ್ಯ



ಎತ್ತು, ಚಿಕ್ಕರಾಂಪುರ ೬ನೇ ಕಲ್ಲಾಸರೆಚಿತ್ರ



ಜಿಂಕೆ ಚಿಕ್ಕರಾಂಪುರ ೬ನೇ ಕಲ್ಲಾಸರೆಚಿತ್ರ



ಆಕಳುಗಳು ಚಿಕ್ಕರಾಂಪುರ

ಚಿತ್ರಗಳು ಪ್ರಮುಖವಾಗಿ ಕಾಣುತ್ತವೆ. ಮುಖ್ಯವಾಗಿ ಮನುಷ್ಯರ, ಎತ್ತು, ಸಾಲು ಜಿಂಕೆಗಳ, ಸಾಲುನವಿಲುಗಳು ಮತ್ತು ಸಾಲಾಗಿ ನಿಂತ ನೃತ್ಯಗಾರರ ವರ್ಣಚಿತ್ರಗಳು ಕಂಡುಬರುತ್ತವೆ.

ಗವಿಯ ಪ್ರವೇಶ ಬಲಭಾಗದಲ್ಲಿ ಚೌಕಾಕಾರದ ಮಂಡಲದಲ್ಲಿ ಇಬ್ಬರು ವ್ಯಕ್ತಿಗಳ ಚಿತ್ರಗಳಿವೆ. ಅದರ ಮೇಲ್ಭಾಗದಲ್ಲಿ ಪರಸ್ಪರ ಎದುರು ನಿಂತ ಜೋಡಿ ಎತ್ತುಗಳಿದ್ದು, ಮಧ್ಯದಲ್ಲಿ ಮಾನವಾಕೃತಿ ಚಿತ್ರವಿದೆ. ಇವುಗಳ ಮೇಲೆ ಓರ್ವ ಮನುಷ್ಯನ ದೊಡ್ಡ ಚಿತ್ರವಿದೆ. ನಂತರ ಒಂದು ನಾಯಿ ಮತ್ತು ನಾಲ್ಕು ಎತ್ತುಗಳ (ಸಾರಂಗಗಳಂತೆ ತೋರುವ) ಚಿತ್ರಗಳಿವೆ.

ಗವಿ ಪ್ರವೇಶದಿಂದ ಎಡಬದಿಯ ಮೇಲ್ಭಾಗದಲ್ಲಿಯೂ ಒಂದು ಅಂಕಣವು ಅದರಲ್ಲಿ ಇಬ್ಬರು ಮನುಷ್ಯರ ಚಿತ್ರಗಳಿವೆ ಅದರ ಮೇಲೆ ಎತ್ತು, ಮಾನವರ, ತೀರ ಮೇಲ್ತುದಿಯಲ್ಲಿ ನಾಲ್ಕು ನವಿಲುಗಳ ಚಿತ್ರಗಳು ಕಾಣಬಹುದು. ಇವುಗಳ ಕೆಳಬಾಗದಲ್ಲಿ ಚೌರ ಮಂಡಲಗಳಿದ್ದು, ಅದರಲ್ಲಿ ವ್ಯಕ್ತಿಗಳ ಚಿತ್ರಗಳು ಕೆಳಭಾಗದಲ್ಲಿ ಸಾಲು ಜಿಂಕೆಗಳ ಚಿತ್ರಗಳಿರುವುದು ನೋಡಬಹುದು. ಇಲ್ಲಿನ ಮನುಷ್ಯ ಚಿತ್ರಗಳನ್ನು ಮೂರು ರೀತಿಯಲ್ಲಿ ಗುರುತಿಸಬಹುದು. ಬಿಡಿ ವ್ಯಕ್ತಿ ಚಿತ್ರಗಳು, ಮಂಡಲದಲ್ಲಿಯ ದಂಪತಿ ಚಿತ್ರಗಳು ಮತ್ತು ಸಾಲಾಗಿ ನಿಂತ ನೃತ್ಯಗಾರರ ಚಿತ್ರಗಳಿವೆ.

ಮಾನವ ಚಿತ್ರಗಳ ರಚನೆಯು ಎರಡು ವಿಧದಲ್ಲಿವೆ. ಇಲ್ಲಿಯ ಒಬ್ಬ ವ್ಯಕ್ತಿಯ ಚಿತ್ರವು ಸಹಜವಾಗಿದೆ. ಮುಕ ಸ್ಪಷ್ಟವಾಗಿದ್ದು, ಕಣ್ಣು, ಮೂಗು, ಬಾಯಿಗಳನ್ನು ತೋರಿಸಲಾಗಿದೆ. ಕೈ ಮತ್ತು ಕಾಲುಗಳು ದ್ವಿರೇಖೆಯಲ್ಲಿ ಸಹಜ ಪ್ರಮಾಣಕ್ಕನುಗುಣವಾಗಿವೆ. ಇದು ಸಂಪೂರ್ಣ ವರ್ಣ ಚಿತ್ರವಾಗಿದ್ದರೂ ಕಣ್ಣನ್ನು ಮಾತ್ರ ಆ ಭಾಗದಲ್ಲಿ ಬಣ್ಣಬಳಿಯದೇ ಖಾಲಿಯಾಗಿಟ್ಟು ತೋರಿಸಿರುವುದು ವಿಶೇಷ. ಮನುಷ್ಯ ನಡೆಯುವ ಬಂಗಿಯಲ್ಲಿದ್ದಾನೆ. ಒಂದು ಕಾಲನ್ನು ಮುಂದಕ್ಕೆ ಇನ್ನೊಂದು ಕಾಲನ್ನು ನಡೆಯುವಾಗ ಉಂಟಾಗುವ ಭಂಗಿಯಂತೆ ಮೇಲಕ್ಕೆತ್ತಿ ಅರೆ ಮಡಚಿದ ಸ್ಥಿತಿಯಲ್ಲಿದೆ. ಮುಂದಿನ ಕೈಯಲ್ಲಿ ಬಹುಶಃ ಭರ್ಚಿಯಂತೆ ತೋರುವ ಉದ್ದನೆಯ ಸಾಧನವಿದೆ. ಕೋಲಿನ ಕೆಳಭಾಗದಲ್ಲಿ ಅಪೂರ್ಣವಾಗಿ ಕಾಣುವ ಎತ್ತಿನ ಚಿತ್ರವೊಂದಿದೆ. ಈ ಮಾನವಾಕೃತಿಯ ಭಂಗಿ, ಕೈಯಲ್ಲಿ ಚೂಪಾದ ಮೊನೆಯಂತೆ ಉದ್ದನೆಯ ಸಾಧನ ಇದೆ. ಈ ಗುಣಲಕ್ಷಣಗಳು ನೋಡಿದರೆ ಬೇಟೆಯ ಸನ್ನಿವೇಶವಾಗಿ ತೋರುತ್ತದೆ.

ಎರಡನೇಯ ರೀತಿಯ ಮನುಷ್ಯ ಚಿತ್ರಗಳು ದ್ವಿತ್ರಿಕೋನಾಕಾರದ ಮುಂಡ ಶೈಲಿಯಾದವು. ಈ ವಿವಿಧ ಮನುಷ್ಯ ಚಿತ್ರಗಳೇ ಈ ಸ್ಥಳದಲ್ಲಿ ಹೆಚ್ಚಾಗಿ ರಚಿತವಾಗಿರುವುದು ಕಂಡುಬಂದಿವೆ. ಇಲ್ಲಿ ಮೂರು ಚೌಕಾಕಾರದ ಮಂಡಲಗಳಿವೆ. ಅವುಗಳಲ್ಲಿ ಎರಡು ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಹೊರಳಿಕೆಗಳು ಹೊಂದಿದ ಜೋಡಿರೇಖೆಗಳ ರಚನೆಗಳಾಗಿ ಮೂಡಿವೆ. ಒಂದು ಸರಳ ಚೌಕ ಅಂಕಣವಾಗಿದೆ. ಇಲ್ಲಿನ ಎಲ್ಲಾ ಚೌಕಗಳ ಮಧ್ಯದಲ್ಲಿ ಇಬ್ಬರು ಮಾನವಾಕೃತಿಗಳನ್ನು ತೋರಿಸಿದ್ದು, ಪರಸ್ಪರ ಕೈಹಿಡಿದು ನಿಂತಿರುವ ದಂಪತಿಗಳಾಗಿರಬಹುದು.

ಇಲ್ಲಿನ ಕೈಕೈಹಿಡಿದು ಕುಣಿಯುತ್ತಿರುವ ಮನುಷ್ಯರ ನಾಲ್ಕು ಸಾಲು ಮನುಷ್ಯ ಚಿತ್ರಗಳು ಕಾಣುತ್ತೇವೆ. ಅವುಗಳಲ್ಲಿ ೧೯, ೧೫, ೭ ಮತ್ತು ೬ ಜನರ ಗುಂಪುಗಳಿವೆ. ಇಲ್ಲಿ ಮೇಲೆ ನೋಡಿದಂತೆ ಎರಡನೆಯ ರೀತಿಯ ಮನುಷ್ಯಾಕೃತಿಗಳನ್ನು ಒಂದರ ಪಕ್ಕ ಒಂದರಂತೆ ನಿಲ್ಲಿಸಲಾಗಿದೆ. ಎಲ್ಲವೂ ಹೆಚ್ಚು ಕಡಿಮೆ ಒಂದೇ ಅಳತೆ ಪ್ರಮಾಣದಲ್ಲಿರುವುದು ಕಂಡುಬರುತ್ತವೆ. ಇವುಗಳ ಕೈಗಳನ್ನು ಪರಸ್ಪರ ಜೋಡಿಸಲಾಗಿದೆ. ಕೆಳಭಾಗದಲ್ಲಿರುವ ೧೫ ಜನರ ತಂಡವನ್ನು ೨ ಸಮಾನಾಂತ ಗೆರೆಯ ಮಧ್ಯದಲ್ಲಿ ರಚಿಸಲಾಗಿದೆ. ಕೇವಲ ಎರಡು ಅಡ್ಡ ರೇಖೆಗಳನ್ನು ಎಳೆದು ಮಾನವಾಕೃತಿಗಳನ್ನು ರಚಿಸಲಾಗಿದೆ. ಸಾಲಿನಲ್ಲಿ ಕೊನೆಯ ೩ ಜನರಿಗೆ ಮಾತ್ರ ಕಾಲುಗಳನ್ನು ತೋರಿಸಲಾಗಿದೆ.

ಪ್ರಾಣಿ ಮತ್ತು ಪಕ್ಷಿ ಚಿತ್ರಗಳಲ್ಲಿ ಎತ್ತುಗಳ, ಜಿಂಕೆಗಳ, ನವಿಲುಗಳ ಮತ್ತು ನಾಯಿ ಚಿತ್ರಗಳಿವೆ. ಎದುರಾಗಿ ನಿಂತ ಎತ್ತಿನ ಜೋಡಿಗಳು, ಇಲ್ಲಿ ಪ್ರಮುಖವಾಗಿವೆ. ಇದೆ ರೀತಿಯ ಅನೇಕ ಎತ್ತುಗಳ ಚಿತ್ರಗಳು ಪ್ರಮುಖವಾಗಿವೆ. ಇದೇ ರೀತಿಯ ಅನೇಕ ಎತ್ತುಗಳ ಚಿತ್ರಗಳು ಕೆಲವೆಡೆ ಕಾಣುತ್ತವೆ. ಎತ್ತುಗಳು ಸಾಮಾನ್ಯವಾಗಿ ನೆರಳಿನ ಚಿತ್ರಗಳಾಗಿವೆ. ಇವುಗಳು ಎತ್ತುಗಳ ಬದಿಯ ಚಿತ್ರಗಳಾಗಿರುವುದರಿಂದ ಎರಡು ಕಾಲುಗಳನ್ನು ಮಾತ್ರ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ದೊಡ್ಡ ಕೋಡುಗಳು ಗಮನಾರ್ಹವಾಗಿವೆ. ಇಣಿ, ಬಾಲಗಳನ್ನು, ತೋರಿಸಲಾಗಿದೆ. ಸಾಲಾಗಿ ನಿಂತ ಆರು ಜಿಂಕೆಗಳ ಚಿತ್ರಗಳು ಇಲ್ಲಿ ನೋಡಬಹುದು. ಕೋಡುಗಳು ದೊಡ್ಡದಾಗಿಲ್ಲ. ಈ ಎಲ್ಲಾ ಆರು ಜಿಂಕೆಗಳು ಒಂದೇ ಅಳತೆ ಪ್ರಮಾಣದಲ್ಲಿರುವಂತೆ ಕಾಣುತ್ತವೆ. ಮೇಲ್ಭಾಗದಲ್ಲಿ ಸಣ್ಣ ಅಳತೆಯ ೪ ನವಿಲು ಚಿತ್ರಗಳಿವೆ. ಮೈ ಮೇಲೆ ವಕ್ರವಾಗಿ ಒಂದಕ್ಕೊಂದು ಛೇದಿಸಿರುವ ರೇಖೆಗವೆ. ೩ ಗೆರೆಯ ಪಾದಗಳನ್ನು ತಲೆಗೆ ತುರಾಯಿಗಳನ್ನು ತೋರಿಸಿರುವುದು ಆಶ್ಚರ್ಯಕರವಾಗಿದೆ. ಒಂದು ನವಿಲು ತನ್ನ ಗರಿಗಳನ್ನು ಉದ್ದಕ್ಕೆ ಬಿಚ್ಚಿಕೊಂಡು ನಿಂತಿದೆ ಒಟ್ಟಿನಲ್ಲಿ ಚಿತ್ರಗಳು ಸುಂದರವಾಗಿದ್ದು, ಈ ಪರಿಸರದಲ್ಲಿ ಇಂತಹ ಅಧಿಕ ಸಂಖ್ಯೆಯ ಪ್ರಾಣಿ, ಪಕ್ಷಿಗಳು ಇದ್ದವು ಎಂಬ ಕುರುಹು ಇದಾಗಿದೆ.

ಇಲ್ಲಿನ ಮೇಲೆ ಎತ್ತುಗಳ ಸಮೂಹದಲ್ಲಿ ಹಾಗೂ ಕೆಳಭಾಗದಲ್ಲಿ ಒಟ್ಟು ಎರಡು ನಾಯಿಗಳ ಚಿತ್ರಗಳಿದ್ದು, ೨ ರೇಖೆಗಳಲ್ಲಿ ನಾಯಿಯನ್ನು ರಚಿಸಿರುವುದು ಕುತೂಹಲಮೂಡಿಸುತ್ತದೆ. ಮುಂದಿನ ಒಂದು ಕಾಲಿನಿಂದ ಪ್ರಾರಂಭಗೊಳ್ಳುವ ಒಂದು ರೇಖೆ ಮುಖವಾಗಿ ಬೆನ್ನಾಗಿ ನಂತರ ಹಿಂದಿನ ಒಂದು ಕಾಲಾಗಿ ಕೊನೆಗೊಳ್ಳುತ್ತದೆ. ಇನ್ನೊಂದು ರೇಖೆ ಮುಂದಿನ ಎರಡನೇಯ ಕಾಲಾಗಿ, ಹೊಟ್ಟೆಯಾಗಿ ಹಾಗೂ ಹಿಂದಿನ ಮೊದಲ ಕಾಲಾಗಿ ಕೊನೆಗೊಳ್ಳುತ್ತದೆ. ಮತ್ತು ಬಾಲ ಮೇಲಕ್ಕೆತ್ತಿದಂತೆ ತೋರುತ್ತವೆ.

ಗವಿಯ ದ್ವಾರದ ಶಿಲಾಭಾಗದಲ್ಲಿ ಮುಂದಕ್ಕೆ ಚಾಚಿರುವ ಶಿಲಾಶ್ರಯವಿದ್ದು, ಅದರ ಛಾವಣಿಯಲ್ಲಿ ಒಂದು ವೃತ್ತದ ಚಿತ್ರವಿದೆ. ಈ ವೃತ್ತದ ಸುತ್ತಲೂ ಅರ್ಧಭಾಗದಲ್ಲಿ ಕಮಲದ ಎಲೆಗಳ ಆಕಾರದ ಆಕೃತಿಗಳು ಉಳಿದರ್ಧದಲ್ಲಿ ವಕ್ರವಾಗಿ ಎಳೆದಿರುವ ಸಣ್ಣ ಸಣ್ಣ ರೇಖೆಗಳಿವೆ. ವೃತ್ತದ ಮಧ್ಯಭಾಗದಲ್ಲಿ ಅಸಮವಾಗಿ ಎಳೆದ ಎರಡು ರೇಖೆಗಳು ವೃತ್ತವನ್ನು ಎರಡು ಭಾಗಗಳನ್ನಾಗಿಸಿವೆ. ಈ ಎರಡು ರೇಖೆಗಳನ್ನು ಅಡ್ಡ ರೇಖೆಗಳಿಂದ ಸೇರಿಸಲಾಗಿದೆ. ಇದರ ಒಂದು ಬದಿಗೆ ತ್ರಿಕೋನಾಕಾರಗಳ ಸಾಲಿದ್ದರೆ ಮತ್ತೊಂದರ ಬದಿಗೆ ತುದಿಯಲ್ಲಿ ತ್ರಿಪಟ್ಟಿಕೆಗಳನ್ನು ಹೊಂದಿರುವ ವಕ್ರ ರೇಖೆಗಳಿವೆ. ಮಧ್ಯದ ಸಾಲಿಗೆ ತುದಿಯಲ್ಲಿ ತ್ರಿಪಟ್ಟಿಕೆಗಳನ್ನು ಹೊಂದಿರುವ ವಕ್ರ ರೇಖೆಗಳಿವೆ. ಮಧ್ಯದ ಸಾಲಿಗೆ ಸೇರುವಂತೆ ಎಡಬದಿಯಲ್ಲಿ ದ್ವಿರೇಖೆಗಳ ಅರೆ ವೃತ್ತವೊಂದಿದ್ದು, ಅದರ ನಡುವೆ ಮನುಷ್ಯಾಕೃತಿ ದ್ವಿರೇಖೆಗಳ ಅರೆ ವೃತ್ತವೊಂದಿದ್ದು, ಅದರ ನಡುವೆ ಮನುಷ್ಯಾಕೃತಿ ಇದೆ. ವೃತ್ತದ ಒಳಭಾಗದಲ್ಲಿ ಸುತ್ತಲೂ ಸಣ್ಣ ಸಣ್ಣ ಹನ್ನೆರಡು ವೃತ್ತಗಳಿವೆ. ಇಂತಹ ಮೂರು ವೃತ್ತಗಳು ಮಧ್ಯದ ಅರೆ ವೃತ್ತಾಕಾರದ ೨ ರೇಖೆಗಳ ಮಧ್ಯದಲ್ಲೂ ರಚಿಸಲಾಗಿದೆ. ಈ ವೃತ್ತಗಳು ಕಲ್ಲು ಗುಂಡುಗಳು ಮಧ್ಯದ ಮನುಷ್ಯ ಚಿತ್ರವು ಶವವಾಗಿದ್ದಂತೆ ನಿರ್ಜೀವವಾಗಿ ತೋರುತ್ತದೆ. ಈ ಶವವನ್ನು ''ಚಿತ್ರ ಬೃಹತ್ ಶಿಲಾಯುಗ''ದಲ್ಲಿ ಪ್ರಚಲಿತವಿದ್ದ ಶಿಲಾವೃತ್ತ ಸಮಾದಿ,[೪] ಎಂಬುವುದಾಗಿ ತಿಳಿಯಲಾಗಿದೆ.

ಗವಿಯ ಒಳಭಾಗದಲ್ಲಿ ಎರಡೂ ಕಡೆಯ ಬದಿ ಮುಖಗೋಡೆಗಳಲ್ಲಿ ವರ್ಣಚಿತ್ರಗಳಿವೆ. ಬಲಬದಿಯಲ್ಲಿ ಒಂದು ಪ್ರಾಣಿಯ ಮೇಲೆ ವ್ಯಕ್ತಿಯೊಬ್ಬ ಕುಳಿತಿದ್ದಾನೆ. ಪ್ರಾಣಿಗೆ ನಾಲ್ಕು ಕಾಲುಗಳನ್ನು ತೋರಿಸಲಾಗಿದೆ. ಇದರ ಮುಂದೆ ಕೋತಿಯ ರೇಖಾ ಚಿತ್ರವಿರುವುದು ಕಂಡುಬಂದಿದ್ದು, ಒಂದು ಮಂಗಕ್ಕೆ ಶಿಶ್ನವು, ಬಾಲವು ಇರುವುದು ಚಿತ್ರವಿದೆ. ಪಕ್ಕದಲ್ಲಿರುವ ಮಂಗಕ್ಕೆ ಸ್ತನಗಳನ್ನು ತೋರಿಸಿ ಹೆಣ್ಣು ಗಂಡುಗಳ ಸ್ಪಷ್ಟತೆಯನ್ನು ತೋರಿಸಲಾಗಿದೆ. ಇಲ್ಲಿಯೇ ಒಂದು ಚಿಕ್ಕ ಮಾನವ ಇಲ್ಲವೇ ಮಂಗದ ಬಿಳಿ ಚಿತ್ರವಿದೆ. ಎದುರು ಗೋಡೆಯ ಮೇಲೆ ಸಾಲು ಎತ್ತುಗಳ ಚಿತ್ರಗಳಿದ್ದು, ಅಸ್ಪಷ್ಟವಾಗಿವೆ. ಈ ಎತ್ತುಗಳು ವಿವಿಧ ಪ್ರಮಾಣದಲ್ಲಿ ರಚಿತಗೊಂಡಿದೆ.

ಗವಿಯ ಒಳಭಾಗದಲ್ಲಿನ ಶಿಲಾ ಛಾವಣಿಯು ದೊಡ್ಡ ಹಾವಿನ ಹೆಡೆಯಾಕಾರದಲ್ಲಿ ತಗ್ಗಾಗಿ, ನುಣುಪಾಗಿದೆ. ಆ ತಗ್ಗಿನ ಭಾಗವನ್ನು ಹಾವಿನ ಹೆಡೆಯಾಗಿಸಿ ಉದ್ದವಾದ ಸರ್ಪವನ್ನು ರಚಿಸಲಾಗಿದೆ. ಬಾಲ ಬಹುಮಟ್ಟಿಗೆ ನೇರವಾಗಿದ್ದು, ಕಂದುಗೆಂಪು ಬಣ್ಣದಿಂದ ಹೆಡೆಗೆ ಬಾಹ್ಯ ರೇಖೆಯ ಮೂಲಕ ತೋರಿಸಲಾಗಿದೆ. ಒಳಗಿನ ಫಣಿ ಕೂಡ ಕಂದುಗೆಂಪು ಇದೆ. ಉಳಿದಂತೆ ಹಳದಿ ಮಿಶ್ರಿತ ಬಿಳಿ ವರ್ಣದಲ್ಲಿ ಹೆಡೆಯ ಒಳಭಾಗ, ಬಾಲವನ್ನು ಚಿತ್ರಿಸಲಾಗಿದೆ. ಇದು ಇತಿಹಾಸ ಆರಂಭಕಾಲದ ಚಿತ್ರ ರಚನೆಯಾಗಿದೆ[೫] ಎಂದು ಮಾಹಿತಿಯಿದೆ. ಒಟ್ಟಾರೆಯಾಗಿ ಇಲ್ಲಿನ ಚಿತ್ರಗಳು ಇರುವುದು ಕಂಡರೆ ಪ್ರಾಗೈತಿಹಾಸಿಕ ಕಾಲಮಾನದ ಅಂದಿನ ಪ್ರಾಣಿ ಭೇಟೆ, ಪರಿಸರ, ಜೀವನಶೈಲಿಯ ರೂಪಕವಾಗಿ ಕಂಡುಬರಬಹುದು.

---

೦೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೨೩
೦೫. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೨೩

ತಿರುಮಲಾಪುರ

ಗಂಗಾವತಿಯಿಂದ ಮುನಿರಾಬಾದ್ ರಸ್ತೆಯಲ್ಲಿ, ಆನೆಗುಂದಿಯಿಂದ ಸುಮಾರು ೫.೬.ಮೀ. ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಒಂದು ಶಿಲಾಶ್ರಯ ಕಂಡುಬರುತ್ತದೆ.

ಕಲ್ಲಾಸರೆ : ಒಂದು


ಸಣಾಪುರದಿಂದ ತಿರುಮಲಾಪುರ ರಸ್ತೆಯಲ್ಲಿ, ತಿರುಮಲಾಪುರಕ್ಕೆ ಅರ್ಧ ಕಿ.ಮೀ. ಮುಂಚೆ ರಸ್ತೆಯ ಎಡಬದಿ ದೊಡ್ಡ ಬೆಟ್ಟದ ಕೆಳಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಈ ದೊಡ್ಡ ಕಲ್ಲಾಸರೆ ಇದ್ದು, ಇಲ್ಲಿ ವಿವಿಧ ಕಾಲ ಘಟ್ಟದಲ್ಲಿ ರಚಿತವಾಗಿರುವ ಅನೇಕ ಚಿತ್ರಗಳು, ಬರಹಗಳು ಕಂದುಗೆಂಪು ಮತ್ತು ಬಿಳಿ ವರ್ಣದಲ್ಲಿವೆ.

ದೊಡ್ಡ ದೊಡ್ಡ ರೇಖಾಕೃತಿಗಳು, ಮಾನವರ ಸಣ್ಣ ಸಣ್ಣ ಚಿತ್ರಗಳು ಜೋಡಿಯಾಗಿ ರೈಲ್ವೆ ಹಳಿಯಂತೆ ತೋರುವ ರಥದ ಮಾದರಿಗಳು, ಗಿಡಗಳು ಮತ್ತಿತ್ತರ ಅನೇಕ ಸಣ್ಣ ಸಣ್ಣ ಚಿತ್ರಗಳಿರುವುದು ಕಂಡುಬರುತ್ತವೆ. ಮನುಷ್ಯರ ಚಿಕ್ಕ ಮತ್ತು ದೊಡ್ಡ ರೇಖಾಚಿತ್ರಗಳು, ಎತ್ತಿನ ಮೇಲೆ ಕುಳಿತ ವ್ಯಕ್ತಿ ಮತ್ತಿತರ ಕಿರು ಚಿತ್ರಗಳು ಹಾಗೂ ಅಕ್ಷರಗಳ ಬರಹಗಳು ಇಲ್ಲಿವೆ. ಇನ್ನೂ ಕೆಲವು ಚಿತ್ರಗಳನ್ನು ಬೆರಳಿನಿಂದ ರಚಿಸಲಾಗಿದೆ. ಮತ್ತು ಎಲ್ಲಾ ಚಿತ್ರಗಳ ಕಲಬೆರಕೆಯಿಂದ ಅದರಲ್ಲಿ ಪ್ರಾಚೀನ ಚಿತ್ರಗಳಾವವು, ಆಧುನಿಕ ಚಿತ್ರಗಳಾವುವು ಎಂಬುವುದನ್ನು ಗುರುತಿಸುವುದು ಗೊಂದಲಕ್ಕೆ ಈಡುಮಾಡಿಕೊಡುತ್ತದೆ.


* * *



ಮನುಷ್ಯ ಮತ್ತು ಪ್ರಾಣಿಗಳು, ತಿರುಮಲಾಪುರ ೧ನೇ ಕಲ್ಲಾಸರೆ



ಕಲ್ಲಾಸರೆ (೧) ತಿರುಮಲಾಪುರ



ತಿರುಮಲಾಪೂರ ೧ನೇ ಕಲ್ಲಾಸರೆ

ಅಧ್ಯಾಯ - ನಾಲ್ಕು

ಕುಷ್ಟಗಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು

ಅಧ್ಯಾಯ - ನಾಲ್ಕು

ಕುಷ್ಟಗಿ ತಾಲೂಕಿನ ಪ್ರಾಗಿತಿಹಾಸಿಕ ಚಿತ್ರಗಳು

ಈ ಕುಷ್ಟಗಿತಾಲೂಕು ಪ್ರದೇಶವು ಸಾಂಸ್ಕೃತಿಕವಾಗಿ ತನ್ನದೇ ಆದ ಇತಿಹಾಸ ಹೊಂದಿದೆ. ಕೊಪ್ಪಳ ಜಿಲ್ಲೆಗೆ ಸಂಬಂಧಪಡುವ ಈ ತಾಲೂಕು ಕೆಲವು ಐತಿಹಾಸಿಕ ಪ್ರದೇಶಗಳನ್ನು ಒಳಗೊಂಡಿದ್ದು.

ಅಂಟರಠಾಣ, ಕಡೂರು, ಕಾಟಾಪುರ, ಕುಷ್ಟಗಿ, ಚಂದ್ರಗಿರಿ, ಚಳಗೇರಾ, ತಾವರಗೇರಾ, ಪುರ್ತಗೇರಿ ಪುರ, ಹನುಮಸಾಗರ, ಹೊಲಗೇರಿ ಮುಂತಾದ ಐತಿಹಾಸಿಕವಾದ ಸ್ಥಳಗಳನ್ನು ಒಳಗೊಂಡಿದೆ. ಈ ಸ್ಥಳಗಳಲ್ಲಿಯೇ ಹೆಚ್ಚು ಪ್ರಾಮುಖ್ಯತೆಯನ್ನು ಪುರ್ತಗೇರಿಪುರ ಗ್ರಾಮವು ಪಡೆದುಕೊಂಡಿದೆ. ಇಲ್ಲಿನ ಈಶ್ವರ ಮತ್ತುಸೋಮೇಶ್ವರ ಎಂಬ ಎರಡು ಮುಖ್ಯ ಪ್ರಾಚೀನ ದೇವಾಲಯಗಳು ಕಂಡುಬರುತ್ತವೆ. ಸೋಮೇಶ್ವರ ದೇವಾಲಯ ಖ್ಯಾತಿವೆತ್ತ ದೇವಾಲಯವಾಗಿದ್ದು, ೧೨ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ಇದು ಭೂಗರ್ಭ ದೇವಾಲಯವಾಗಿದ್ದು, ಕೆತ್ತನೆಯಲ್ಲಿ ಬಹಳ ವಿಶಿಷ್ಟತೆಯನ್ನು ಮೆರೆದು ತನ್ನ ಸೌಂದರ್ಯವನ್ನು ಕಾಪಾಡಿಕೊಂಡಿದೆ. ಅದರಲ್ಲೂ ಮುಖ್ಯವಾಗಿ ಈ ದೇವಾಲಯದಲ್ಲಿ ಕೋಟಿ ಲಿಂಗಗಳ ವಿಗ್ರಹಗಳಿವೆ. ಈ ದೇವಾಲಯ ಚಿಕ್ಕ ಚಿಕ್ಕ ಮಂಟಪಗಳನ್ನು ಹೊಂದಿದ್ದು, ಅವುಗಳಲ್ಲಿ ಸಹಸ್ರ ಲಿಂಗಗಳಿವೆ. ಪ್ರಾಚೀನ ಕಾಲದಲ್ಲಿ ಈ ಗ್ರಾಮ ಧಾರ್ಮಿಕ ಕ್ಷೇತ್ರವಾಗಿತ್ತೆನ್ನುವುದರಲ್ಲಿ ಅನುಮಾನವಿಲ್ಲ[೧] ಚಂದ್ರಗಿರಿ, ಚಂದಾಲಿಂಗೇಶ್ವರ, ಈಶ್ವರ ಮತ್ತು ಗಂಗಾಳಮ್ಮ ಮುಂತಾದ ಪ್ರಾಚೀನ ದೇವಾಲಯಗಳಿವೆ. ಇವುಗಳಲ್ಲಿ ೧೩ನೇ ಶತಮಾನಕ್ಕೆ ಸಂಬಂಧಿಸಿದ ಚಂದಾಲಿಂಗೇಶ್ವರ ದೇವಾಲಯವು ಬಹಳ ಪ್ರಮುಖವಾದುದಾಗಿದೆ.ಹಾಗೆಯೇ ಕುಷ್ಟಗಿ, ಚಳಗೇರಾ, ಹೂಲಗೇರಾ, ಪುರ್ತಗೇರಾ, ಹನುಮಸಾಗರ, ತಾವರಗೇರಾ, ಮುಂತಾದ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳು, ಕೋಟೆ ಕೊತ್ತಲುಗಳು, ಕೆರೆ ಬಾವಿಗಳ ಪ್ರಮುಖವಾಗಿ ಕಾಣಬಹುದಾಗಿದೆ.

ತಾವರಗೇರಿ

ಈ. ತಾಲೂಕಿನಲ್ಲಿ ತಾವರೆಗೇರೆ ಶಿಲಾಬೆಟ್ಟಗಳಿಂದ ಹರಡಿಕೊಂಡಿರುವುದು ಕಾಣಬಹುದು. ಈ ತಾಲೂಕು ಸೇರಿದಂತೆ ಕೊಪ್ಪಳ, ಗಂಗಾವತಿಯಲ್ಲಿ ಕಂಡುಬರುವ ಭೂಪ್ರದೇಶದ ಗುಣವೇ ಇಲ್ಲಿಯು ನೋಡಬಹುದು ತಾವರೇಗೇರೆಯ ಸುತ್ತಮುತ್ತಲು ಕಲ್ಲು ಗುಡ್ಡಬೆಟ್ಟಗಳ ಸಾಲು ಕಂಡುಬರುತ್ತದೆ. ಇಲ್ಲಿಯು ಮಳೆಯ ಅಂಶ ಕಡಿಮೆಯಿದ್ದು, ಬಿಸಿಲು, ಒಣಹವೆಯಿಂದ ಕೂಡಿರುವ ಪ್ರದೇಶವಾಗಿದೆ. ನೀರಾವರಿಯ ದೃಷ್ಟಿಯಲ್ಲಿ ತುಂಗಾಭದ್ರಾ ನದಿಯ ನೀರಿನಿಂದ ದೂರ ಉಳಿದಿದೆ. ಭೂಮಿಯು ಕೆಂಪು ಮಿಶ್ರಿತ ಸವಳು ಮಣ್ಣು ಎರೆಮಣು, ಮತ್ತು ಸ್ವಲ್ಪ ಜೇಡಿಮಣ್ಣಿನಿಂದ ಕೂಡಿದ ಒಲಗಳನ್ನು ಕಾಣಬಹುದು. ಈ ಪ್ರದೇಶದಲ್ಲಿನ ಗುಡ್ಡಗಾಡುಗಳ ಪ್ರಾಣಿಗಳು ಪಕ್ಷಿಗಳು ವಾಸಮಾಡಲಿಕ್ಕೆ ಉತ್ತಮ ಸ್ಥಳವನ್ನು ನೀಡುವಂತೆ ತೋರುತ್ತದೆ. ಇದಲ್ಲದೆ ಪರಿಸರವು ತಕ್ಕ ಮಟ್ಟಿಗೆ ಇದ್ದು ಜೀವಿಗಳು ಒಂದು ದಾರಿಯಾಗಿ ಕಂಡು ಬರುತ್ತದೆ.

ತಾವರೆಗೇರಿ

ಕುಷ್ಟಗಿಯಿಂದ ಸು.೨೫ ಕಿ.ಮೀ ದೂರವನ್ನು ಹೊಂದಿದೆ. ಗಂಗಾವತಿಯಿಂದ ಸುಮಾರು ೫೫ ಕಿ.ಮೀ ದೂರವಿದ್ದು, ಗಂಗಾವತಿಯಿಂದ ಕನಕಗಿರಿ ರಸ್ತೆಯ ಮೂಲಕವಾಗಿ ಈ ಗ್ರಾಮಕ್ಕೆ ತಲುಪಬಹುದು. ಇಲ್ಲಿನ ಬೆಟ್ಟಗಳಲ್ಲಿ ಮೂರು ನೆಲೆಗಳ ಚಿತ್ರಗಳು ಕಂಡುಬಂದಿವೆ.

ಕಲ್ಲಾಸರೆ ಒಂದು

ತಾವರಗೇರಿಯಿಂದ ಗಂಗಾವತಿ ರಸ್ತೆಯಲ್ಲಿನ ಎಡಕ್ಕೆ ಗಾಣಗಿತ್ತಿ ಗುಡ್ಡದಲ್ಲಿ ವರ್ಣ ಚಿತ್ರಗಳು ಕಂಡುಬಂದಿದೆ. ಈ ಗುಡ್ಡಕ್ಕೆ ಸು.೧.ಕಿ.ಮೀ ದೂರವಿದೆ. ಬೆಟ್ಟದ ತುದಿಯಭಾಗದಲ್ಲಿ ಶಿಲಾಶ್ರಯ ಒಂದು ಕಂಡುಬರುತ್ತದೆ. ಅದರಲ್ಲಿನ ವರ್ಣ ಚಿತ್ರಗಳು ಕಾಡು ಗೂಳಿಯಂತೆ ತೋರುತ್ತವೆ. ಹನ್ನೊಂದು ಗೂಳಿಯ ಗುಂಪಿನ ಚಿತ್ರವಲ್ಲದೆ ಮೇಲೆ ರೇಖೆಯ ಅಸ್ಪಷ್ಟವಾದ ಒಂದು ಚಿತ್ರವಿದೆ. ಈ ಚಿತ್ರವು ಕಂದುಗೆಂಪು ವರ್ಣರೇಖಾ ಚಿತ್ರವಾಗಿದ್ದು, ಒಂಬತ್ತು ಕಾಲುಗಳುಳ್ಳ ಒಂದು ವಿಚಿತ್ರವಾದ ಹುಳವು ಚಿತ್ರದಂತೆ ಕಂಡುಬರುತ್ತದೆ. ಮೇಲಿನ ಎಡದಿಂದ ಕ್ರಮವಾಗಿ ಬಲ ಮುಖ ಮಾಡಿಕೊಂಡು ನಿಂತ ಗೂಳಿಯು ತನ್ನ ಬಾಲವನ್ನು ಸ್ವಲ್ಪ ಎತ್ತಿ ಇಳೆಬಿಟ್ಟು, ಹಿಂದಿನ ಕಾಲುಗಳೆರಡು ಮತ್ತು ಮುಂದಿನ ಕಾಲುಗಳೆರಡು ಸ್ವಲ್ಪ ಮುಂದೆ ಜೋಲಿ ಮಾಡಿಕೊಂಡು, ಭುಜದ ಡುಬ್ಬವು ಹಿಂದೆ ಜೋಲಿಯಾಗಿ, ಎರಡು ಕೋಡುಗಳು ಸ್ವಲ್ಪ ತಿರುವಿಕೊಂಡ ಎತ್ತರದ ಕೊಂಬುಗಳಿವೆ. ಎರಡು ಕಿವಿಗಳು ಕೂಡ ಇದ್ದು, ಮುಖವು ಜಿಂಕೆಯ ಮುಖವನ್ನು ಹೋಲುತ್ತದೆ. ಒಂದು ಶಿಶ್ನವನ್ನು ತೋರಿಸಿ ಗೂಳಿಯು. ಮದವೇರಿ ನಿಂತಂತೆ ಚಿತ್ರಿಸಲಾಗಿದೆ. ಮುಂದಿನ ಗೂಳಿಯು ಬಾಲ ಎತ್ತಿ ಇಳೆಬಿಟ್ಟು ಹಿಂದೆ ಜೋಲಿಯಾಗಿ ನಿಂತಂತೆ ತೋರುತ್ತದೆ. ಮುಂದಿನ ಕಾಲುಗಳು ನಾಶವಾಗಿದ್ದು, ಎರಡುಕೋಡು ಇದ್ದು ಅಸ್ಪಷ್ಟವಾಗಿದೆ. ಡುಬ್ಬವು ಸಣ್ಣದಿದ್ದು, ಮುಖವು

೧ನೇ ಕಲ್ಲಾಸರೆ ತಾವರಗೇರಿ (ಕುಷ್ಟಗಿ ತಾಲುಕು)



ಕೋಣಗಳ ಸಮೂಹದ ದೃಶ್ಯ



೧ನೇ ಕಲ್ಲಾಸರೆ

ಜಿಂಕೆಯನ್ನು ಹೋಲುತ್ತದೆ. ಈ ಚಿತ್ರದ ಮುಂದೆ ಇಲ್ಲಿನ ಎಲ್ಲಾ ಚಿತ್ರಗಳಿಗಿಂತ ಚಿಕ್ಕದಾದ ಗೂಳಿಯು ಇದೆ. ಇದು ಇಲ್ಲಿನ ಎಲ್ಲಾ ಚಿತ್ರಗಳಿಗಿಂತ ಅಸ್ಪಷ್ಟವಾಗಿದೆ. ಇದರ ಮುಂದಿನ ಕೆಳಭಾಗದಲ್ಲಿಇದಕ್ಕಿಂತ ಸವಲ್ಪ ದೊಡ್ಡ ಗೂಳಿಯಿದ್ದು ಬಾಲವು ಎತ್ತಿ, ಹಿಂದಿನ ಕಾಲುಗಳೆರಡು ಮತ್ತು ಮುಂದಿನ ಕಾಲುಗಳೆರಡರ ಮೇಲೆ ನಿಂತು ಡುಬ್ಬ ಸಣ್ಣದಿದ್ದು, ಬೆನ್ನು ಬೆಂಡಾಗಿ, ಎರಡುಕೋಡುಗಳು ಹೊರ ತಿರುವಿ ಮುಖ ಎತ್ತಿ ನೋಡುತ್ತಾ, ಮದವೇರಿ ನಿಂತ ಭಂಗಿಯಲ್ಲಿದೆ. ಈ ಚಿತ್ರದ ಮುಂದಿನ ಮೇಲಿನ ಗೂಳಿಯು ನಿಂತಭಂಗಿಯಲ್ಲಿದ್ದು, ಹಿಂದಿನ ನಡುವಿನ ಭಾಗದಿಂದ ಸ್ವಲ್ಪ ಎತ್ತಿ ಇಳಿಬಿಟ್ಟ ಬಾಲವಿದ್ದು, ಅದಕ್ಕೆ ಕೂದಲಿನಂತೆ ಸಣ್ಣ ಸಣ್ಣ ಗೆರೆಗಳನ್ನು ತೋರಿಸಲಾಗಿದೆ ಕೊಂಬುಗಳೆರಡು ಅಗಲಿಸಿವೆ. ದಪ್ಪ ಹಾಗೂ ಉದ್ದವಾಗಿ ತೋರುತ್ತವೆ. ಬಲಮುಖವಾಗಿ ನಿಂತುಕೊಂಡಿದೆ. ಈ ಮೇಲಿನ ಭಂಗಿಯಲ್ಲಿಯೇ ಇನ್ನುಳಿದ ಎಲ್ಲಾ ಗೂಳಿಗಳಿದ್ದು, ಅಳತೆಯಲ್ಲಿ ಒಂದನ್ನೊಂದು ಸ್ವಲ್ಪ ಹಿಂದು ಮುಂದಾಗಿ ನಿಂತಿರುವಂತೆ ತೋರುತ್ತವೆ. ಕಂದುಗಂಪು ವರ್ಣದಿಂದ ಸಮವಾಗಿಲೇಪಿಸಿದ್ದು, ತಮ್ಮ ಕೋಡುಗಳಿಂದ ವಿಶೇಷವಾಗಿ ಕಂಡುಬರುತ್ತವೆ. ಏಕೆಂದರೆ ಈ ನೆಲೆಯ ಗೂಳಿಗಳ ಕೋಡುಗಳಂತೆ ಇನ್ನಿತರೆ ಕರ್ನಾಟಕದ ನೆಲೆಗಳಲ್ಲಿನ ಗೂಳಿಗಳಾಗಲಿ, ಕೋಣಗಳಾಗಲಿ, ಎತ್ತುಗಳಾಗಲಿ ಈ ರೀತಿಯಲ್ಲಿ ರಚಿತವಾಗಿಲ್ಲವೆನ್ನಬಹುದು. ಇವುಗಳೆಲ್ಲವು ಒಂದೇದಿಕ್ಕಿನ ಕಡೆಗೆ ಮುಖ ದೇಹ, ಕಾಲು, ಮುಖಮಾಡಿಕೊಂಡು ನಿಂತಿರುವುದು ಯಾವುದಾದರೊಂದು ಪ್ರಾಣಿಯನ್ನು ನೋಡಿಕೊಂಡು ನಿಂತಂತೆ ರಚಿಸಲ್ಪಟ್ಟಿದೆ. ಈ ಗೂಳಿಗಳ ಗುಂಪನ್ನು ನೋಡಿದಾಗ ಜೀವಕಳೆಯಿಂದ ಕೂಡಿದಂತೆ ಭಾವನೆ ಮೂಡುತ್ತದೆ. ಇವುಗಳಲ್ಲಿ ಕೊಂಬುಗಳು ವಿಶೇಷವಾಗಿತೋರುತ್ತದೆ. ಏಕೆಂದರೆ ತನ್ನ ದೇಹಕ್ಕೆ ಮೀರಿ ಎತ್ತರವಾಗಿ ಸ್ವಲ್ಪ ಹೊರ ತಿರುವಿಕೊಂಡು ಇರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಎರಡು ಕಿವಿಗಳು ಸಹಿತ ಸೂಕ್ಷ್ಮವಾಗಿ ತೋರಿಸಲಾಗಿದೆ. ಇದಲ್ಲದೆ ಕಾಲುಗಳ ಕೆಳಗೆ ಕುರ (ಪಾದಹಿಂಬಡ)ಗಳನ್ನು ನಾಲ್ಕು ಕಾಲುಗಳಿಗೆ ತೋರಿಸಿರುವುದು ಗಮನಿಸಬಹುದಾಗಿದೆ. ಈ ಶಿಲಾಶ್ರಯದ ಚಿತ್ರಗಳು ವಿಶೇಷವಾಗಿ ನಿಲ್ಲುತ್ತವೆ. ಚಿಕ್ಕಾರಾಂಪುರದ ಚಿತ್ರಗಳಿಗೆ ಹೋಲಿಕೆ ಮಾಡಿದಾಗ ಸ್ವಲ್ಪ ದೇಹವನ್ನು ಹೋಲಿದರು ಕೊಂಬುಗಳಿಂದ ವಿಶೇಷವಾಗಿ ಕಾಣುತ್ತವೆ. ಮತ್ತು ಮದವೇರಿ ನಿಂತಭಂಗಿಯಲ್ಲಿರುವುದು ವಿಶಿಷ್ಟವೆನಿಸುತ್ತದೆ. ಇವು ಈ ಸುತ್ತಮುತ್ತಲ ಪ್ರದೇಶದ ಅಂದಿನಕಾಲ ಯುಗದಲ್ಲಿ ಕಂಡುಬರುವ ಕಾಡು ಪ್ರಾಣಿಗಳು ಆಗಿರಬಹುದು. ಆದರೆ ಸ್ಪಷ್ಟವಾಗಿ ಒಂದೇ ಜಾತಿ (ತಳಿ)ಯ ಪ್ರಾಣಿಗಳಂತೆ ತೋರದೆ ಗೊಂದಲವನ್ನುಂಟು ಮಾಡುತ್ತವೆ. ದೇಹ, ಕಾಲುಗಳು, ಯಾವುದಾದರು ಜಿಂಕೆಗಳಿಗೆ ಹೋಲಿಕೆಯಾಗುತ್ತದೆ. ಆದರೆ ಭುಜನದ ಮೇಲಿನ ಡುಬ್ಬ ದೇಹಕ್ಕೆ ಹೋಲಿಕೆ ಮಾಡಿದರೆ ಸ್ವಲ್ಪ ದೊಡ್ಡದಾಗಿ ಕಂಡುಬರುತ್ತದೆ. ಇದರಿಂದ ಗೂಳಿಯನ್ನು ಹೋಲುವ ಈ ಡುಬ್ಬವು ಅಲ್ಲದೆ ಕೊಂಬುಗಳು ದಪ್ಪ ಹಾಗೂ ಸ್ವಲ್ಪ ಹೊರ ತಿರುವಿ ಎತ್ತರವಾಗಿರುವುದು ಗೂಲಿಯಂತಹ

ಪ್ರಾಣಿಯ ದೇಹಕ್ಕೆ ಹೋಲಿಕೆಯಾಗುವಂತೆ ಕಂಡುಬರುವುದು, ವಿಶೇಷವಾಗಿರುವುದು ಗೂಳಿಯಂತಹ ಪ್ರಾಣಿಯ ದೇಹಕ್ಕೆ ಹೋಲಿಕೆಯಾಗುವಂತೆ ಕಂಡುಬರುವುದು, ವಿಶೇಷ ಎನಿಸುತ್ತವೆ. ಮುಖವು ಜಿಂಕೆ ಅಥವಾ ಆಡು (ಮೇಕೆ)ಯನ್ನುಹೋಲುತ್ತದೆ. ಇವುಗಳಿಂದ ಗೋಚರಿಸುವ ಒಂದು ಮುಖ್ಯವಾದದ್ದು ಎಂದರೆ, ಭುಜದ ಮೇಲೆ ದೊಡ್ಡ ಡುಬ್ಬ (ಇಣಿ) ದಪ್ಪ, ಕೊಂಬುಗಲು, ಹಾಗೂ ಶಿಶ್ನವನ್ನು ಎದ್ದುನಿಂತು ಉದ್ದವಾಗಿ ಮದವೇರಿ ನಿಂತ ಭಂಗಿಗಳನ್ನು ಗಮನಿಸಿದರೆ ಬಹುಷ ಗೂಳಿ ಎಂದು ಹೇಳಬಹುದು. ಇದಕ್ಕೆ ಬಾಲವು ಕೂಡ ಪುಷ್ಠಿಯನ್ನು ನೀಡುತ್ತದೆ.

ಕಲ್ಲಾಸರೆ : ಎರಡು

ಈ ನೆಲೆಯು ತಾವರಗೇರಿಯಿಂದ ಗಂಗಾವತಿ ರಸ್ತೆಯ ಎಡಕ್ಕೆ ಬರುವ ಗಾಣಗಿತ್ತಿ ಗುಡ್ಡದಲ್ಲಿನ ಒಂದನೆ ಕಲ್ಲಾಸರೆಗೆ ಹೋಗುವ ಮುಂಚಿತವಾಗಿ ಒಂದು ದೊಡ್ಡ ಗುಂಡುಕಲ್ಲು ಬೆಟ್ಟದ ಕೆಳಭಾಗದಿಂದ ನಿಂತಿದ್ದು, ಮುಖಭಾಗ ಹೊರ ನೋಟವಾಗಿ ಕಾಣುತ್ತದೆ. ಇದರ ಎರಡು ಭಾಗವಾದ ಮಧ್ಯದಲ್ಲಿ ಕಡಿದಾದ, ಕುಲಿತು ಕೊಂಡು ಹೋಗುವಷ್ಟು ಚಿಕ್ಕ ಮತ್ತು ಅಪಾಯಕಾರಿ ದಾರಿಯೊಂದಿದೆ. ಇದರ ಮೂಲಕವೇ ಹೋಗಬೇಕು. ಇಲ್ಲಿನ ಕಲ್ಲಾಸರೆಯಿಂದ ಕೆಳಭೂಮಿಯು ಅಂದಾಜು ೮೦ ಅಡಿಗಳಷ್ಟು ಆಳವಾಗಿ ತೋರುತ್ತದೆ. ಇಂತಹ ಸ್ಥಳದ ಶಿಲಾಶ್ರಯವನ್ನು ಆಯ್ಕೆ ಮಾಡಿ ಕಂದುಗೆಂಪು ವರ್ಣ ರೇಖಾ ಚಿತ್ರಗಳು ಚಿತ್ರಿಸಲಾಗಿದೆ. ಅಲ್ಲಿನ ಚಿತ್ರಗಳೆಂದರೆ ಸಾಲುನಿಂತ ಭಂಗಿಯ ಗೂಳಿಗಳು, ಎದುರುಮುಖವಾಗಿ ನಿಂತ ಗೂಳಿಗಳು ಚೇಳುಗಳಂತೆ ತೋರುವ ಚಿತ್ರಗಳು, ಜೆರಿಹುಳುಗಳು, ಮೇಲಿನ ಸಾಲಿನಲ್ಲಿ ನಿಂತ ಗೂಳಿಗಳಲ್ಲಿ ಬಲ ಮುಖ ಮಾಡಿ ನಿಂತ ಮೊದಲ ಗೂಳಿಯು ಬಾಲ ಎತ್ತಿ, ಕತ್ತು, ಕೊಂಬುಗಳೆರಡು ಎತ್ತರವಾಗಿ ಸ್ವಲ್ಪವಾಗಿ ಬಾಗಿವಿ, ಮುಖವು ಕೆಳನೋಟದಲ್ಲಿದ್ದು, ನಾಲ್ಕು ಕಾಲುಗಳ ಮೇಲೆ ನಿಂತ ಭಂಗಿಯಲ್ಲಿದೆ. ಇದರ ಮುಂದಿನ ಗೂಳಿಯು ಬಾಲವು ಸ್ವಲ್ಪ ಎತ್ತಿಕೊಂಡು, ಭುಜವು ಸಣ್ಣದಾಗಿದ್ದು, ಕೊಂಬುಗಳೆರಡು ಹೊರಬಾಗಿವೆ. ಮುಖವು ಅಸ್ಪಷ್ಟವಾಗಿದ್ದು, ಕಾಲುಗಳು ನಾಲ್ಕನ್ನು ತೋರಿಸಿ ನಿಂತಭಂಗಿಯಲ್ಲೇ ಇದೆ. ಇದಕ್ಕೆ ಎದುರಾಗಿ ನಿಂತ ಗೂಳಿಯು ಎರಡು ಕೊಂಬು, ಎರಡು ಮುಂಗಾಲುಗಳಿದ್ದು, ಹಿಂದಿನ ಕಾಲುಗಳು ಅಸ್ಪಷ್ಟವಾಗಿದ್ದುದ್ದು ಕಂಡುಬರುತ್ತದೆ. ಬಾಲವು ಕೂಡ ನಾಶವಾಗಿದೆ. ಇದೆ ಮುಖವಾಗಿ ನಿಂತ ಇನ್ನೊಂದು ಗೂಳಿಯ ಚಿತ್ರವು ಹಿಂದೆ ಚಿತ್ರಿತವಾಗಿದೆ. ಈ ಮಧ್ಯದ ಚಿತ್ರಗಳ ಎರಡರ ಮಧ್ಯದ ಕೆಳಭಾಗದಲ್ಲಿ ಸಣ್ಣ ಪ್ರಮಾಣದ ಗೂಳಿಯಿದ್ದು, ಎಡಮುಖವಾಗಿ ನಿಂತಿರುವುದು ತೋರುತ್ತದೆ. ಈ ಚಿತ್ರ ಪೂರ್ಣ ಅಸ್ಪಷ್ಟತೆಯಿಂದ ಕೂಡಿದೆ ಇವೆಲ್ಲ ಚಿತ್ರಗಳು ಈ ಕಲ್ಲಾಸರೆಯ ಗೋಡೆಯ ಭಾಗದಲ್ಲಿ ಚಿತ್ರಿತಗೊಂಡಿವೆ. ಇದೇ ಆಶ್ರಯದ ಛಾವಣಿಯಲ್ಲಿ ಜೆರಿ, ಚೇಳು ಮುಂತಾದ ಸಣ್ಣ ಸಣ್ಣ ಚಿತ್ರಗಳಿರುವುದು ನೋಡಬಹುದಾಗಿದೆ. ಅದರಲ್ಲಿ ಜೆರಿಯಂತಹ ಹುಳುಗಳು ವರ್ಣ ರೇಖೆಯಿಂದ ಚಿತ್ರಿಸಿದ್ದು, ಚಲಿಸುವ ಭಂಗಿಯಲ್ಲಿವೆ. ನಾಲ್ಕು ಕಾಲುಗಳು, ಮುಂಭಾಗದಲ್ಲಿ

೨ನೇ ಕಲ್ಲಾಸರೆ ತಾವರಗೇರಿ (ಕುಷ್ಟಗಿ ಗಾಲೂಕು)



ಚೇಳು, ಜರಿ, ಜಿಂಕೆಯ ಚಿತ್ರಗಳು



ಸಾಲುನಿಂತ ಜಿಂಕೆಗಳು



೧ನೇ ಕಲ್ಲಾಸರೆಯ ನೋಟ

ಎರಡು ಗೆರೆಗಳು ಮೀಸೆಯಂತೆ ಚಿತ್ರಿಸಲಾಗಿದೆ. ಇದಕ್ಕೆ ಬಾಲವಾಗಿ ದಪ್ಪಗೆರೆಯನ್ನು ರಚಿಸಿವೆ. ಇದರ ಮುಂದೆ ಒಂದು ರೂಪಾಯಿಯ ಅಳತೆಯಷ್ಟು ವರ್ಣರೇಖೆಯ ವೃತ್ತವಿದೆ ಗುಂಪು ಚಿತ್ರಗಳಲ್ಲಿ ಚೇಳುವಿನಂತೆ ತೋರುವ ಹುಳುವನ್ನು ಸಣ್ಣ ಕಾಲುಗಳಂತೆ ರಚಿಸಿ, ಮುಖಭಾಗದಲ್ಲಿ ಎರಡುಕೊಡಿನ ಆಕಾರವನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಇಂತಹ ಆಕಾರದ ಚೇಳು, ಜೆರಿಗಳು ಐದು ಚಿತ್ರಗಳಿದ್ದು, ಇನ್ನೂಳಿದವು ಇದರಲ್ಲೇಮಿಶ್ರವಾಗಿ ಗೂಳಿಗಳನ್ನು ರಚಿಸಲಾಗಿದೆ. ಈ ಗೂಳಿಗಳು ನಾಲ್ಕು ಇದ್ದು, ಭಂಗಿಗಳು ಗುಂಪಿನಲ್ಲಿ ನಿಂತಂತೆ ತೋರುತ್ತವೆ. ಇವು ಒಂದನೇ ಕಲ್ಲಾಸರೆಯ ಗೂಳಿ ಚಿತ್ರಗಳನ್ನು ಹೋಲುತ್ತವೆ. ಇವು ಒಂದನೇ ಕಲ್ಲಾಸರೆಯ ಗೂಳಿ ಚಿತ್ರಗಳನ್ನು ಹೋಲುತ್ತವೆ. ಈ ಎರಡು ಶಿಲಾಶ್ರಯಗಳು ಒಂದೇ ಕಾಲಮಾನಕ್ಕೆ ಸೇರಿದ್ದು, ಒಂದೇ ಕೈ ಚಳಕವಿರುವುದು ಚಿತ್ರಗಳಲ್ಲಿ ನೋಡಬಹುದಾಗಿದೆ. ಈ ಆಶ್ರಯ ಚಿತ್ರಗಳು ಅಸ್ಪಷ್ಟವಾಗಿರಲು ಮುಖ್ಯವಾದ ಕಾರಣವೆಂದರೆ, ಆಡು ಕಾಯುವ ಹುಡುಗರು ಬಿಸಿಲಿನಿಂದ, ಮಳೆ, ಗಾಳಿಯಿಂದ ಹಾಗೂ ವಿಶ್ರಾಂತಿಯನ್ನು ಪಡೆಯಲು ಇದೇ ಸ್ಥಳವನ್ನು ಹೆಚ್ಚಾಗಿ ಬಳಸಿಕೊಳ್ಳುವುದು ಇಂದಿನ ಕೆಲವು ಆಡು ಕಾಯುವ ಹುಡಗರಿಂದ ತಿಳಿಯಲಾಯಿತು.

ಬಯಲು ಬಂಡೆ ಚಿತ್ರ ಒಂದು

ಈ ಶಿಲಾ ಬಯಲು ಬಂಡೆಯು ಎರಡನೆ ಕಲ್ಲಾಸರೆಯ ಗಾಣಗಿತ್ತಿ ಗುಡ್ಡದ ಪಕ್ಕದ ಬೆಟ್ಟವಾದ ಮಾನಪ್ಪಯ್ಯ ಗುಡ್ಡದ ಸಂತೆ ಬಜಾರಡೋಣಿ ಹಿಂದೆಯೆ ಈ ದೊಡ್ಡ ಬಂಡೆಯೊಂದು ಇದೆ. ಇದರ ಮೇಲೆ ಆರು ಗೀರು ಗೂಳಿಚಿತ್ರಗಳಿವೆ. ಇವು ಗುಂಪಂತೆ ನಿಂತಿವೆ. ಎಡದ ಮೊದಲ ಗೂಳಿಯು ಬಲಮುಖ ತೋರಿ ನಿಂತಭಂಗಿಯಲ್ಲಿದೆ. ಇದರ ಬಾಲ ಸ್ವಲ್ಪ ಎತ್ತಿ ಇಳಿಬಿಟ್ಟಿದೆ. ಭುಜದ ಸಣ್ಣಡುಬ್ಬವಿದೆ. ಕೊಂಬುಗಳೆರಡು ಅಗಲಿಸಿ ಹೊರಬಾಗ ನಿಂತಿವೆ. ಕಿವಿಗಳನ್ನು ಸಹ ತೋರಿಸಲಾಗಿದೆ. ಕಾಲುಗಳು ನಾಲ್ಕು ನಿಂತ ಆಕಾರದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರವು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಚಿತ್ರದ ಮುಂದೆ ಗೂಳಿಗಳೆರಡು ಎದುರಾಗಿ ನಿಂತಿವೆ. ಇವು ಎರಡು ಕೋಡುಗಳು ಅಗಲಿಸಿ ಹೊರಬಾಗಿ, ದೇಹ, ಕಾಲುಗಳು ಅಸ್ಪಷ್ಟವಾಗಿ ಗೋಚರಿಸುತ್ತವೆ. ಕೆಳಗಿನ ಭಾಗದಲ್ಲಿ ಒಂದು ಗೂಳಿ ಈ ಮೂರು ಗೂಳಿಗಳಿಗೆ ಎದುರ ಮುಖ ತೋರಿಸಿಕೊಂಡು ನಿಂತ ಭಂಗಿಯಲ್ಲಿ ಚಿತ್ರಿತವಾಗಿದೆ. ಇದು ಕೂಡ ಅಸ್ಪಷ್ಟತೆಯಿಂದ ಕೂಡಿದ್ದು, ಮೂರು ಕಾಲುಗಳು, ದೇಹ, ಅಗಲಿಸಿ ಹೊರಬಾಗಿ ನಿಂತ ಕೊಂಬುಗಳನ್ನು ಸ್ವಲ್ಪ ಸ್ಪಷ್ಟವಾಗಿ ಕಾಣುವಂತೆ ರಚಿಸಲಾಗಿದೆ. ಇನ್ನು ಕೆಳಗಿನ ಗೂಳಿಯು ಬಲಮುಖ ಮಾಡಿ ಕೋಡುಗಳು ಅಗಲಿಸಿ ಹೊಸಬಾಗಿರುವಂತೆ ತೋರಿಸಿದ್ದು, ದೇಹ, ಬಾಲ, ಭುಜದ ಡುಬ್ಬ, ಎರಡು ಕಿವಿ, ಮುಖ, ನಾಲ್ಕು ಕಾಲುಗಳ ಮೇಲೆ ನಿಂತ ಚಿತ್ರವು ಇದಾಗಿದೆ. ಎಲ್ಲವು ಒಂದನೇ ಕಲ್ಲಾಸರೆಯ ವರ್ಣ ಚಿತ್ರ ಗೂಳಿಗಳನ್ನು ಹೋಲುತ್ತವೆ. ಬಯಲು ಬಂಡೆಯ ಗೀರು ಚಿತ್ರಗಳಾಗಿ ಇವು ಕಂಡುಬಂದರೆ, ಒಂದನೇ

೧ನೇ ಬಯಲುಬಂಡೆಯ ಗೀರುಚಿತ್ರಗಳು



ಕೋಣದ ಗೀರುಚಿತ್ರ



ಕೋಣದ ಗೀರುಚಿತ್ರಗಳು

ಕಲ್ಲಾಸರೆಯ ಚಿತ್ರಗಳು ಕಂದುಗೆಂಪು, ವರ್ಣ ಲೇಪನದಿಂದ ಲೇಪಿಸಿ ರಚಿಸಲಾಗಿದೆ. ಆದರೆ ಪ್ರಮಾಣ, ಶೈಲಿ, ತಂತ್ರಗಾರಿಕೆಗಳು ಎಲ್ಲವು ಒಂದೇ ರೀತಿಯಲ್ಲಿ ಹೊಂದಾಣಿಕೆಯಾಗುತ್ತವೆ. ಗೀರು ಗೂಳಿಯ ಚಿತ್ರಗಳು ಲೇಪನವಿಲ್ಲದೇ ಚಿತ್ರದ ಭಾಗವನ್ನು ಗೀರಿ ಲೇಪನ ಮಾಡಿದಂತೆ ತೋರಿಸುವುದು ಒಂದು ರೀತಿಯ ಕುತೂಹಲ ಇಲ್ಲಿನ ಎಲ್ಲಾ ಗೀರು ಚಿತ್ರಗಳು ಬಾಹ್ಯ ರೇಖೆ ಅಲ್ಲದೆ ಚಿತ್ರದ ಒಳ ಭಾಗವನ್ನು ಲೇಪನವಾಗಿ ತೋರಿಸುವಂತೆ ಗೀರಿ ಲೇಪಿಸಲಾಗಿರುವುದು ಕಲಾವಿದನಿಗ್ದ ತಾಳ್ಮೆ, ಶ್ರಮ, ಆಸಕ್ತಿ, ತಂತ್ರ, ಶೈಲಿಗಳನ್ನು ಇಲ್ಲಿ ಮುಖ್ಯವಾಗಿ ಕಂಡುಬರುತ್ತದೆ.

ಈ ಮೂರು ನೆಲೆಗಳ ಚಿತ್ರ ಶೈಲಿಯು ಸೂಕ್ಷ್ಮವಾಗಿ ಗಮನಿಸಿದರೆ ಒಂದನ್ನೊಂದು ಹೋಲಿಕೆಯಿಂದ ಕೂಡಿಕೊಂಡಿವೆ. ಚಿತ್ರಗಳ ರೂಪವು ಒಂದೇ ಇದ್ದು, ವರ್ಣ ಮತ್ತು ಗೀರುವ ವಿಧಾನದಿಂದ ಬೇರೆ,ಬೇರೆಯಾಗಿ ನೋಡಬಹುದು. ಆದರೂ ಕರ್ನಾಟಕದ ಇದುವರೆಗೆ ಶೋಧನೆಯಾದ ಚಿತ್ರಗಳಿಗೆ ಹೋಲಿಕೆ ಮಾಡಿದರೆ ಇವು ವಿಶೇಷತೆಯಿಂದ ಕೂಡಿವೆ ಎಂದು ಹೇಳಬಹುದು.

* * *

ಅಧ್ಯಾಯ - ಐದು

ಕೊಪ್ಪಳ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು

ಅಧ್ಯಾಯ - ಐದು

ಕೊಪ್ಪಳ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು

'ಗ್ರಾಮಗಳ ದೇಶ' ಎಂದು ಹೆಸರು ಪಡೆದಿರುವ 'ಭಾರತ ದೇಶ'ದಲ್ಲಿ ಕರ್ನಾಟಕವು ಒಂದು ರಾಜ್ಯವಾಗಿದ್ದು, ಗ್ರಾಮಗಳೇ ಪ್ರಮುಖವಾಗಿ ಇಲ್ಲಿ ಕಾಣುತ್ತೇವೆ. ಈ ಗ್ರಾಮಗ್ರಾಮಗಳ ಚರಿತ್ರೆಯಲ್ಲಿ ಸೇರಿ ನಾಡ ಇತಿಹಾಸವಾಗುತ್ತದೆ.[೧] ಕನ್ನಡನಾಡಿನ ಇತಿಹಾಸದ ಪುಟಗಳನ್ನು ತಿರುವಿದಾಗ ಇಂತಹ ಹತ್ತು ಹಲವು ಗ್ರಾಮಗಳ ಉಲ್ಲೇಖ ದೊರೆಯುತ್ತವೆ. ಅವುಗಳಲ್ಲಿ ಪ್ರಮುಖವಾದದ್ದು, ಕೊಪಣ ನಗರ ಎಂದು ಪ್ರಸಿದ್ಧಿ ಪಡೆದಿದ್ದ ಈಗಿನ ಕೊಪ್ಪಳ.[೨] ಈ ಕೊಪ್ಪಳವು ಪ್ರಾಚೀನ ಕಾಲದಲ್ಲಿ ಬೌದ್ಧ, ಜೈನ ಧರ್ಮಗಳ ವಾಸಸ್ಥಳವಾಗಿದ್ದು, ನಂತರ ಶೈವ, ವೀರಶೈವ ಧರ್ಮಗಳಿಗೆ ಮಹತ್ವದ ನೆಲೆಯಾಗಿ ನಿಂತು, ಕ್ರಿ.ಪೂ. ೩ನೆಯ ಶತಮಾನದಷ್ಟು ಪ್ರಾಚೀನತೆ ಪಡೆದಿದೆ. ಹಸವು ರಾಜಾಡಳಿತಕ್ಕೆ ಸಿಕ್ಕಿ, ಹಲವಾರು ಏಳುಬೀಳುಗಳನ್ನು ಈ ಸ್ಥಳವು ಅನುಭವಿಸಿದೆ. ರಾಜಕೀಯವಾಗಿ 'ದಕ್ಷಿಣದ ಮಹಾದ್ವಾರ'' ಎಂಬ ಪ್ರಸಿದ್ಧ ಪಡೆದಿದ್ದ ಈ ಸ್ಥಳವು ಪುರಾಣ ಕಾಲದಿಂದಲೂ ಹಲವಾರು ಸ್ಥಳ ಪುರಾಣಗಳನ್ನು ತನ್ನ ಚರಿತ್ರೆಯೊಂದಿಗೆ ಹೊತ್ತು ನಿಂತಿದೆ. 'ಮಳೆಯ ಮಲ್ಲೇಶ್ವರ'' ಸ್ಥಳವು ಅರ್ಜುನನು ಮಳಲಲಿಂಗವನ್ನು ಪೂಜಿಸಲು ಈಶ್ವರನು ಕೃಪೆತೋರಿ ಪ್ರತ್ಯಕ್ಷವಾದ ಸ್ಥಳವಾಗಿದೆ. ಪುರಾಣಗಳ, ಕಟ್ಟುಕಥೆಗಳ ಹೂವಲೋಕವನ್ನು ಬಿಟ್ಟು ಐತಿಹ್ಯಗಳಿಗೆ ಆಧಾರಗಳಿಗೆ ಬಂದರೆ, ಈ ಸ್ಥಳದಲ್ಲಿಯೇ ದೊರೆತ ತಲೆಬುರುಡೆ, ಮಣ್ಣಿನ ಪಾತ್ರೆ, ಆಯುಧ ಮೊದಲಾದವು ಈ ಸ್ಥಳವು ಪ್ರಾಚೀನ ಕಾಲದಿಂದ ಮಾನವರ ವಾಸಸ್ಥಳ ಪ್ರದೇಶವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಇಲ್ಲಿಯ ಸುಪ್ರಸಿದ್ಧ ಗವಿಸಿದ್ದೇಶ್ವರ ಮಠದ ಸುತ್ತಮುತ್ತಲ ಪ್ರದೇಶಗಳ ಗುಹೆಗಳಲ್ಲಿ ಶಿಲಾಯುಗದ ಆದಿಮಾನವನ ಪ್ರಾಗತಿಹಾಸ ವರ್ಣಚಿತ್ರಗಳೂ, ಮೋರೆ ಮನೆ, ಶಿಲಾಸಮಾಧಿ, ಮಿಂಚರ ಬಂಡೆಯಬಯಲು ಮೊದಲಾದವು ಈ ಸ್ಥಳದ ಇತಿಹಾಸವನ್ನು ಕ್ರಿಸ್ತಪೂರ್ವದತ್ತ ಕರೆಯದೊಯುತ್ತವೆ.

---

೦೧. ಪಾಟೀಲ ಎಚ್.ಎಸ್ ಮತ್ತು ಬೆಟ್ಟದೂರು ಅ (ಪ್ರಸಂ), ೧೯೯೩, ತಿರುಳ್ಗನ್ನಡ, ಪುಟ-೪

೦೨. ಪಾಟೀಲ ಎಚ್.ಎಸ್ ಮತ್ತು ಬೆಟ್ಟದೂರು ಅ (ಪ್ರಸಂ), ೧೯೯೩, ತಿರುಳ್ಗನ್ನಡ, ಪುಟ-೪

ಭೌಗೋಳಿಕವಾಗಿಯೂ ಕೂಡ ಶಿಲಾಪರ್ವತಗಳಿಂದ ಕೂಡಿದೆ. ಈ ಶಿಲಾ ಬೆಟ್ಟಗಳಲ್ಲಿ ವೈವಿಧ್ಯಮಯವಾದ ಕಾಲಘಟ್ಟಗಳಲ್ಲಿ ನಡೆದಿದ್ದಿರಬಹುದಾದ ಕುತೂಹಲಭರಿತ ಸ್ಥಳಗಳ, ವ್ಯಕ್ತಿಗಳ, ಜೀವಸಂತತಿಗಳ ಹುಡುಕಾಟ ನಡೆಯಬೇಕಾಗಿದದ್ದು ಎದ್ದು ಕಾಣುತ್ತದೆ. ಇಂತಹ ಐತಿಹ್ಯಗಳಿಗೆ ಆಧಾರವಾಗಿಟ್ಟುಕೊಂಡು ಈ ಸ್ಥಳವನ್ನು ಇನ್ನಷ್ಟು ಉತ್ತುಂಗಕ್ಕೆ ಏರಿಸುತ್ತದೆ. ಇದನ್ನು ಮುಂದಿಟ್ಟುಕೊಂಡು ಕೊಪ್ಪಳ ಪ್ರದೇಶದಲ್ಲಿ ಕೆಲವು ಆದಿಮ ವರ್ಣಚಿತ್ರಗಳ ನೆಲೆಗಳು ಬೆಳಕಿಗೆ ಬಂದಿದ್ದು, ಇನ್ನೂ ಶೋಧನೆಯ ಕಾರ್ಯ ನಡೆಯುವುದು ಮುಖ್ಯವಾಗಿ ಕಂಡುಬರುತ್ತದೆ.

ಕೊಪ್ಪಳ ತಾಲೂಕಿನ ಪ್ರಾಗಿತಿಹಾಸ ಚಿತ್ರಗಳು

ಕೊಪ್ಪಳ

ಕೊಪ್ಪಳ ಶಿಲಾಭಾಗದ ಗವಿಮಠದ ಗುಡ್ಡ ಹಾಗೂ ಮಳೆಮಲ್ಲೇಶ್ವರ ಗುಡ್ಡಪ್ರದೇಶದಲ್ಲಿ ಕೆಲವು ಶಿಲಾಶ್ರಯಗಳು ಬೆಳಕಿಗೆ ಬಂದಿವೆ.

ಕಲ್ಲಾಸರೆ - ಒಂದು

ಗವಿಮಠದಿಂದ ಆಗ್ನೇಯ ದಿಕ್ಕಿಗಿರುವ ವಿಶಾಲ ಗುಡ್ಡದಲ್ಲಿ ಬೃಹದಾಕಾರದ ಗವಿಯಲ್ಲಿ ಕಂದುಗೆಂಪು ಬಣ್ಣದ ೧೩ ಪ್ರಾಣಿಗಳ ರೇಖಾಚಿತ್ರಗಳಿದ್ದು, ಐದು ಕವಲುಕೋಂಬಿನ ಜಿಗರೆಗಳಿದ್ದು, ಒಂದು ಜಿಂಕೆ, ಒಂದು ಆಕಳು, ಇನ್ನೊಂದು ಎತ್ತಿನ ಚಿತ್ರ, ಒಂದು ಟಗರು, ಇನ್ನೊಂದು ಕುದುರೆಯಂತೆ ಪ್ರಾಣಿ, ನರಿ, ಒಂದು ಜಗಿದು ಓಡಿತ್ತಿರುವ ಜಿಂಕೆಯಂತ ಪ್ರಾಣಿ ಕಾಣಬಹುದು. ಮೇಲಿನ ಎಡದಿಂದ ಕ್ರಮವಾಗಿ ಮೊದಲನೆಯದು ಕವಲು ಕೊಂಬಿನ ಜಿಂಕೆ ಬಹಳರೇಖೆಗಳಿಂದ ದೂರವನ್ನು ಇಟ್ಟುಕೊಂಡು ನಿಂತದೆ. ನಾಲ್ಕು ಕಾಲು, ಚಿಕ್ಕಬಾಲ, ಚಿತ್ರಿತವಾಗಿವೆ. ಮುಖದ ಅರ್ಧಭಾಗ ಕೆಂಪು ಬಣ್ಣದಿಂದ ತೋರಿಸಲಾಗಿದೆ. ಜಿಂಕೆಯನ್ನು ಎತ್ತರದ ಎರಡು ಕೊಂಬು, ಮೂರುಕಾಲುಗಳು ಎತ್ತಿದ ಬಾಲ ಇದೆ. ಕಂದುಗೆಂಪು ಬಣ್ಣದಿಂದ ಪೂರ್ಣವಾಗಿ ಲೇಪನಮಾಡಲಾಗಿದೆ. ಆಕಳಿಗೆ ಕೆಚ್ಚಲವಿದ್ದು ಎರಡು ಕೋಡು, ಒಂದು ಬಾಲ ಇವೆ. ಮುಖಮಾತ್ರ ಕಂದುಗೆಂಪು ಬಣ್ಣದಿಂದ ತುಂಬಲಾಗಿದೆ. ಮುಂದಿನ ಕಾಲುಗಳಲ್ಲಿ, ಹಿಂದಿನ ತೊಡೆಗಲ ಭಾಗ ತೋರಿಸಿ ರೇಖೆಗಳಲ್ಲಿ ಚಿತ್ರಸಲಾಗಿದೆ. ಟಗರುವಿನ ಕೊಂಬುಗಳು ತಿರುವಿಕೊಂಡು ಮುಖ, ಬಾಲ ಎತ್ತಿ ಮೂರು ಕಾಲುಗಳಿಂದ ರೇಖೆಗಲ ಮೂಲಕ ರಚಿಸಿದೆ. ಎತ್ತಿನ ಮುಖವನ್ನು ಅರ್ಧಬಣ್ಣದಿಂದ ತುಂಬಿ, ಚೂಪಾಗಿ ತೋರಿಸಿ, ಒಂದು ಚುಕ್ಕೆಯನ್ನು ಮುಖದಲ್ಲಿಟ್ಟು ಕಣ್ಣಾಗಿ ತೋರಿಸಲಾಗಿದೆ. ನಾಲ್ಕು ಕಾಲುಗಳು, ಒಂದು ಬಾಲ, ಸ್ವಲ್ಪ ಡುಬ್ಬ (ಇಣಿ) ವನ್ನು ರೇಖಾವರ್ಣದಿಂದ ರಚಿತಗೊಂಡಿದೆ. ಎತ್ತಿದಕತ್ತು. ಇಳಿಬಿಟ್ಟಬಾಲ, ನಾಲ್ಕು ಕಾಲು ಮೈತುಂಬಿಕೊಂಡ ದೇಹದಿಂದ ರೇಖಾವರ್ಣದಿಂದ ಮುಖವಿಲ್ಲದ ಕುದುರೆಯನ್ನು ರಚಿಸಿದೆ. ಕವಲು ಕೊಂಬಿನ ಚಿಂಜೆಗಳೆರಡು ಪಕ್ಕದಲ್ಲಿ ನಿಂತಿವೆ. ಮೂರು ಕಾಲು, ಒಂದು, ಎರಡುಕಾಲಿನ ಇನ್ನೊಂದು ಜಿಂಕೆ ಇದೆ.


ಕೊಪ್ಪಳದ ಕಲ್ಲಾಸರೆಯ ನಕಲು ಚಿತ್ರಗಳು



೧ನೇ ಕಲ್ಲಾಸರೆಯ ರೇಖಾ ಚಿತ್ರಗಳು



೨ನೇ ಕಲ್ಲಾಸರೆಯ ರೇಖಾ ಚಿತ್ರಗಳು



೩ನೇ ಕಲ್ಲಾಸರೆಯ ರೇಖಾ ಚಿತ್ರಗಳು

ಮೂರುಕಾಲಿನ ಜಿಂಕೆಗೆ ಒಂದು ಸಣ್ಣ ಬಾಲವಿದೆ. ಎರಡು ಕಾಲಿನ ಜಿಂಕೆಗೆ ಬಾಲವಿಲ್ಲ, ಈ ಎರಡೂ ಜಿಂಕೆಯ ಅರ್ಧ ಮುಖವನ್ನು ಕೆಂಪು ವರ್ಣದಿಂದ ತುಂಬಿ ರೇಖಾವರ್ಣದಿಂದ ಚಿತ್ರಗಳನ್ನು ರಚಿಸಲಾಗಿದೆ. ಎಡಮುಖ ಕಿವಿಒಂದು, ಮುಂದಿನ ಎರಡು ಕಾಲು, ಹಿಂದಿ ಎರಡು ತೊಡೆಯ ಭಾಗ, ಸಣ್ಣಬಾಲ ಇದ್ದು ಜಿಗಿದು ಓಡುತ್ತಿರುವ ಜಿಂಕೆಯನ್ನು ವರ್ಣರೇಖೆಯಿಂದ ಬಿಡಿಸಲಾಗಿದೆ. ಇನ್ನೂ ಮೂರು ಕವಲು ಕೊಂಬಿನ ಜಿಂಕೆಗಳಿದ್ದು, ಎರಡು ಜಿಂಕೆಗಳಿಗೆ ನಾಲ್ಕು ಕಾಲು, ಒಂದೊಂದು ಬಾಲ, ಒಂದಕ್ಕೆ ಎರಡು ಕವಲು ಕೊಂಬು, ಇನ್ನೊಂದಕ್ಕೆ ಕವಲಿನ ಒಂದೇ ಕೊಂಬು, ಮುಖದ ಅರ್ಧಕ್ಕೆ ಕೆಂಪು ಬಣ್ಣದಿಂದ ತುಂಬಿ ಬಲಮುಖಮೂಡಿನಿಂತ ವರ್ಣರೇಖಾ ಚಿತ್ರಗಳಾಗಿ ಚಿತ್ರಿಸಲಾಗಿದೆ. ಕೆಳಗಿನ ಕವಲುಕೋಡಿನ ಜಿಂಕೆಗೆ, ಒಂದು ಕವಲುಕೋಡು, ಮುಂದೊಂದು ಹಿಂದೊಂದು ಕಾಲು, ಅರ್ಧಬಾಲ, ವರ್ಣದಿಂದ ಪೂರ್ಣವಾಗಿ ಲೇಪಿಸಿದ ಬಲಮುಖದ ಚಿತ್ರವಾಗಿದೆ. ಈ ಚಿತ್ರದ ಮೇಲೆ ಮೂಲು ಕಾಲು, ಒಂದು ಸ್ವಲ್ಪ ಬೆಂಡಾದ ಬಾಲ, ಒಂದುಕಿವಿ, ಬಾಗಿದ ಕತ್ತು ಮುಖವಿಲ್ಲದ ನರಿಯನ್ನು ವರ್ಣರೇಖಾದಿಂದ ತೋರಿಸಿದೆ.

ಈ ಮೇಲಿನ ಎಲ್ಲ ಪ್ರಾಣಿಗಳನ್ನು ಸರತೆಯಿಂದ ಕಡಿಮೆ ರೇಖೆಗಳನ್ನು ಬಳಸಿಕೊಂಡು ನೈಜರೂಪಕ್ಕೆ ಸಮೀಪವಾಗಿ ಚಿತ್ರಗಳ ರಚನೆ ಮಾಡಲಾಗಿದೆ. ಇವುಗಳಲ್ಲಿ ಕವಲುಕೊಂಬಿನ ಜಿಂಕೆಗಳು ಗಾಬರಿಗೊಂಡು ನೋಡುವಂತಿದ್ದು, ನೈಜತೆಗೆ ತುಂಬಾ ಹತ್ತಿರವಾಗಿ ಕಂಡುಬರುತ್ತವೆ. ಸುತ್ತಿದ ಕೊಂಬಿನ ಟಗರು ಸರಳ ಹಾಗೂ ಸೃಜನಾತ್ಮವಾಗಿ ವರ್ಣ ರೇಖೆಗಳಿಂದ ಕೂಡಿದೆ. ಈ ಟಗರು ಮುಖವನ್ನು ಬಿಟ್ಟರೆ ಇನ್ನುಳಿದ ಎಲ್ಲಾ ಪ್ರಾಣಿಗಳ ಮುಖವು ಚೂಪಾಗಿ ತೋರಿಸಿರುವುದು ಕುತೂಹರವೆನಿಸುತ್ತದೆ.

ಕಲ್ಲಾಸರೆ - ಎರಡು

ಕೊಪ್ಪಳ ಗವಿಮಠದ ಅಶೋಕನ ಶಿಲಾಶಾಸನವಿರುವ ಗುಂಡಿನ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿ ಈ ಒಂದು ಶಿಲಾಶ್ರಯವದೆ. ಅರ್ಧ ಬಾಗಿರುವ ಬಂಡೆಯ ಭಾಗದ ಕಲ್ಲಾಸರೆ ಒಂದು ಉಂಟಾಗಿದ್ದು, ಇದರ ಮೇಲಿನ ಛಾವಣಿಯಲ್ಲಿ ಕಂದುಗೆಂಪು ವರ್ಣದ ಬಾಹ್ಯರೇಖೇಯಿಂದ ಚಿತ್ರಗಳನ್ನು ಹಿಡಿದು ರಚಿಸಲಾಗಿದೆ. ಕೈಯಲ್ಲಿ ಬಿಲ್ಲುವಿನಂತೆ ಹಿಡಿದು ಕಾಲುಗಳೆರಡು ಮುಂದೆ ಹಿಂದೆ ಮಾಡಿಕೊಂಡು ಬಾಣವನ್ನು ಬಿಟ್ಟ ಭಂಗಿಯಲ್ಲಿದ್ದ ಮನುಷ್ಯಾಕೃತಿ. ಸ್ವಲ್ಪದೂರದಲ್ಲಿ ಬಾಣವಿದ್ದು, ಬಾಣದ ಮುಂದೆ ಚೂಪಾದ ಮೊನೆಯಂತೆ ಮತ್ತು ಬಾಣದ ಹಿಂದೆ ಗೆರೆಗಳನ್ನು ಎಳೆಯಲಾಗಿದೆ. ಈ ಬಾಣದ ಕೆಳಗೆ ರುಂಡ ವಿಲ್ಲದ ದೇಹವನ್ನು ತನ್ನ ನಾಲ್ಕು ಕಾಲುಗಳನ್ನು, ಬಾಲವನ್ನು ಮೇಲೆ ಮಾಡಿಕೊಂಡು ಬಿದ್ದಿರುವಂತೆ ಒಂದು ಪ್ರಾಣಿಯನ್ನು ತೋರಿಸಲಾಗಿದೆ. ಈ ಪ್ರಾಣಿಯು ಬಿಲ್ಲುದಾರಿಯ ಕಡೆ ಬಾಲದೇಹವನ್ನು ಬಿದ್ದದ್ದನ್ನು ನೋಡಿದರೆ ಬಾಣದ ಏಟುತಿಂದು ಬಿದ್ದ ಪ್ರಾಣಿಯಾಗಿ ಕಂಡುಬರುತ್ತದೆ. ಇದರ ಕೆಳಗೆ ಕವಲು ಕೊಂಬಿನ ಜಿಂಕೆಯೊಂದು

ಮುಂಗಾಲಗಳು ಮಡಿಚಿಕೊಂಡು ತಲೆಕೆಳಗೆ ಮಾಡಿ ಹಿಂದಿನ ಕಾಲುಗಳಿಂದ ನೂಕುತ್ತಾ ಬೀಳುತ್ತಿರುವಂತೆ ಕಂಡುಬರುತ್ತದೆ. ಇದರ ಬಾಲ, ನಡುವಿನ ಉಬ್ಬಿದ ಆಕರವು ಏಟುತಿಂದು ಬಿದ್ದೇಳುವಂತೆ ರಚಿತವಾದದ್ದು, ತೋರುತ್ತದೆ. ಈ ಚಿತ್ರದ ಕೆಳಗೆ ಚಿಕ್ಕದೊಂದು ಪ್ರಾಣಿಯಿದ್ದು, ಕಂದುಗೆಂಪು ವರ್ಣದಿಂದ ಪೂರ್ಣವಾಗಿ ರಚಿತವಾಗಿದೆ. ಇದರ ಚೂಪಾದ ಮೂತಿ, ಎತ್ತಿರಿಸಿದ ಎರಡು ಕಿವಿಗಳು, ನಾಲ್ಕು ಕಾಲುಗಳು ಬಾಲವನ್ನು ತನ್ನ ಚೂಪಾದ ಮೂತಿಯಂತಿದ್ದು, ಸ್ವಲ್ಪ ಕೆಳಭಾಗಿದೆ ಈ ಚಿತ್ರವು ದೂರದೃಷ್ಟಿಯಿಂದ ನೋಡಿಕೊಂಡುವ ನಿಂತಂತೆ ರಚಿತಗೊಂಡಿದೆ. ಕೆಳಗಿನ ಕೊನೆಯ ಚಿತ್ರ ಒಂದು ಮುಂದೆ ಬಾಗಿದೆ ಕೊಂಬು, ಚಿಕ್ಕಬಾಲ, ಮುಂಗಾಲಿನ ಒಂದು ಕಾಲು ಮಡಚಿ, ಮೂರು ಕಾಲುಗಳ ಮೇಲೆ ನಿಂತು ಬಿಲ್ಲಿದಾರಿಯ ಕಡೆ ಬೆನ್ನು ಮಾಡಿ ನಿಂತದ್ದು, ಒಂದು ಪ್ರಾಣಿಯು ಜಿಂಕೆಯಂತೆ ತೋರಿ ಬರುತ್ತದೆ. ಈ ಎಲ್ಲ ಚಿತ್ರಗಳು ವರ್ಣರೇಖೆಗಳಿಂದ ಕೂಡಿವೆ.

ಈ ಕಲ್ಲಾಸರೆಯ ಎಲ್ಲಾ ಪ್ರಾಣಿಗಳು ಒಂದು ಕಾಡಿನಲ್ಲಿ ಹೆಚ್ಚಿದ್ದು, ಆ ಪ್ರಾಣಿಗಳ ಬೇಟೆಯಾಡುತ್ತಿರುವ ಬಿಲ್ಲು ಬಾಣದಾರಿಯ ಚಿತ್ರವನ್ನು ತೋರಿಸಲಾಗಿದೆ. ಬಿಲ್ಲುದಾರಿಯು ಕೆಲವು ಸಲ ಪ್ರಮಾಣಿಯ ಬೆನ್ನತ್ತಿ ಜಿಗಿದು ಓಡುವಂತೆಯೂ ಕಂಡುಬರುತ್ತೆ.

ಕಲ್ಲಾಸರೆ - ಮೂರು

ಗವಿಮಠದ ಗುಡ್ಡದಲ್ಲಿ ಈ ಶಿಲಾಶ್ರಯವಿದ್ದು, ಗವಿಯ ಶಿಲಾಶ್ರಯ ಮೇಲೆ ಕಂದುಗೆಂಪು ವರ್ಣದಿಂದ ಮೂರು ಎತ್ತುಗಳು, ಒಂದು ಆನೆಯಂತೆ ಕಾಣುವ ಪ್ರಾಣಿ, ಇನ್ನೊಂದು ವಿಚಿತ್ರ ಆಕಾರದ, ನಾಲ್ಕು ಕಾಲುಗಳ ಪ್ರಾಣಿ ರಚಿಸಲಾಗಿವೆ. ಮೇಲಿನ ಮೊದಲ ಚಿತ್ರವು ಉದ್ದನೆಯ ಕತ್ತು, ಸ್ವಲ್ಪದುಂಡಾದ ತಲೆ, ಸಣ್ಣಡುಬ್ಬ (ಇಣಿ), ಮುಂಗಾಲುಗಳೆರಡು ಕೆಳಗೆ ಇದ್ದು, ಹಿಂದಿನ ಎರಡುಕಾಲುಗಳಲ್ಲಿ ಒಂದು ಮೇಲಕ್ಕೆ ಎತ್ತಿ ಬಾಲದಂತೆಯೂ ಇನ್ನೊಂದು ಕಾಲು ದೇಹದ ಸಮಾನವಾಗಿ ಚಾಚಿದಂತೆ ವರ್ಣರೇಖೆಗಳಿಂದ ಚಿತ್ರಿಸಲಾಗಿದೆ. ಇದರ ಮುಂದಿನ ಎತ್ತು ಒಂದುಕೋಡು, ಮುಖ, ಮುಂಗಾಲುಗಳ ಒಂದು ನೇರವಾಗಿ ಕೆಳಗಿದ್ದು, ಇನ್ನೊಂದು ಮುಂದೆ ಮೊಣಕಾಲನ್ನು ತನ್ನ ಸ್ವಲ್ಪ ಮಡಿಚಿ ಭುಜದ ಡುಬ್ಬ(ಇಣಿ), ಬಾಲ ಕಾಲಿನಂತೆ, ಚಿತ್ರವು ವರ್ಣರೇಖೆಯಿಂದ ರಚಿಸಿದೆ. ಈ ಚಿತ್ರವು ಹಿಂದೆ ಬೆನ್ನುಮಾಡಿ ನಿಂತಿರುವ ಎತ್ತಿನ ಚಿತ್ರವು ಎರಡು ಕೊಂಬುಗಳ, ಮೂರು ಕಾಲುಗಳು, ನೆಲಕ್ಕೆ ಮುಖಮಾಡಿ ಭುಜ ರೇಖೆಯು ಬಲದವರೆಗೆ ಅಂಕುಡೊಂಕಾಗಿದ್ದು, ವರ್ಣರೇಖೆಯ ಮೂಲಕ ಸೃಜನಾತ್ಮಕತೆಯಿಂದ ಕೂಡಿದ ಚಿತ್ರವಾಗಿ ರಚಿತವಾಗಿದೆ. ಇದರ ಕೆಳಗೆ ಮಲಗಿದಂತೆ ಮತ್ತು ಓಡುತ್ತಿರುವಂತೆ ಕಾಣುವ ಒಂದು ಎತ್ತಿನ ಚಿತ್ರವಿದೆ. ಮುಖದಿಂದ ಒಂದು ಕೊಂಬಿನವರೆಗೆ, ಕೊಂಬಿನಿಂದ ಬಾಲ, ಹಿಂದಿನ ಕಾಲಿನವರೆಗೆ ಎರಡು ರೇಖೆಗಳನ್ನು ಬಳಸಿಕೊಂಡು ದೇಹಕ್ಕೆ ಮತ್ತೆ ನಾಲ್ಕು ರೇಖೆಗಳ ಮೂಲಕ ಕಾಲುಗಳನ್ನು

ವರ್ಣ ರೇಖೆಗಳಿಂದ ಚಿತ್ರಿಸಲಾಗಿದೆ. ಬಾಲ ಮತ್ತು ಕಾಲುಗಳು, ಮುಖಗಳಿಂದ ಭಂಗಿಯನ್ನು ನೋಡಿದರೆ ಇದು ಓಡುವ ಎತ್ತಿನಂತೆ ಕಂಡುಬರುತ್ತದೆ. ಈ ಚಿತ್ರದ ಮುಂದೆ ಮೇಲೆತ್ತಿದ ದೊಡ್ಡಕಿವಿ, ಮುಖದಿಂದ ಸೊಂಡಿಲಿನವರೆಗೆ ಒಂದು ರೇಖೆಯನ್ನು, ಮುಖದ ಕೆಳಗಿನಿಂದ ಕೊರೆಯುವಂತೆ ಮತ್ತೊಂದು ರೇಖೆಯನ್ನು ಬೆನ್ನುವಿನ ಮೇಲಿಂದ ಬಾಲ ಮತ್ತು ಹಿಂದಿನ ಕಾಲಿನಂತೆ ಎಳೆಯಲಾಗಿದ್ದು, ದೇಹದ ಕೆಳಗೆ ಎರಡು ಗೆರೆಗಳೆರಡು ಎಳೆದು ಆನೆಯಂತೆ ಕಂಡುಬರುತ್ತದೆ. ಈ ನೆಲೆಯ ಚಿತ್ರಗಳಲ್ಲಿ ಅಪೂರ್ಣತೆ ಎದ್ದುಕಾಣುತ್ತಿದ್ದು, ಅದರಲ್ಲಿನ ಕೆಲವು ಸರಳತೆಯ ರೇಖೆಗಳಿಂದ ಪ್ರಾಣಿಗಳ ಪೂರ್ಣ ಆಕಾರ ತೋರಲು ಪ್ರಯತ್ನಿಸಿರುವುದು ಒಂದು ಸೃಜನತೆಯ ಮುಖ.

ಕಲ್ಲಾಸರೆ - ನಾಲ್ಕು

ಗವಿಮಠದ ಗುಡ್ಡದ ದಕ್ಷಿಣ ತುದಿಯ ಅಶೋಕನ ಶಾಸನದಿಂದ ಈಶಾನ್ಯ ದಿಕ್ಕಿನ ಹತ್ತಿರದಲ್ಲಿ ಬೃಹದಾಕಾರ ಶಿಲಾಗುಂಡಿನ ಸೀಳುವಿನಲ್ಲಿ ಶಿಲಾಶ್ರಯದ ಮೇಲೆ ಕಂದುಗೆಂಪು ಬಣ್ಣದ ರೇಖೆಗಳಿಂದ ಕೂಡಿದ ಹುಲಿಯಿದೆ. ನಾಲ್ಕು ಕಾಲು, ಬಾಲ ರುಂಡ ವಿಲ್ಲದ ದೇಹ, ಏನನ್ನೋ ನೋಡುತ್ತಾ ನಿಂತ ಭಂಗಿಯಲ್ಲಿ ಕಂದುಗೆಂಪು ಬಣ್ಣದಿಂದ ರೇಖೆಗಳನ್ನು ದೇಹದ ಎಲ್ಲಾ ಭಾಗಗಳಿಗೆ ತೋರಿಸಿ ಚಿತ್ರಿಸಲಾಗಿದೆ. ಈ ಚಿತ್ರವು ನಾಶದ ಅಂಚಿನಲ್ಲಿದ್ದು, ಇನ್ನುಳಿದ ವರ್ಣಚಿತ್ರಗಳು ಪೂರ್ಣವಾಗಿ ಅಳಿಸಿ ಹೋಗಿವೆ, ಹುಲಿಯ ಮೈಮೇಲೆ ವಕ್ರರೇಖೆಗಳಿಂದ ಪಟ್ಟಿಗಳನ್ನು ಬಿಡಿಸಿರುವುದು ನೈಜ ಹಾಗೂ ಸೃಜನತೆಯ ಸ್ವರೂಪಕ್ಕೆ ಒತ್ತುಕೊಡಲಾಗಿದೆ.

ಕಲ್ಲಾಸರೆ - ಐದು

ಕೊಪ್ಪಳದ ಮಳೆಮಲ್ಲೇಶ್ವರ ಗುಡ್ಡದಲ್ಲಿ ಪಾಂಡವರ ವಠಾರ ಎಂಬ ಸ್ಥಳವಿದ್ದು, ಇಲ್ಲಿಯೇ ಒಂದು ಶಿಲಾಶ್ರಯದ ಮೇಲೆ ಕಂದುಗೊಂಪು ಬಣ್ಣದಿಂದ ಮಾನವರು ಕೈಕೈ ಹಿಡಿದು ಸಾಲಾಗಿ ನಿಂತು ಸ್ವಲ್ಪ ಕಾಲುಗಳ್ನು ಕುಣಿಸುವಂತೆ ನೃತ್ಯದ ಸ್ವರೂಪಾಗಿ ಚಿತ್ರಗಳು ಕಂಡಿದ್ದು, ಕೆಲವು ಸ್ಪಷ್ಟವಾಗಿದ್ದರೆ ಇನ್ನುಳಿದವು ಅಸ್ಪಷ್ಟತೆಯಿಂದ ಕೂಡಿವೆ. ನಡುವಿನ ಭಾಗಕ್ಕೆ ಬಟ್ಟೆಯಂತೆ ಕಟ್ಟಿಕೊಂಡು ಉಡುಗೆಯನ್ನು ತೊಟ್ಟಂತೆ ಚಿತ್ರಗಳಲ್ಲಿ ತೋರಿಸಲಾಗಿದೆ. ಕೆಲವು ಕುಣಿಯುವ ಚಿತ್ರಗಳಲ್ಲಿ ಪ್ರಮಾಣತೆ ಹೆಚ್ಚುಕಡಿಮೆ ಕೂಡಿದೆ.

ನಾರಾಯಣಪೇಟೆ

ಗಂಗಾವತಿ ಮುನಿರಾಬಾದ್ ರಸ್ತೆಯಲ್ಲಿ ಬಸ್ಸಾಪುರದಿಂದ ದಕ್ಷಿಣದ ಕಡೆಗೆ ಸುಮಾರು ೩ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿ ಎಡದಂಡೆಯ ಮೇಲೆ ಒಂದು ಗ್ರಾಮವಾಗಿದೆ. ಇಲ್ಲಿರುವ ಗುಡ್ಡಗಳಲ್ಲಿ ಶಿಲಾಶ್ರಯಗಳು ಕಂಡುಬಂದಿವೆ.



ಮನುಷ್ಯರ ಚಿತ್ರಗಳು, ೧ನೇ ಕಲ್ಲಾಸರೆ



ಸೂರ್ಯ ಮತ್ತು ಮನುಷ್ಯರ ಚಿತ್ರಗಳು, ೨ನೇ ಕಲ್ಲಾಸರೆ



ಸಮೂಹ ಜಿಂಕೆಗಳ ಚಿತ್ರಗಳು, ೩ನೇ ಕಲ್ಲಾಸರೆ

ಕಲ್ಲಾಸರೆ - ಒಂದು

ಗುಡ್ಡದಲ್ಲಿ ಶಿಲಾ ಬಂಡೆಯ ಮುಂದೆಬಾಗಿ ಒಂದು ಎತ್ತು ಬೃಹದಾಕಾರದ ಶಿಲಾಶ್ರಯದಲ್ಲಿ ಸುಮಾರು ೪-೫ ಮೀಟರ್ ಎತ್ತರದ ಮಾನವಾಕೃತಿಯನ್ನು ಚಿತ್ರಿಸಲಾಗಿದೆ. ತಲೆಯ ಭಾಗವು ನೆಲದಿಂದ ಸುಮಾರು ೩ ಮೀ. ಎತ್ತರದಲ್ಲಿ ರಚಿಸಿದ್ದು ಕಂಡುಬಂದಿದೆ. ಮನುಷ್ಯನ ಚಿತ್ರವು ದೊಡ್ಡ ತೊಡೆಗಳನ್ನು ಅಗಲಿಸಿ ಸೊಟ್ಟವಾಗಿ ನಿಂತ ಭಂಗಿಯಲ್ಲಿ ಚಿತ್ರಿಸಲಾಗಿದೆ. ದೇಹಕ್ಕೆ ತಕ್ಕದಾಗಿಲ್ಲದ ತಲೆ, ತಲೆಯ ಮೇಲೆ ಸಮನಾಗಿ ಎಳಿದ ಸಣ್ಣ ಸಣ್ಣ ರೇಖೆಗಳು ತಲೆಯ ಕೂದಲಿನಂತೆ ಸೂಚಿಸುತ್ತವೆ. ತಲೆಯು ಬಲಭಾಗಕ್ಕೆ ಸರಿದು ಕೆಳಭಾಗಕ್ಕೆ ಬಾಗಿದಂತೆ ತೋರುತ್ತದೆ. ಬಲಗೈ ಬಲಭುಜದ ಮೇಲಿನ ಮುಖಮಾಡಿದ್ದು, ಅಂಗೈಯಿಲ್ಲದ್ದು, ಎಡಗೈಯನ್ನು ಕೆಳಬಾಗಿ ತನ್ನ ಅಂಗಾಗಳ ಕಡೆ ತೋರಿಸಿದಂತೆ ಇದೆ. ದಪ್ಪವಾದ ತೊಡೆಗಳು ಅಗಲಿಸಿ ಬಾಗಿವೆ. ಮೊಣಕಾಲಿನ ಮೇಲಿನ ಭಾಗಮಾತ್ರ ಇಲ್ಲಿ ತೋರಿಸಿ ಚಿತ್ರಿಸಲಾಗಿದೆ. ದೇಹದ ಮತ್ತು ತೊಡೆ ಮೇಲೆ ರೇಖೆಗಳನ್ನು ಎಳೆಯಲಾಗಿದೆ.

ಸ್ತ್ರೀ ಚಿತ್ರ

ಪುರುಷ ವರ್ಣಚಿತ್ರದ ಎದುರಿನಲ್ಲಿ ಉದ್ದವಾದ ದೊಡ್ಡ ಬಂಡೆಯ ಮೇಲ್ಮೈ ಮೇಲೆ ಮೊಣಕೈವರೆಗಿನ ಕೈಗಳಿದ್ದು, ಅಗಲಿಸಿ, ಕಾಲುಗಳು ಮೊಣಕಾಲುಕೆಳಗಿನ ಕಾಲುಗಳು ಇದ್ದು ಅಗಲಿಸಿ, ದುಂಡುತಲೆ, ಜಡೆಯಂತೆ ಇದ್ದು, ಎರಡು ಜಡೆಗಳು ಬಲಕ್ಕೆ ಒಂದು, ಎಡಕ್ಕೆ ಮತ್ತೊಂದು ಸೆಟೆದು ನಿಂತಂತಿವೆ. ಹೊಟ್ಟೆಯ ಉಬ್ಬಿ, ಅಗಲವಾಗಿಯೂಕೂಡ ಉಬ್ಬಿಸಿದ್ದು, ಗರ್ಭಿಣಿಯಂತೆ ಹೊಟ್ಟೆ ತೋರುತ್ತದೆ. ಇಳಿಬಿದ್ದ ಆಕಾರದಲ್ಲಿ ತೋರಿಸಿ ಯೋನಿಗೆ ರೂಪಕವಾಗಿ ರಚಿಸಿ ಹೆಣ್ಣಿನ ಚಿತ್ರವಾಗಿ ವರ್ಣವನ್ನು ಲೇಪಿಸಲಾಗಿದೆ.

ಕಲ್ಲಾಸರೆ - ಎರಡು

ನಾರಾಯಣಪೇಟೆ ಗ್ರಾಮದಿಂದ ಪಶ್ಚಿಮ ಮುಖವಾಗಿ ಸ್ವಲ್ಪದೂರದಲ್ಲಿರುವ ಬೆಟ್ಟದಲ್ಲು ಅಲ್ಲೆ ಹತ್ತಿರವಿರುವ ಗಣಿಗಾರೆಯ ಸ್ಥಳದ ಎದುರಿನ ಪೂರ್ವಾಭಿಮುಖವಾಗಿ ಒಂದು ದೊಡ್ಡ ಕಲ್ಲಾಸರೆಯ ಮೇಲೆ ಚಿಕ್ಕದಾದ ಮಾನವಾಕೃತಿಯಿದೆ. ಸು. ೨೮ ಸೇಂ.ಮೀ. ಎತ್ತ, ೨೭ ಸೇಂಮೀ. ಅಗಲವಿದ್ದು, ಕಂದುಗೆಂಪು ವರ್ಣರೇಖಾಕೃತಿಯಿದೆ. ಎರಡು ರೇಖೆಗಳ ಮೂಲಕ ರಚಿಸಿದ್ದು, ಬಲಗೈಯನ್ನು ಮೇಲಕ್ಕೆತ್ತಿ ಎಡಗೈಯನ್ನು ಭುಜದ ಸಮಾನವಾಗಿ ಉದ್ದಚಾಚಿದಂತೆ ಕಂಡುಬರುತ್ತದೆ. ಕೈಗಳು ಪೂರ್ತಿಯಾಗಿ ತೋರಿಸದೆ ಇದ್ದು, ಕಾಲುಗಳು ಕೂಡ ಪಾದಗಳನ್ನು ಬಿಟ್ಟು ರಚಿಸಲಾಗಿದೆ. ಸೃಜನಾತ್ಮಕತೆಯಿಂದ ಕೇವಲ ನಾಲ್ಕು ಬಾಹ್ಯ ರೇಖೆಗಳಿಂದ ಮಾನವಾಕೃತಿ ಚಿತ್ರವನ್ನಾಗಿ ತೋರಿಸಲಾಗಿದೆ.

ಕಲ್ಲಾಸರೆ - ಮೂರು

ಈ ಶಿಲಾಶ್ರಯವು ಮೊದಲನೆಯ ಕಲ್ಲಾಸರೆಯ ಮೇಲಿನ ಗುಡ್ಡದ ಶಿಲಾಶ್ರಯದ ಅವುಗಳಲ್ಲಿ ಬಂಡೆಯ ಮುಖಭಾಗದಲ್ಲಿ ಕೆಲವು ಚಿತ್ರಗಳಿವೆ. ಅವುಗಳಲ್ಲಿ ಸೂರ್ಯ ಮತ್ತು ಮನುಷ್ಯಾಕೃತಿಗಳು. ಸೂರ್ಯನಂತೆ ಇರುವ ಚಿತ್ರವು ೧೭ ಸೆಂ.ಮೀ. ವ್ಯಾಸ ವೃತ್ತಾಕಾರದ ವ್ಯಾಸ ಗೆರೆಯಲ್ಲಿದ್ದು, ಎದರ ಸುತ್ತಲೂ ಸಣ್ಣ ಸಣ್ಣ ಗೆರೆಗಳಿಂದ ಎಳೆದು ಸೂರ್ಯನ ಕಿರಣಗಳಂತೆ ತೋರಿಸಲ್ಪಡುತ್ತದೆ.

ಮನುಷ್ಯಾಕೃತಿ '೧'

ಅವನ ಬಲಗೈ ಕೆಳಕ್ಕೆ ಇಳಿಬಿಟ್ಟು ಅಂಗೈಯಲ್ಲಿ ಇದೆ. ಎಡಗೈ ಮೇಲಕ್ಕೆ ಎತ್ತಿ ಹಿಡಿದು ತಲೆ ಅರೆ ವೃತ್ತಾಕಾರದಲ್ಲಿದೆ. ದೇಹ, ತೊಡೆಯ ಭಾಗವಾದಿ ಕಾಲುಗಳಂತೆ ಎರಡು ರೇಖೆಯನ್ನು ತೋರಿಸಲಾಗಿದೆ. ಎಡಗೈಯನ್ನು ಚೌಡಿ ರೇಖೆಯಲ್ಲಿದ್ದು, ಹಸ್ತದಲ್ಲಿ ಮೂರು ಚೂಪಾದ ಬೆರಳಿನಂತೆ ತೋರಿಸಿ ಆ ಬೆರಳು ಅಂಗೈಯನ್ನು ವರ್ಣದಿಂದ ತುಂಬಿ ಚಿತ್ರರಚಿಸಿದೆ.

ಮನುಷ್ಯಾಕೃತಿ '೨'

ತಲೆ, ತಲೆಗೆ ಜೊಂಡಗಿಯ ಮೀಸೆಯಂತೆ ಎರಡು ಗೆರೆಗಳಿದ್ದು, ತಲೆಯ ಕೆಳ ಮುಖಕ್ಕೆ ಅಡ್ಡಲಾಗಿ ಎರಡು ನೇರ ರೇಖೆಗಳನ್ನು ಎಳೆಯಲಾಗಿದೆ. ಮೇಲಕ್ಕೆ ಎತ್ತಿದ ಎರಡು ಕೈಗಳು ಮೂರು ಬೆರಳುಗಳನ್ನು ಹೊಂದಿವೆ. ವರ್ಣದಿಂದ ಕೈಗಳಿಗೆ ತುಂಬಿದ್ದು, ವಿಶೇಷ ಎರಡು ಕಾಲುಗಳು ಕೆಳವಾಗಿ ನಿಂತಿದ್ದು, ಬಲಕಾಲಿಗೆ ಪಾದಗಳಾಗಲಿ ಬೆರಳುಗಳಾಗಲಿ ಇಲ್ಲ. ಎಡಗಾಲಿಗೆ ಎರಡು ಬೆರಳು ರೂಪದಲ್ಲಿ ತೋರಿಸಲಾಗಿದೆ. ಈ ಚಿತ್ರವು ಕಪ್ಪೆಯನ್ನು ಹೋಲುವಂತೆ ಕಂಡುಬರುತ್ತದೆ. ದೇಹದ ಮೇಲೆ ಪಟ್ಟಿಗಳಂತೆ ಎರಡು ಗೆರೆಗಳನ್ನು ಎಳೆಯಲಾಗಿದೆ.

ಮೂರನೆ ಮನುಷ್ಯ

ತಲೆ ದುಂಡಾಗಿದ್ದು, ಭುಜದಿಂದ ನೇರವಾದ ಎರಡು ಗೆರೆಗಳೆಳೆದು ಮೂರು ಮೂರು ಬೆರಳಿನಂತೆ ತೋರಿಸಿದೆ. ದೇಹದ ಭಾಗವು ಕುತ್ತಿಗೆಯಿಂದ ಕೆಳಭಾಗದವರೆಗೆ ಚೂಪಿನಿಂದ ಮೊಂಡಾದ ಕೆತ್ತಿನ ಪೆನ್ಸಿಲ್‌ನಂತೆ ಭಾಸವಾಗುತ್ತದೆ. ಎರಡು ಗೆರೆಗಳು ಎಳೆದು ಕಾಲುಗಳಂತೆ ರಚಿಸಲಾಗಿದೆ. ಈ ಚಿತ್ರವು ಸರಳವಾದ ನೇರ ರೇಖೆಗಳಿಂದ ಕೂಡ ಚಿತ್ರವಾಗಿದೆ.

ಕಲ್ಲಾಸರೆ - ನಾಲ್ಕು

ನಾರಾಯಣಪೇಟೆಯ ಎರಡನೆಯ ಶಿಲಾಶ್ರಯದ ಎಡಭಾಗಕ್ಕೆ ಈ ನಾಲ್ಕನೆಯ ಕಲ್ಲಾಸರೆ ಇದೆ. ಸ್ವಲ್ಪ ಸಣ್ಣ ಜಾಗವಿದ್ದು, ಕುಳಿತುಕೊಳ್ಳದೇ ಮಲಗಿ ಕೊಂಡು ಚಿತ್ರಬಿಡಿಸಲು ಸಾಧ್ಯವಾಗಿರುತ್ತದೆ. ಬಂಡೆಯ ಛಾವಣಿಯಲ್ಲಿ ಸುಮಾರು ೧೭ ಕಂದುಗೆಂಪು ವರ್ಣದಿಂದ ರಚಿತವಾದ ಜಿಂಕೆಗಳಿವೆ. ಮೇಲಿನ ಸಾಲಿನಲ್ಲಿ ಆರು, ಎರಡನೆಯ ಸಾಲಿನಲ್ಲಿ ಐದು, ಮೂರು, ಎರಡು, ಒಂದು ಕಂಡುಬಂದಿವೆ. ಪೂರ್ತಿಕೆಳಗಿನ ಒಂದು ಜಿಂಕೆಯು ಮಾತ್ರ ಕಂದುಗೆಂಪು ವರ್ಣದಿಂದ

ಲೇಪನವಾಗಿದ್ದು, ಎರಡು ರೋಮನ್ ಸಂಖ್ಯೆ 'V' ತರ ತೋರಿಸಿದ್ದು, ಮುಂಗೈಲೊಂದು, ಹಿಂಗಾಲೊಂದು ಪಾತ್ರ ತೋರಿಸಿ, ಒಂದು ಬಾಲಕ್ಕ ಎರಡು ಚಿಕ್ಕ ಗೆರೆಗಳನ್ನು ಎಳೆದು ಕೂದಲಿನಂತೆ ತೋರಿಸಲಾಗಿದೆ. ಈ ಚಿತ್ರದ ಮೇಲೆ ಒಂದು ನೋಡಗನಿಗೆ ಬಲಮುಖಮಾಡಿ ನಿಂತ ಜಿಂಕೆಯೊಂದು ಬಿಟ್ಟರೆ ಇನ್ನುಳಿದ ಎಲ್ಲಾ ಜಿಂಕೆಯ ಎಡಮುಖ ಮಾಡಿ ನಿಂತಿವೆ. ಅಲ್ಲದೆ ಮುಖ ಚೂಪು, 'V' ಆಕಾರದ ಕೊಂಬು ಎರಡುಕಾಲುಗಳು, ಒಂದು ಬಾಲವಿದ್ದು, ಬಾಲಕ್ಕೆ ಕೊನೆಯಲ್ಲಿ ಮೂರು ಸಣ್ಣ ಗೆರೆಯಗಳನ್ನು ತೋರಿಸಲಾಗಿದೆ. ದೇಹದ ಮೆಲೆ ಕುತ್ತಿಗೆ ಭಾಗದಿಂದ ಹಿಂದಿನ ಬಾಲದವೆರೆಗೆ ಲಂಬರೇಖೆಯನ್ನು ಎಳೆದು, ವರ್ಣರೇಖೆಗಳ ಬಾಹ್ಯರೂಪಕವಾಗಿ ಜಿಂಕೆಗಳನ್ನು ರಚಿಸಲಾಗಿದೆ.

ಬಿಳೀಬಾವಿ

ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಎಡಕ್ಕೆ ಒಂದು ರಸ್ತೆ ಬೂದುಗುಂಪದ ಗ್ರಾಮದ ಸಮೀಪ ಬರುತ್ತದೆ. ಮುಖ್ಯರಸ್ತೆಯಿಂದ ಬಿಳೇಭಾವಿ ಗ್ರಾಮಕ್ಕೆ ಸುಮಾರು ೨ ಕಿ.ಮೀ. ದೂರವಿದೆ. ಈ ಗ್ರಾಮದಲ್ಲಿ ಶಿಲಾಶ್ರಯಗಳೆರಡು ಕಂಡುಬಂದಿವೆ.

ಕಲ್ಲಾಸರೆ - ಒಂದು

ಗ್ರಾಮದ ಹತ್ತಿರ ಬೆಟ್ಟವೊಂದಿದ್ದು, ಅದರ ಕೆಳಗಡೆ ಒಂದು ಗುಂಡು ಏಕಮಯವಾಗಿ ಇದ್ದುದರ ಕೆಳಗಡೆ ಟೊಳ್ಳಾಗಿ ಶಿಲಾಶ್ರಯುಂಟಾಗಿದುದರ ಮೇಲ್ಭಾವಣಿಯ ಮೇಲ್ಮೈ ಮೇಲೆ ಮುಖ್ಯವಾಗಿ ಕಂದುಗೆಂಪು ವರ್ಣದಿಂದ ಮತ್ತು ಬಿಳಿವರ್ಣದಿಂದ ರೇಖಾಚಿತ್ರಗಳ ರಚಿತವಾಗಿವೆ. ಇಲ್ಲಿ ಮಂಡಲ, ಚಕ್ರ, ವಿಷ್ಣುನಚಕ್ರದಂತೆ ಇನ್ನೊಂದು ಚಕ್ರವಿದೆ. ಎರಡು ಎತ್ತುಗಳಿವೆ, ಅಶ್ವಸವಾರನಂತೆ ಇದೆ. ಕುಂಡಲ ಚಿತ್ರವು ಜೋಡಿ ರೇಖೆಗಳಿಂದ ನಾಲ್ಕು ಹೊರಳಿಕೆಗಳ ಚೌಕವಿದ್ದು, ಈ ಚೌಕದ ವೃತ್ತಗಳಿಗೆ ವಿರುದ್ಧವಾಗಿ ಚೌಕದ ವೃತ್ತದ ಹೊರಳಿಗಳನ್ನು ರಚಿಸಿದ್ದು, ಒಂದು ಸರಳತೆಯಿಂದ ಕೂಡಿದ ರಂಗೋಲಿಯಂತೆ ಕಂಡುಬರುವ ಮಂಡಲಚಿತ್ರವಾಗಿದೆ. ಮೇಲಿನ ಎತ್ತುವಿನ ಚಿತ್ರವು ಸಣ್ಣ 'V' ಆಕಾರದ ಕೋಡು, ಮುಖ, ಭುಜದ ಮೇಲೆ ಡುಬ್ಬ, ಸಣ್ಣಬಾಲ, ನಾಲ್ಕು ಕಾಲುಗಳಂತೆ ತೋರಿದರೆ ಇನ್ನೊಂದು ರೀತಿಯಲ್ಲಿ ದಪ್ಪನೆಯ ಎರಡನೇ ಕಾಲುಗಳಂತೆ ಕಾಲುಗಳು ಕಂಡುಬರುವುದು, ಒಂದು ಸೃಜನಾತ್ಮಕತೆಯನ್ನು ತೋರಿಸಿಕೊಡುವಂತೆ ಚಿತ್ರಿಸಿದೆ. ಎಡಮುಖಮಾಡಿ ನಿಂತ ಎತ್ತುವಿನ ಚಿತ್ರವಾಗಿದೆ. ಇದರ ಹಿಂದೆ ವೃತ್ತಾಕಾರದಲ್ಲಿ ಜೋಡಿ ರೇಖೆಗಳ ನಾಲ್ಕು ದಿಕ್ಕಿಗೆ ಬರುವಂತೆ ಎಳೆದಿದ್ದರೆ, ಇನ್ನೂ ನಾಲ್ಕು ದಿಕ್ಕಿಗಳಿಗೆ ನೇರವಾಗಿ ಎರಡು ರೇಖೆಗಳನ್ನು ಎಳೆದು ಅಶೋಕನ ಚಕ್ರದಂತೆ ತೋರುವ ಒಂದು ಚಕ್ರವಾಗಿದೆ. ಇನ್ನೊಂದು ಮಧ್ಯದಲ್ಲಿ ವಿಷ್ಣುವಿನ ಚಕ್ರದಂತೆ ತೋರುವ ವೃತ್ತವು ದೊಡ್ಡದಿಂದ ಸಣ್ಣ ಪ್ರಮಾಣದ ಮೂರು ವೃತ್ತಗಳು ಒಂದರೊಳಗೊಂದಿದ್ದು, ಬಾಹ್ಯ ರೇಖೆಯ ವೃತ್ತದಿಂದ ಎರಡನೆಯ ಒಳವೃತ್ತದವೆರೆಗೆ

ಐದು ಅಡ್ಡಲಾಗಿ ರೇಖೆಗಳನ್ನು ಎಳೆಯಲಾಗಿದೆ. ಬಾಹ್ಯರೇಖೆಗೆ ಹೋರಮುಖವಾಗಿ ಸ್ವಲ್ಪಬಾಗಿದ ೧೪ ಸಣ್ಣ ಗೆರೆಗಳನ್ನು ಎಳೇದು ತಿರುಗುವ ಚಲನೆಯಂತೆ ಬ್ರಾಸವಾಗುತ್ತದೆ. ಮಂಡಲ ಚಿತ್ರದ ಕೆಳಗೆ, ತಲೆ ಕೆಳಗೆ ಮಾಡಿ ನಿಂತ ಎತ್ತುವನ್ನು ರಚಿಸಿದ್ದು, ಒಂದು ಕೊಂಬು, ಚೂಪಾದ ಮುಖ, ಭಜದ ಡುಬ್ಬ (ಇಣಿ), ಚಿಕ್ಕಬಾಲ, ಮೂರು ಕಾಲುಗಳಂತೆ ವರ್ಣರೇಖೆಗಳಿಂದ ರಚಿತವಾಗಿದೆ. ಇದರ ಕೆಳಗೆ ಕುದುರೆ ಸವಾರನಿದ್ದು, ಬಲಗೈಯನ್ನು ಮೇಲಕೆತ್ತಿ, ಎಡಗೈಯಿಂದ ಲಗಾಮು ಎಳೆಯುವಂತೆಯಿದೆ. ಇವನಿಗೆ ಕಾಲುಗಳೆಲ್ಲ, ಕುದುರೆಗೆ ಎರಡು ಕಿವಿ, ಕುತ್ತಿಗೆ, ಮುಖ, ನಾಲ್ಕುಕಾಲು, ಕುತ್ತಿಗೆಗೆ ಸಣ್ಣಸಣ್ಣ ರೇಖೆಗಳನ್ನು ಎಳೆದು ಒಂದು ಶಿಶ್ನವನ್ನು ತೋರಿಸಿದೆ. ನೋಡುಗನಿಗೆ ಬಲಮುಖವಾಗಿ ನಿಂತ ಕುದುರೆ, ಕುದುರೆಸವಾರನ ವರ್ಣರೇಖೆಯ ಚಿತ್ರವಾಗಿ ರಚಿತವಾಗಿದೆ.

ಕಲ್ಲಾಸರೆ - ಎರಡು

ಬೆಟ್ಟದ ಮೇಲೆ ಶಿಲಾಶ್ರಯವಿದ್ದು, ಶಿಲಾಸಮಾಧಿಗಳು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ್ದವು ಎಂದು ತಿಳಿದುಬಂದಿದೆ. ಇವುಗಳ ಹತ್ತಿರದಲ್ಲಿ ಗವಿಶಿಲಾಶ್ರಯವಿದೆ. ಇದರಲ್ಲಿ ಹಲವು ಚಿತ್ರಗಳಿವೆ. ಮೇಲಿನಿಂದ ಕ್ರಮವಾಗಿ ಚಿಕ್ಕ ಮನುಷ್ಯ, 'H' ಆಕಾರದ ಮನುಷ್ಯ, ನಾಲ್ಕು ಎತ್ತುಗಳು, ಒಂದು ಕಾಮಧೇನು, ಚೌಕಮಂಡಲಗಳು ಮೂರು, ಎರಡು, ಹೂವಿನ ಗಿಡಗಳು, ಒಂದು ಮಗುವಿನಂತೆ ತೋರುವಲ ರೂಪ, ಮೇಲಿನ ಚಿಕ್ಕಮನುಷ್ಯಾಕೃತಿಯ ಅಗಲವಾಗಿ ಚಾಚಿದ ಎರಡು ಕೈಗಳು, ಅಗಲಿಸಿ ನಿಂತ ಕಾಲುಗಳು ಚುಕ್ಕೆಯಂತ ತಲೆ ಇದು ಕಡ್ಡಿ ಚಿತ್ರದಂತೆ ರಚಿತವಾಗಿದೆ. 'H' ಆಕಾರವನ್ನು ಹೋಲುವ ಮನುಷ್ಯನನ್ನು ಚಿಕ್ಕಪ್ರಮಾಣದ ಆರುಗೆರೆಗಲಲ್ಲಿ ರಚಿಸಲಾಗಿದೆ. ಒಂದು ಬಾಲ, ಭುಜದ ಮೇಲೆ ಡುಬ್ಬು, ಎರಡು ಕೋಡು, ತ್ರಿಕೋನಾಕಾರದ ಮುಖ, ತೊಡೆಯಂತೆ ತೋರುವ ಎರಡು ಕಾಲಿನ ಆಕಾರಗಳು ಇದ್ದು ಬಲಮುಖವಾಗಿ ನಿಂತಿದೆ. ಚೌಕಾರದ ಮಂಡಲದಲ್ಲಿ ಮೂರು ರೇಖೇಗಳನ್ನು ಎಳೆದು ೧೨ ದಿಕ್ಕುಗಳನ್ನು ಕಾಣಿಸಿ, ಸಣ್ಣ ವೃತ್ತಗಳನ್ನು ಎಲ್ಲಾ ದಿಕ್ಕಿಗೆ ಚುಕ್ಕೆಗಳನ್ನು ಇಡಲಾಗಿದೆ. ಮಧ್ಯದಲ್ಲಿ ಸಣ್ಣ ವೃತ್ತದ ರೂಪವನ್ನು ಕೊಡಲಾಗಿದೆ. ಇದು ಪಕ್ಕದಲ್ಲೆ ಕ್ರಮವಾಗಿ ಮೂರು ಗೂಳಿಗಳಿದ್ದು ಮುಖ, ಕೊಂಬು, ಒಂದೇ ಆಯತಾಕಾರದ ಗೆರೆಯಲ್ಲಿದ್ದು, ಭುಜದ ಡುಬ್ಬಿ ಚಿತ್ರಕ್ಕೆ ತಕ್ಕದಾಗಿ, ಎರಡು ಕಾಲು, ಒಂದು ಉದ್ದನೆಯ ಶಿಶ್ನವನ್ನು ಎರಡು ಮೂರನೆಯ ಗೂಳಿಗೆ ಬಾಲವಿದೆ. ಹೂವಿನ ಒಂದು ಗುಚ್ಚನ್ನು ಗೂಳಿಗಳಿಗೆ, ರಚಿಸಿದ್ದು, ಆರು ಹೂವನ್ನು ಹೊಂದಿರುವ ಕವಲು ರೆಂಬೆಗಳನ್ನು ಚಿತ್ರಿಸಲಾಗಿದೆ. ಇನ್ನೊಂದು ಕೆಳಗೆ ಐದು ಪೊಕಳೆಗಳಿಗೆ ಮೊಗ್ಗುಗಳನ್ನು ತೋರಿಸಿದೆ ಹೂವಿನ ಗುಚ್ಚನ್ನು ಚಿತ್ರಸಲಾಗಿದೆ. ಮಧ್ಯದಲ್ಲಿ ಕಾಮಧೇನುವಿನಂತೆ ಆಕಳು ಚಿತ್ರವನ್ನು ರಚಿಸಿದ್ದು, ಎರಡು ಕೋಡು, ಕಿವಿ, ಎತ್ತಿದ ಕತ್ತು, ಉದ್ದನೆಯ ಬಾಲ , ನಾಲ್ಕುಕಾಲುಗಳನ್ನು ತೋರಿಸಿದೆ. ಎರಡನೆಯ ಚೌಕಮಂಡಲದಲ್ಲಿ ಆರು

ರೇಖೆಗಳಿಂದ, ನಾಲ್ಕು ರೇಖೆಗಳು ಸೇರಿ ಎಂಟು ತ್ರಿಭುಜಗಳನ್ನು ಸೃಷ್ಟಿಯಾಗಿವೆ, ಈ ಚಿತ್ರದ ಮಂಡಲ ಇನ್ನು ಉಳಿದ ಮಂಡಲಗಿಂತ ಸ್ವಲ್ಪ ಚಿಕ್ಕದಾಗಿದೆ. ಮೂರನೆಯ ಮಂಡಲವು ಹನ್ನೆರಡು ರೇಖೆಗಳನ್ನು ಸೇರಿ ಒಂದು ಚೌಕವಾಗಿಸಿ ಎಂಟು ತ್ರಿಭುಜಗಳನ್ನು ಸೃಷ್ಟಿಸಿ ನಾಲ್ಕು ಮೂಲೆಯಲ್ಲಿ ಮೊಗ್ಗುಗಳನ್ನು ರಚಿಸಿ ವರ್ಣರೇಖೆಗಳಿಂದ ಸೃಷ್ಟಿಸಿ ನಾಲ್ಕು ಮೂಲೆಯಲ್ಲಿ ಮೊಗ್ಗುಗಳನ್ನುರಚಿಸಿ ವರ್ಣಗಳಿಂದ ಚಿತ್ರರಚಿಸಲಾಗಿದೆ. ಈ ಚಿತ್ರಗಳಲ್ಲಿ ಎರಡು ಮನುಷ್ಯಾಕೃತಿ, ಒಂದು ಗೂಳಿಯನ್ನು ಬಿಳಿವರ್ಣದಿಂದ ರಚಿಸಲಾಗಿದೆ.

ಹೊಸಬಂಡಿ ಹರ್ಲ್ಲಾಪುರ

ಗಂಗಾವತಿಯಿಂದ ಮುನಿರಾಬಾದ್ ರಸ್ತೆಯಲ್ಲಿ ಬೋರುಕಾ ಜಲವಿದ್ದುತ್ ಘಟಕದ ಹತ್ತಿರ ಹೊಸಬಂಡಿಹರ್ಲ್ಲಾಪುರವಿದೆ. ಇಲ್ಲಿ ಆರು ಶಿಲಾಶ್ರಯಗಳು ಕಂಡುಬಂದಿವೆ.


ಕಲ್ಲಾಸರೆ - ಒಂದು

ಹೊಸಬಂಡಿ ಹರ್ಲ್ಲಾಪುರದಿಂದ ಮುನಿರಾಬಾದ್ ಹೋಗುವ ಬಲಭಾಗಕ್ಕೆ ಕಣಶಿಲೆ ಬೆಟ್ಟವಿದೆ. ದೊಡ್ಡ ಉದ್ದವಾದ ಶಿಲಾಶ್ರಯೆಯು ಇದೆ. ಈ ಸ್ಥಳದಿಂದ ಬೋರುಕಾ ಜಲವಿದ್ಯುತ್ ಘಟಕದ ಗೋಡೆಯ ಹತ್ತಿರವಾಗಿ ಕಾಣುತ್ತದೆ. ಈ ಶಿಲಾಶ್ರಯದಲ್ಲಿ ಕಂದುಗೆಂಪು ವರ್ಣದ ರೇಖೆಯಿಂದ ಮೂಡಿದ ಮನುಷ್ಯಾಕೃತಿಯಂತೆ ಕಂಡುಬರುತ್ತದೆ. ಬಯಲು ಶಿಲಾಶ್ರಯವಾದ ಈ ಸ್ಥಳ ಮಳೆ, ಗಾಳಿ, ಬಿಸಿಲುಗಳಂತ ಪರಿಸರದ ವೈಪರಿತ್ಯಗಳಿಗೆ ಸಿಕ್ಕಿ ಪೂರ್ಣವಾಗಿ ನಾಶವಾದಂತೆ ಗೋಚರಿಸುತ್ತದೆ. ಆದ್ದರಿಂದ ನಿಜಾಕ್ತಿಯು ನೈಜತೆಯಿಂದ ಕಾಣಲು ಅಡ್ಡಿಯಾಗುತ್ತಿದೆ, ಆದ್ದರಿಂದ ನಿಜಾಕೃತಿಯು ನೈಜತೆಯಿಂದ ಕಾಣಲು ಅಡ್ಡಿಯಾಗುತ್ತಿದೆ. ಈ ಆಶ್ರಯದಿಂದ ಬಲದಿಕ್ಕಿಗೆ ಹೋದರೆ ಅಲ್ಲಿ ಸ್ವತಂತ್ರವಾದ ಗುಂಡಿನ ಆಶ್ರಯದಲ್ಲಿ ಕಾಮ ಕ್ರೀಡೆಗೆ ಸಂಬಂಧಿಸಿದ ಇತ್ತೀಚಿನ ದಿನಗಳಲ್ಲಿ ರಚನೆಯಾದಂತೆ ತೋರುವ ಹೆಣ್ಣು ಮತ್ತು ಗಂಡುವಿನ ಚಿತ್ರಗಳು ಇದ್ದು, ಇವು ಬಿಳಿ ಹಾಗೂ ಕೆಂಪು ವರ್ಣದಿಂದ ರೇಖೆಯಲ್ಲಿ ರಚಿತವಾಗಿವೆ. ಇವುಗಳಲ್ಲದೇ ಅನೇಕ ಚಿತ್ರಕೃತಿಗಳು ಚಿಕ್ಕ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಈ ಸ್ಥಳವು ಕೆರೆಯ ಹತ್ತಿರವಿರುವುದು ಕಂಡುಬರುತ್ತದೆ.

ಕಲ್ಲಾಸರೆ - ಎರಡು

ಗಂಗಾವತಿಯಿಂದ ಮುನಿರಾಬಾದ್ ರಸ್ತೆಯಲ್ಲಿ ಬೋರುಕಾ ಜಲವಿದ್ಯುತ್ ಘಟಕದ ಹತ್ತಿರ ಈ ಹೊಸಬಂಡಿ ಹರ್ಲ್ಲಾಪುರ ಗ್ರಾಮವಿದೆ. ಇಲ್ಲಿರುವ ಬೆಟ್ಟದಲ್ಲಿ ಅಂದರೆ ಜಲವಿದ್ಯುತ್ ಘಟಕದ ಎಡಬದಿಗೆ ಹೊಂದಿಕೊಂಡಿರುವ ಬೆಟ್ಟವಿದ್ದು, ಅದರ ಮುಂಭಾಗದಲ್ಲಿ ದೊಡ್ಡ ಗಾತ್ರದ ಬಂಡೆಯೊಂದಿದೆ. ಅದರ ಪಶ್ಚಿಮ ಭಾಗದಲ್ಲಿ ಶಿಲಾಶ್ರಯವಿದ್ದು, ಅದರ ಛಾವಣಿಯ ಮೇಲೆ ಒಂದು ಎತ್ತು, ಚಿಕ್ಕಪ್ರಮಾಣದ ಮನುಷ್ಯ, ಇನ್ನೊಂದು ದೊಡ್ಡಪ್ರಮಾಣದ ಮನುಷ್ಯನ ಚಿತ್ರಗಳಿವೆ, ಮೇಲಿನ ಎಡಭಾಗದಲ್ಲಿ ಬಲಮುಖ, ಒಂದು ಭುಜದ ಡುಬ್ಬ, ಬಾಲ ಎರಡು ಕಾಲು,

೧ನೇ ಕಲ್ಲಾಸರೆ, ಹೋಸಬಂಡಿ ಹರ್ಲಾಪುರ



ವರ್ಣರೇಖಾ ಚಿತ್ರಗಳು




ವರ್ಣಚಿತ್ರಗಳು ಮತ್ತು ಸಂಶೋಧಕರು

ಹೊಸಬಂಡೆ ಹರ್ಲಾಪುರದ ಚಿತ್ರಗಳು



ಪ್ರಾಣಿ ಮತ್ತು ಮನುಷ್ಯರ ಚಿತ್ರಗಳು, ೨ನೇ ಕಲ್ಲಾಸರೆ



ಎತ್ತುವಿನ ಮತ್ತು ಜಿಂಕೆಗಳು ಸಮೂಹ, ೩ನೇ ಕಲ್ಲಾಸರೆ



ಕೋಣದ ಚಿತ್ರ ೪ನೇ ಕಲ್ಲಾಸರೆ

ಕೊಂಬುಗಳೆರಡು ಸ್ವಲ್ಪವಾಗಿ ವಜ್ರ ಆಕೃತಿಯಂತೆ ಕಂಡುಬರುತ್ತದೆ. ಕಾವಿವರ್ಣದಿಂದ ಬಾಹ್ಯರೇಖೆಯಲ್ಲಿ ಚಿತ್ರಿಸಲ್ಪಟ್ಟಿದೆ. ಇದರ ಮುಂದೆ ಕಡ್ಡಿಚಿತ್ರದಂತೆ ಒಂದು ದುಂಡು ರುಂಡ, ಕೈಗಳೆರಡು ಮತ್ತು ಕಾಲುಗಳೆರಡೂ ಚಲಿಸುವ ವ್ಯಕ್ತಿಯಂತೆ ಇದ್ದು, ಬಲಗೈಯಲ್ಲಿ ಚಿಕ್ಕ ಕೋಲುವನ್ನು ಹೋಲುವಂತಿದೆ. ತಲೆಯ ಮೇಲೆ ವಕ್ರವಾಗಿರುವ ಸಣ್ಣ ಸಣ್ಣ ಗೆರೆಗಳಿವೆ. ಇವು ಒಂದು ರೀತಿಯಲ್ಲಿ ಕೂದಲನ್ನು ಹೋಲುತ್ತದೆ.

ಗುಂಡಿನ ಭಾವಣಿಯ ಇಳಿಮುಕವಾಗಿ ಭಾಗಿದ ಜಾಗದಲ್ಲಿ ದೊಡ್ಡ ಪ್ರಮಾಣದ ಮಾನವಾಕೃತಿ ಸು. ೬೦ ಸೆ.ಮೀ. ಎತ್ತರದಲ್ಲಿ ಪೂರ್ಣ ಲೇಪನದಿಂದ ಚಿತ್ರಿತವಾಗಿದೆ. ನೋಡುಗನಿಗೆ ಬಲಮುಖವಾಗಿ ಕಾಣುವ ಭಂಗಿಯಲ್ಲಿ ಈ ಚಿತ್ರವಿದೆ. ಒಂದು ಕೈ ಕಾಲುಗಳಿಂದ ಮಾತ್ರ ಕಂಡುಬರುತ್ತದೆ. ಒಂದು ಕುರ್ಚಿಯ ಮೇಲೆ ಕುಳಿತ ಭಂಗಿಯಲ್ಲಿದ್ದು, ನಡುವಿನ ಮುಂದೆ ಮೊಣಕಾಲುವರೆಗೆ ನೇರವಾಗಿ ಚಾಚಿ, ಮೊಣಕಾಲುನಿಂದ ಮಡಚಿಕೊಂಡು ಪಾದವನ್ನು ತೋರಿಸಿ, ಪಾದದ ಹಿಂಬಡವು ಸ್ವಲ್ಪ ಎದ್ದಿರುವುದು ಇಲ್ಲಿ ಕಾಣಬಹುದು. ದೇಹಕ್ಕೆ ತಕ್ಕ ತಲೆ, ಕೈ, ಕಾಲು, ಅಂಗೈ, ಬೆರಳು ಜೋಡಿಸಿ ನಮಸ್ಕರಿಸುವಂತೆ ಕಂಡುಬರುತ್ತದೆ. ಕಂದುಗೆಂಪು ವರ್ಣದಿಂದ ತೆಳವಾಗಿ ಮನುಷ್ಯ ಚಿತ್ರವನ್ನು ಪೂರ್ಣವಾಗಿ ಲೇಪಿಸಲಾಗಿದೆ.

ಕಲ್ಲಾಸರೆ - ಮೂರು

ಎರಡನೆಯ ಶಿಲಾಶ್ರಯ ಬಂಡೆಯಲ್ಲಿಯ ದಕ್ಷಿಣದಿಕ್ಕಿನಲ್ಲಿ ಕೆಂಪು ಬಣ್ಣದಿಂದ ಕೆಲವು ಚಿತ್ರಗಳು ರಚಿತವಾಗಿವೆ. ಅವುಗಳು ಕವಲುಕೊಂಬಿನ ಜಿಂಕೆಗಳು, ಗೂಳಿ, ನಾಯಿ, ಚಿತ್ರಗಳಿವೆ. ದೊಡ್ಡಗುಂಡಿನ ಮೇಲೆ ಸ್ವಲ್ಪ ಅದರಿಂದ ಮುದುಭಾಗಿ ಗುಂಡೊಂದಿದ್ದು, ಇದರ ಶಿಲಾಶ್ರಯ ಬಂಡೆಯ ಆಶ್ರಯಕ್ಕೆ ವರ್ಣದಿಂದ ಚಿತ್ರಿಸಿದ ಚಿತ್ರಗಳಿವೆ. ಪರಿಸರದ ವೈಪರಿತ್ಯಗಳಿಂದ ನಾಶದ ಅಂಚಿನಲ್ಲಿರುವ ಈ ಚಿತ್ರಗಳು ಇಲ್ಲಿಯೇ ಕಲಲು ಗಣಿ ಉದ್ಯಮದಿಂದ ಆಶ್ರಯವಾಗಿದ್ದು, ಮೇಲ್ಭಾಗದ ಬಂಡೆಯನ್ನು ಹೊಡೆದು ಹಾಕಿದ ಕಾರಣ ಚಿತ್ರಗಳಿಗೆ ನೇರವಾಗಿ ಮಳೆ, ಬಿಸಿಲು, ಗಾಳಿಗಳಿಂದ ಪೂರ್ಣವಾಗಿ ಕಾಣದಂತೆ ಇರುವ ದಿನಗಳು ಹತ್ತಿರವಾಗುತ್ತಿವೆ. ಮೇಲಿನ ಭಾಗದಲ್ಲಿ ಅಪೂರ್ಣವಾದಂತೆ ಗೂಳಿಯು ಎರಡು ಕೊಂಬುಗಳ ಎದುರಾಗಿ ಸ್ವಲ್ಪಬಾಗಿವೆ. ಸು. ೨ಮೀ ಉದ್ದ, ೧.ಮೀ ಎತ್ತರದಲ್ಲಿ ಈ ರೇಖಾಚಿತ್ರವಿದೆ. ಒಂದು ಕಿವಿ, ಮುಖ, ಕತ್ತು, ಸಣ್ಣಭುಜದ ಡುಬ್ಬ ಇದ್ದು, ಇನ್ನುಳಿದ ಯಾವ ಭಾಗಗಳಿಲ್ಲದೆ ಚಿತ್ರವನ್ನು ಕೆಂಪು ವರ್ಣದಿಂದ ರೇಖೆಗಳಿಂದ ರಚಿಸಲಾಗಿದೆ. ಇದು ಬಲಮುಖವನ್ನು ತೋರಿಸಿಕೊಂಡು ನಿಂತಿದೆ. ಇದರ ಮುಂದೆ ಸಣ್ಣ ಅಳತೆಯ ನಾಯಿಯಿದ್ದು, ತೆರೆದ ಬಾಯಿ, ಮುಂಗಾಲ ಮುಂದೆ, ಹಿಂಗಾಲು ಸ್ವಲ್ಪ ಮುಂದೆಮಾಡಿ, ಬಾಲ ಮೇಲಕ್ಕೆ ಬೆಂಡಾಗಿ ನಿಂತ ಭಂಗಿಯನ್ನು ನೋಡಿದರೆ ನಾಯಿಮರಿಯೊಂದು ಎತ್ತುವನ್ನು ನೆಡಿ ಕವಲು ಕೊಂಬುಗಳೆರಡು, ಮುಖ, ಒಂದು ಮೇಲಕ್ಕೆ ಬೆಂಡಾದ ಬಾಲ, ಹೊಂಜೋಲಿಯ

ದೇಹ, ಮುಂದೆ ಚಾಚಿ ನಿಂತ ಮುಂದಿನ ಕಾಲು, ಹಿಂದಿನ ಕಾಲು, ಕಂದುಗೆಂಪು ಬಣ್ಣ ಲೇಪನವಾದ ಕವಲು ಕೊಂಬಿನ ಜಿಂಕೆ ತೋರಿಸಲಾಗಿದೆ. ಈ ಕವಲು ಜಿಂಕೆಯಂತೆ ಪ್ರಮಾಣ ಹೆಚ್ಚು ಕಡಿಮೆ ಹೋಲುವ ಈ ಚಿತ್ರದ ಕೆಳಗೆ ಮೊದಲಸಾಲು ಐದು ಕವಲುಕೊಂಬಿನ ಜಿಂಕೆಗಳಿವೆ. ಇದರ ಕೆಳಗೆ ಮೂರು ಕವಲು ಕೊಂಬಿನ ಜಿಂಕೆಗಳಿವೆ. ಇವುಗಳು ಎಲ್ಲವು ಎಡಮುಖ ತೋರಿಸಿಕೊಂಡು ಸಾಲಾಗಿ ನಿಂತ ಕವಲುಕೊಂಬಿನ ಜಿಂಕೆಯ ಚಿತ್ರಗಳಾಗಿವೆ, ನಾಯಿಮರಿ ಮತ್ತು ಕವಲುಕೊಂಬಿನ ಜಿಂಕೆಗಳು ಸರಳವಾದ ಮತ್ತು ಸೃಜನಾತ್ಮಕವಾಗಿ ನೈಜವಾಗಿ ಕಾಣುವಂತೆ ಸುಂದರವಾದ ಜಿಂಕೆಗಳ ಗಂಪನ್ನು ತೋರಿಸಲಾಗಿದೆ. ಈ ಜಿಂಕೆಗಳು ಸುತ್ತಮುತ್ತಲ ಅರಣ್ಯ ಪ್ರದೇಶದಲ್ಲಿರುವ ಸಂಕೇತವಾಗಿರಬಹುದು.

ಕಲ್ಲಾಸರೆ - ನಾಲ್ಕು

ಹೊಸಬಂಡಿ ಹರ್ಲಾಪುರ ಗ್ರಾಮದಿಂದ ಉತ್ತರದಿಕ್ಕಿನಲ್ಲಿರುವ ಗುಡ್ಡ ಪ್ರದೇಶದಲ್ಲಿ ಸುಮಾರು ಒಂದುವರೆ ಕಿ.ಮೀ. ದೂರದಲ್ಲಿ ಡುಬಾಯಿತ್ವಾರಿ ಬೆಟ್ಟವಿದ್ದು, ಅದರಲ್ಲಿ ಉತ್ತರ ದಕ್ಷಿಣಕ್ಕೆ ಹಬ್ಬಿರುವ ಬೆಟ್ಟ ಸಾಲು ಒಂದಿದ್ದು, ಇದರ ನಡುವಿನ ಭಾಗದಲ್ಲಿ ದೊಡ್ಡ ಪ್ರಮಾಣದ ಕೋಣಕಂಡುಬರುತ್ತದೆ. ದೊಡ್ಡಕೋಣ ಚಿತ್ರ ಸುಮಾರು ೨.೮೦ ಮೀ. ಉದ್ದ. ೧.೪೯ ಮೀ ಎತ್ತರ ಇದ್ದು. ದೊಡ್ಡ ಶಿಲಾಶ್ರಯಕ್ಕೆ ತಕ್ಕ ಮಟ್ಟಿಗೆ ಚಿತ್ರ ರಚಿಸಲಾಗಿದ್ದು, ಕಂದುಗೆಂಪು ಬಣ್ಣದ ರೇಖಾಚಿತ್ರವಾಗಿದೆ. ಸ್ವಲ್ಪ ಒಳಮುಖವಾಗಿ ಎದುರಿಗೆ ಮುಖಮಾಡಿ ಬಾಗಿರುವ ಕೋಡುಗಳು, ಎರಡು ಕಿವಿ, ಮುಖ, ಎರಡು ಚೂಪಾದ ಕಾಲುಗಳು, ದೇಹಕ್ಕೆ ಹಿಂದಿನ ಕಾಲಿನ ಒಜರೇಖೆಗೆ ಸಮವಾಗಿ ಮುಂದಿನ ಕಾಲಿನ ಒಳ ಮತ್ತು ಹಿಂದಿನ ತೊಡೆಯ ಚಪ್ಪೆ, ಮುಂದಿನ ತೊಡೆಯ ಮೇಲಿನ ಚಪ್ಪೆಯನ್ನಾಗಿ ತೋರುವಂತೆ ರೇಖೆಯು ಚಿತ್ರಿಸಲಾಗಿದೆ. ಬಾಲವು ಮೊಂಡಾಗಿದ್ದು, ಸ್ವಲ್ಪ ಎತ್ತಿದೆ. ಕಣ್ಣು, ಇನ್ನು ಎರಡು ಕಾಲು, ಇಲ್ಲದೇ ಇದ್ದರೂ ಗೂಳಿಯ ಬಲಿಷ್ಠವಾಗಿ ಕಾಣುವಂತೆ ಪ್ರಮಾಣಬದ್ಧತೆಯಿಂದ ಸೃಜನಾತ್ಮಕವಾಗಿ ಚಿತ್ರರಚನೆಯಾಗಿದೆ. ಕಂದುಗೆಂಪು ವರ್ಣ ಬಾಹ್ಯರೇಖೆಗಳಿಂದ ಕೂಡಿದೆ.

ಕಲ್ಲಾಸರೆ - ಐದು

ಈ ಶಿಲಾಶ್ರಯವು ನಾಲ್ಕನೇಯ ಶಿಲಾಶ್ರಯ ಬೆಟ್ಟದಲ್ಲಿದ್ದು, ಇಲ್ಲಿಂದ ದಕ್ಷಿಣ ಮುಖವಾಗಿ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಬೆಟ್ಟದ ಮೇಲೆ ಕಂಡುಬರುತ್ತದೆ. ಆ ಶಿಲಾಶ್ರಯ ಬಂಡೆಯ ಮೇಲೆ ಕಂದುಗೆಂಪು ಬಣ್ಣದ ರೇಖಾ ಚಿತ್ರಗಳು ಕಂಡುಬರುತ್ತವೆ. ಮನುಷ್ಯಾಕೃತಿಯೊಂದಿದ್ದು, ಸ್ವಲ್ಪನಾಶವಾಗಿರುವುದು ಕಾಣುತ್ತದೆ. ರಚನೆಯಲ್ಲಿ ಮನುಷ್ಯನು ವಿಶೇಷಗುಣಗಳಿಂದ ಕೂಡಿದೆ. ಎರಡೂ ಕೈಗಳನ್ನು ಮೇಲೆ ಎತ್ತಿ, ತಲೆ ನಾಲ್ಕು ಮೂತಿಯ ಚಾಕಾರದಲ್ಲಿದೆ. ಭುಜ, ಕೈಗಳು, ದ್ವಿರೇಖೆಯಲ್ಲಿ ರಚಿಸಿದ್ದು, ದೇಹ ಸೊಂಟದವರೆಗೆ ಮಾತ್ರ ತೋರುತ್ತದೆ. ದೇಹದಲ್ಲಿ ಎರಡೂ ಭುಜಗಳಿಂದ ಪರಸ್ಪರ ಹೊಟ್ಟೆಯ ಭಾಗವನ್ನು ಅಡ್ಡಲಾಗಿ ರೇಖೆಗಳನ್ನು ತೋರಿಸಿದೆ.

ಕಲ್ಲಾಸರೆ - ಆರು

ಈ ಕಲ್ಲಾಸರೆಯು ಐದನೆಯ ಕಲ್ಲಾಸರೆಯು ಐದನೆಯ ಕಲ್ಲಾಸರೆಯಿಂದ ದಕ್ಷಿಣಕ್ಕೆ ಹತ್ತಿರವಾಗಿ ಕಂಡುಬರುತ್ತದೆ. ಈ ನೆಲೆಯು ಗಂಡು ಒಂದೆ ನಿಂತಿದ್ದು, ಬೃಹದಾಕಾರವಾಗಿದೆ. ವಿಶೇಷವಾಗಿ ಅದು ಹಾವಿನ ಹೆಡೆಯಂತಿದ್ದು, ಪಶ್ಚಿಮಕ್ಕೆ ಸ್ವಲ್ಪಬಾಗಿದೆ. ಇದರ ಒಳಭಾಗದಲ್ಲಿ ಕಂದುಗೆಂಪು ಬಣ್ಣದಿಂದ ರಚಿಸಿರುವ ಒಂದು ಪ್ರಾಣಿ, ಮನುಷ್ಯ, ಚಿತ್ರಗಳು ಸ್ವಲ್ಪ ಅಸ್ಪಷ್ಟವಾಗಿ ಕಂಡುಬರುತ್ತವೆ. ಪ್ರಾಣಿಯು ಅಶ್ವವಂತೆ ಕಂಡುಬರುತ್ತದೆ. ಮೈತುಂಬಿರೇಖೆಗಳಿವೆ. ಮುಖದಿಂದ ಲಗಾಮವನ್ನು ತೋರಿಸಲಾಗಿದೆ. ಕೈಯನ್ನು ಮುಂದೆ ಬಾಚಿದಂತಿರುವ ಮಾನವನ ಚಿತ್ರ ಕೊನೆಗೊಂಡಿಲ್ಲ. ಈ ಚಿತ್ರಗಳಲ್ಲಿ ಅಸ್ಪಷ್ಟತೆ ಎದ್ದುಕಾಣುತ್ತಿದ್ದು, ಪರಿಸರದ ಅತಿಸೃಷ್ಟಿಯ ಪರಿಣಾಮದ ಪ್ರಭಾವಕ್ಕೆ ಸಿಕ್ಕು ನಾಶದ ಅಂಚಿನಲ್ಲಿರುವುದು ಮುಖ್ಯವಾಗಿ ತೋರುತ್ತದೆ.

ಇಂದರಗಿ

ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ರಸ್ತೆಯಲ್ಲಿ ಕೊಪ್ಪಳದಿಂದ ಸು. ೨೦ ಕಿ.ಮೀ. ಇದ್ದರೆ. ಗಂಗಾವತಿಯಿಂದ ಸುಮಾರು ೩೮ ಕಿ.ಮೀ. ಹೊರಬದಿಯ ಗುಂಡುಗಳಲ್ಲಿ ಶಿಲಾಶ್ರಯ ಒಂದಿದೆ.

ಕಲ್ಲಾಸರೆ - ಒಂದು

ಈ ಶಿಲಾಶ್ರಯವು ಗ್ರಾಮದಿಂದ ಪೂರ್ವಕ್ಕೆ ಸು.೨ ಕಿ.ಮೀ. ದೂರದ ಬಾಗಾರ ಮರಡಿ ಎಂಬ ಗುಡ್ಡಪ್ರದೇಶದಲ್ಲಿ ಕಂಡುಬರುತ್ತದೆ. ಮನುಷ್ಯ ಚಿತ್ರ ೬೧ ಸೆಂ.ಮೀ. ಎತ್ತರ. ೪೪ ಸೆಂ.ಮೀ. ಅಗಲವಿದ್ದು, ಕಂದುಗೆಂಪು ಬಣ್ಣದಿಂದ ದಪ್ಪರೇಖೆಗಳಿಂದ ರಚಿತವಾಗಿದೆ. ತನ್ನ ಎರಡು ಕೈಗಳಲ್ಲಿ ಮೂರು ಬೆರಳಿನಂತೆ ಇದ್ದು, ಮೇಲಕ್ಕೆ ಎತ್ತಿ ತೋರುತ್ತವೆ. ತಲೆ, ಕೈ, ದೇಹ, ಕಾಲು, ಶಿಶ್ನ ಇವುಗಳು ಈ ಚಿತ್ರದಲ್ಲಿ ಭಾಗಗಳಾಗಿ ರಚಿಸಲಾಗಿದೆ. ದೇಹ. ತ್ರಿಕೋನಾಕಾರದಲ್ಲಿದೆ. ತಲೆ ಚೌಕಾಕಾರದಲ್ಲಿದ್ದು, ಕಾಲುಗಳು ಸಣ್ಣ ಗೆರೆಗಳಂತೆ ರಚಿತವಾಗಿವೆ. ಕೈಗಳನ್ನು ಭುಜದ ಸಮಾನದಲ್ಲಿ ಎರಡು ಕಡೆಗೆ ಬಾಗಿಸಿ ಮೋಣಕೈಯಿಂದ ಉಳಿದ ಭಾಗ ಮೇಲಕ್ಕೆತ್ತಿವೆ. ಮೊಣಕಾಲು ಮಧ್ಯದಲ್ಲಿ ಶಿಶ್ನದಂತೆ ಇಳಿಬಿಟ್ಟ ಸಣ್ಣ ರೇಖೆಯಿದೆ. ಈ ಚಿತ್ರವು ನಾಲ್ಕೈದು ಸರಳವಾದ ರೇಖೆಗಳನ್ನು ಬಳಸಿ ಹೊಸತನದಿಂದ ಕ್ರಿಯಾಶಕ್ತಿಯಿಂದ ಹೊರಹಾಕಿದ ಚಿತ್ರವಿರಬಹುದು.

* * *

ಅಧ್ಯಾಯ - ಆರು

ಕೊಪ್ಪಳ ಜಿಲ್ಲೆಯ ಪ್ರಾಗ್ರೈತಿಹಾಸಿಕ ಚಿತ್ರಗಳ ಪ್ರಮುಖ ಲಕ್ಷಣಗಳು, ಪ್ರಭಾವ, ತಂತ್ರ, ಮತ್ತು ಶೈಲಿ

ಅಧ್ಯಾಯ – ಆರು
ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ಪ್ರಮುಖ ಲಕ್ಷಣಗಳು, ಪ್ರಭಾವ, ತಂತ್ರ, ಮತ್ತು ಶೈಲಿ

ಲಕ್ಷಣಗಳು

ಈ ಜಿಲ್ಲೆಯ ಕೆಲ ಪ್ರದೇಶದಲ್ಲಿ ಕಣ ಶಿಲೆಯಿಂದ ಕೂಡಿದ ಕಲ್ಲುಗುಂಡುಗಳ ಬೆಟ್ಟ ಸಾಲುಗಳು ಶಿಲಾಶ್ರಯ, ಗವಿ, ಪೊದೆಗಳಂತಹ ಕಲ್ಲುಬಂಡೆಗಳ ಮೇಲ್ಮೈ ಮೇಲೆ ಕಂಡುಬಂದಿವೆ. ಸಹಜವಾಗಿ ಸೂರ್ಯನ ಬೆಳಕು ಗವಿ, ಪೊದೆಗಳಂತೆ ಸ್ಥಳಗಳ ನೆಲೆಗಳಲ್ಲಿ ಕಡಿಮೆಯಾಗಿರುತ್ತದೆ.. ಶಿಲಾಶ್ರಯಗಳಂತಹ ಪ್ರದೇಶಗಳಲ್ಲಿ ಕೂಡ ಮಳೆನೀರು, ಬೆಳಕು, ಚಳಿ ಮತ್ತು ಗಾಳಿಗಳಂತಹ ಪರಿಸರದ ಅತಿವೃಷ್ಟಿಯಿಂದಾಗುವ ಪರಿಣಾಮಗಳನ್ನು ರಕ್ಷಣೆ ಪಡೆಯುವ ಸ್ಥಳಗಳಲ್ಲಿ ವರ್ಣಚಿತ್ರಗಳು ರಚಿತವಾಗಿರುವುದು ಮುಖ್ಯವಾಗಿ ಕಾಣುತ್ತದೆ. ಜನರುಬೀಡ ಪ್ರದೇಶಗಳಿಂದ ದೂರವಾದ ಮತ್ತು ಹತ್ತಿರ ತಲುಪಲು ಕಷ್ಟಕರವಾದ ಸ್ಥಳಗಳಲ್ಲಿ ಇವು ಕಂಡುಬಂದಿವೆ. ಶಿಲಾಶ್ರಯ, ಗವಿಗಳಂತಹ ಜಾಗಗಳಲ್ಲಿ ಮಲಗಿಕೊಂಡು ಚಿತ್ರಿಸುವ ಹಾಗೂ ತುಂಬಾ ಎತ್ತರದ ಛಾವಣಿಯಂತಹ ಬಂಡೆಗಳ ಮೇಲ್ಮೈ ಮುಖಭಾಗದಲ್ಲಿ ಚಿತ್ರರಚಿಸಿರುವುದು ನೋಡಿದರೆ ಇಂದಿನ ದಿನಗಳಲ್ಲಿ ಕುತೂಹಲವೆನಿಸುತ್ತದೆ. ಕಡೆಬಾಗಿಲು. ವಿನಾ ಎರಡನೇ ಗವಿ ಕಲ್ಲಾಸರೆಯ ಸ್ಥಳವನ್ನು ಎರಡು ಕಡೆ ಬಾಗಿಕೊಂಡು ಹೋಗಿ ನಂತರ ಎರಡು ಗುಂಡಿನ ನಡುವೆ ಇಕ್ಕಟ್ಟಾದ ಸೊಂದಿನ ನಡುವೆ ನಡೆಯುವುದು, ಕೆಳಗಡೆ ಐವತ್ತು -ಅರವತ್ತು ಅಡಿಗಳಷ್ಟು ಆಳವಾದ ಎರಡು ದೊಡ್ಡಗುಂಡುಗಳ ಮಧ್ಯದ ಸ್ಥಳ ದಾಟುವುದು ಒಂದು ಸಾಹಸದ ಕೆಲಸವೇ ಸರಿ. ಮಲ್ಲಾಪುರದ ಕೆಲವು ಸ್ಥಳದ ನೆಲೆಗಳಿಗೆ ಹೋಗುವುದು, ಮಲಗಿ ತೆವಳಿಕೊಂಡು ಹೋಗುವುದರ ಮೂಲಕವೇ ಅಲ್ಲಿಗೆ ತಲುಪಲುಸಾಧ್ಯ. ಮತ್ತು ನಗ್ನಮನುಷ್ಯ ಇರುವ ಗವಿಯಂತಹ ಗುಂಡುಗಳ ಮೆಲೆ ಅತೀ ಎತ್ತರವಾದ ಭಾಗದಲ್ಲಿ ಚಿತ್ರ ರಚಿಸಲು ಯಾವ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು ಎನ್ನುವ ಚಿಂತೆ ಕಾಡದೇ ಇರುವುದು. ಇಲ್ಲಿ ಯಾವುದಾದರೊಂದು ಎತ್ತರವಾಗಿ ಕಟ್ಟಿಗೆಗಳನ್ನು ಹಗ್ಗರೂಪದ ನಾರು, ಬಳ್ಳಿಗಳನ್ನೊ

ಬಳಸಿಕೊಂಡು, ಅಟ್ಟಣಿಗೆಗಳನ್ನು ಬಳಸಿಕೊಂಡು, ಜೋಕಾಲಿಯಂತೆ, ನಾರು ಹಗ್ಗಗಳಿಂದ ಗುಡ್ಡದ ಅಕ್ಕ ಪಕ್ಕ ಸೊಂದುಗಳಲ್ಲಿ ಇಳಿಬಿಟ್ಟು ಅದರಲ್ಲಿ ಕುಳಿತುಕೊಂಡೊ ನಿಂತಿಕೊಂಡೊ ರಚಿಸಿರುವುದು ಎಂದು ಹೇಳಬಹುದು. ಇಲ್ಲಿನ ಸಾಮಾನ್ಯವಾಗಿ ಮನುಷ್ಯ, ಪ್ರಾಣಿ-ಪಕ್ಷಿ ಮತ್ತು ರಂಗೋಲಿಯಂತಹ, ಮಂಡಲಚಿತ್ರಗಳಂತಹ ರೇಖಾ ವಿಚಿತ್ರವಾದ ಚಿತ್ರಗಳು ರಚಿಸಲ್ಪಡುತ್ತವೆ. ಇವುಗಳಲ್ಲದೇ ಸಾಲು ಸಾಲು ಮಾನವಾಕೃತಿಗಳು, ಪ್ರಾಣಿಗಳು, ಜೋಡಿ ಮನುಷ್ಯರು ಚಿತ್ರಿಸಲಾಗಿದೆ. ಇಂತಹ ಚಿತ್ರಗಳನ್ನು ಹೆಚ್ಚಾನು ಹೆಚ್ಚು ಬಾಹ್ಯರೂಪದ ರೇಖೆಗಳಿಂದ ಮಾತ್ರ ತೋರಿಸಲಾಗಿರುತ್ತದೆ. ಕೆಲವು ಚಿತ್ರಗಳಲ್ಲಿ ಕಿವಿ, ಕಣ್ಣು, ಮೂಗು, ಬಾಯಿ ಮತ್ತು ಬೆರಳು, ಅಂಗೈ ಅಲ್ಲದೇ ಪಾದಗಳನ್ನೂ ತೋರಿಸುವುದು ರೂಡಿಯಲ್ಲದೆ. ಈ ಬಾಹ್ಯರೇಖೆಗಳ ಒಳ ಭಾಗಗಳಲ್ಲಿ ಕೆಲವು ಕಡೆ ವರ್ಣವನ್ನು ಲೇಪನ ಮಾಡಿರುವುದು, ಚಿತ್ರದ ಎಲ್ಲವನ್ನು ಒಂದೇ ತರದ ಬಣ್ಣದಿಂದ ಪೂರ್ಣಗೊಳಿಸಿ ಚಪ್ಪಟೆಯಂತೆ ತೋರಿಸಲಾಗಿದೆ. ಇದು ಒಂದು ರೀತಿಯಲ್ಲಿ ನೆರಳಿನ ರೂಪವಾಗಿ ಕಂಡುಬರುತ್ತವೆ. ಚಿತ್ರಿಸಿದ ಚಿತ್ರಗಳು ಒಂದು ನಿರ್ಧಿಷ್ಟ ಪ್ರಮಾಣ ಬದ್ಧತೆಯಿಂದ ಕೂಡಿರುವುದಿಲ್ಲ. ಆದರೆ ಕೆಲವು ಸಾಲುನಿಂತ ಚಿತ್ರಾಕೃತಿಗಳಂತಹ ಒಂಡೆರಡು ಚಿತ್ರಗಳಲ್ಲಿ ಕಾಣಬಹುದು. ಇಲ್ಲಿನ ಎಲ್ಲ ರಚಿತವಾದ ಚಿತ್ರಗಳ ಒಂದೇ ಕಾಲಮಾನಕ್ಕೆ ಸಂಬಂಧಿಸಿದಲ್ಲಾವಾದ್ದರಿಂದ ನಾನಾ ತರಹದ ಅಳತೆ. ಪ್ರಮಾಣದ ಆಕಾರದ ಚಿತ್ರಗಳ ನಿರ್ಮಾಣದಲ್ಲೂ ಅಲ್ಪ ಸ್ವಲ್ಪ ವ್ಯತ್ಯಾಸ ಇರುತ್ತದೆ. ಒಂದು ಭಾಗದಿಂದ ವ್ಯವಸ್ಥಿತವಾಗಿ ಚಿತ್ರಿಸಿ ಸ್ಥಳದ ಅವಾಕಾಶವನ್ನು ಬಳಸದೆ ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಅವರ ಮನಸ್ಸಿಗೆ ಬಂದ ಭಾಗದಲ್ಲಿ, ದಿಕ್ಕುಗಳಿಗೆ ಚಿತ್ರಗಳನ್ನು ರಚಿಸಿದಂತೆ ತೋರಿಸುತ್ತದೆ. ಇದರಿಂದ ಚಿತ್ರಗಳು ಚೆಲ್ಲಾಪಿಲ್ಲಿಯಾಗಿವೆ. ಎನ್ನಬಹುದು. ಹೆಚ್ಚಿನವು ಕಂದುಗೆಂಪು ವರ್ಣದಲ್ಲಿದ್ದು, ವರ್ಣದ ಲೇಪನವು ಕಾಲ ವೈಪರೀತ್ಯದಿಂದ ಮತ್ತು ದನಕಾಯುವರ, ಜೇನು ಬಿಡಿಸುವಂತಹ, ಕೆದುರುವುದು ಮೂಡಬಾರದಿಂದರೂ ಹಾಗೂ ಇನ್ನಿತರೆ ಕಾರಣಾಂತರದಿಂದ ಒಂದೇ ಸಮನಾಗಿ ತೋರುವುದಿಲ್ಲ. ಅಪರೂಪವಾಗಿ ಬಿಲಿ, ಹಳದಿ, ಮಿಶ್ರಿತ ಬಿಳಿ, ವರ್ಣಗಳಲ್ಲಿ ಕೆಲವು ಚಿತ್ರಗಳಿವೆ. ಇಂತಹ ವರ್ಣದ ಚಿತ್ರಗಳು ಮಧ್ಯಯುಗದ ಕಾಲದ ಚಿತ್ರಗಳು ಸುಣ, ಬಿಳಿವಿಭೂತಿಯಂತಹ ಬಿಳಿಯ ವರ್ಣದಲ್ಲಿವೆ. ಆನೆಗುಂದಿ, ಆಗೋಲಿ, ಚಿಕ್ಕರಾಂಪುರ, ಹೊಸಬಂಡಿ ಹರ್ಲಾಪುರಗಳಲ್ಲಿ ಇಂತಹ ಬಿಳಿ ಬಣ್ಣದ ಹೆಚ್ಚಿನ ಸಂಖ್ಯೆಯಲ್ಲಿರುವ ಚಿತ್ರಗಳು ಕಾಣುತ್ತೇವೆ.

ಕಂದುಗೆಂಪು ವರ್ಣವನ್ನು ಕೆಂಪುಮಣ್ಣಿನ ಗಟ್ಟಿಯನ್ನು ಇನ್ನಿತರೆ ಕೆಂಪುಬಣ್ಣದಂತಹ ರಸವನ್ನು ನೀಡುವ ಗಿಡಮೂಲಿಕೆ ಬಳಸಿಕೊಂಡಿರಬಹುದು. ಇದಲ್ಲದೆ ಮಿಶ್ರಣವನ್ನಾಗಿ ರಕ್ತವನ್ನೊ ಮತ್ತು ವನಸ್ಪತಿಯ ಎಣ್ಣೆಯಂತಹ ಜಿಡ್ಡು ಅಂಶವಿರುವ ರಸವನ್ನೊ ಸೇರಿಸಿ ತಯಾರಿಸಿರಬಹುದು. ಇದರಿಂದಲೇ ಮಳೆ, ಗಾಳಿ ಹೊಡೆತಕ್ಕೆ, ಬಿಸಿಲಿನ ಉಷ್ಣತೆಯ ತಾಪಮಾನ ಹೆಚ್ಚುಕಡಿಮೆ ಆಗುವುದರಿಂದ ಕೆಲವು ನೆಲೆಯ ಚಿತ್ರಗಳು ಸಿಕ್ಕರೂ ಪೂರ್ಣವಾಗಿ ಅಳಿಸದೆ, ತನ್ನ ಮೈವಳಿಕೆಯಿಂದ

ಉಳಿದುಕೊಂಡಿರುವುದು ಒಂದು ಸೋಜಿಗ ಸರಿ. ಬಣ್ಣದಲ್ಲಿ ರಕ್ತ ಮಿಶ್ರಣವಿದ್ದಲ್ಲಿ ಬಹುಮಟ್ಟಿಗೆ ಅದು ಹಂದಿಯದಾಗಿರಬೇಕೆಂಬ ಅಭಿಪ್ರಾಯವೂ ಇದೆ. ಏಕೆಂದರೆ ಇತರ ಪ್ರಾಣಿಗಳ ಮನುಷ್ಯರ ರಕ್ತವು ಬೇಗ ಗಟ್ಟಿಯಾಗುವಂತೆ ಇದು ಆಗುವುದಿಲ್ಲ.[೧೧] ಈ ರೀತಿಯ ಅಭಿಪ್ರಾಯಗಳು ಕೇಳಿಬಂದರೂ ಸಹಿತ ವೈಜ್ಞಾನಿಕವಾಗಿ ಬಣ್ಣವನ್ನು ರಾಸಾಯನಿಕ ಪರಿಕ್ಷೆಗಳಿಗೆ ಒಳಪಡಿಸಿದ ನಂತರವೇ ಆಧಾರವನ್ನಾಗಿಟ್ಟುಕೊಂಡು ಸತ್ಯಾಂಶವನ್ನು ಅರಿಯುವುದು ಒಂದು ಸೂಕ್ತ. ಚಿತ್ರಗಳನ್ನು ಯಾವುದಾದರು ನಾರು ಬರುವಂತ ಗಿಡದ ಸಣ್ಣ ರೇಖೆಯನ್ನು ತೆಗೆದುಕೊಂಡು ಆ ರೆಂಬೆಯ ತುದಿಯನ್ನು ನಾರು ತೇಲುವಂತೆ ಬಿಡಿಸಿ ಎಳೆಎಳೆಯಾಗಿ ಕುಚ್ಚನ್ನಾಗಿ ಮಾಡಿ ಅದನ್ನು ಕುಂಚದ ರೀತಿಯಲ್ಲಿ ಬಣ್ಣ ರೇಖೆಗಳನ್ನು ಸೂಕ್ಷ್ಮ ಮತ್ತು ದಪ್ಪವಾದಂತೆ ಬೇಕಾದ ಅಳತೆಯಲ್ಲಿ ಚಿತ್ರಗಳನ್ನು ಬಾಹ್ಯರೂಪವಾಗಿ ಬಳಸಿಕೊಂಡಿರಬಹುದು. ಬಿಲಿ ಬಣ್ಣದ ಚಿತ್ರಗಳಲ್ಲಿ ಈಚಿನ ಕಾಲದ ಬಿಳಿಬಣ್ಣದ ಚಿತ್ರಗಳಲ್ಲಿ ಬೆರಳಿನ ರೇಖೆಗಳೂ ಕೆಲವು ಚಿತ್ರಗಳಲ್ಲಿ ಮೂಡಿರುವುದು ಗೋಚರಿಸುತ್ತದೆ. ಇದರಿಂದ ಬೆರಳುಗಳನ್ನು ಕುಂಚದಂತೆ ರೇಖೆಗಳಲ್ಲಿ ಚಿತ್ರಿಸಿರುವುದು, ತಿಳಿಯಬಹುದು.

ಬಂಡೆಗಳಲ್ಲುಗಳ ಆಸರೆಯ ಭಾಗವನ್ನು ಅಂದರೆ ಗೋಡೆಯಂಚೆ ಇರುವ ಭಾಗದಲ್ಲಿ ಯಾವುದೇ ರೀತಿಯ ತಯಾರಿಗೊಳಿಸದೆ ಒರಟು ಬಂಡೆಯ ಮೇಲ್ಭಾಗದಲ್ಲಿ ಚಿತ್ರಗಳನ್ನು ರಚಿಸಿದ್ದು, ಇದನ್ನೇ ಮುಂದುವರೆಸಿದ್ದು ಕಾಲಕಾಲಕ್ಕೆ ಅನುಸರಿಸಿರಬಹುದಾಗಿದೆ. ಮುಂದಿನ ದಿನಗಳಲ್ಲಿ ಅಂದರೆ ಸ್ವಲ್ಪ ಹಳದಿ ಮಿಶ್ರಿತ ಬಿಳಿಬಣ್ಣವನ್ನು ಲೇಪಿಸಿ ಅದರ ಮೇಲೆ ಕೆಂಪು, ಕೆಮ್ಮಣ್ಣಿನ ವರ್ಣದಲ್ಲಿ ಚಿತ್ರಗಳನ್ನು ಬಿಡಿಸಿದ್ದು, ತಿಮ್ಮಲಾಪುರ, ಆನೆಗುಂದಿ, ಆಗೋಲಿಯಲ್ಲಿ ಕಂಡುಬರುತ್ತವೆ.

ಗವಿಗಳು

ಕೊಪ್ಪಳ ಜಿಲ್ಲೆಯ ಚಿತ್ರಗಳ ಗವಿಗಳು ಕಲ್ಲಾಸರೆಯಂತೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಆನೆಗುಂದಿ ೭, ಆಗೋಲಿ ೩, ಚಿಕ್ಕರಾಂಪುರ (೧), ಮಲ್ಲಾಪುರ (೩,೬,೮) ಮತ್ತು ಕಡೆಬಾಗಿಲು (೨) ಹಾಗೂ ಹಿರೇಬೆಣಕಲ್ (೯,೧೨, ೧೭)ಗಳಲ್ಲಿ ಮಾತ್ರ ಕೆಲವು ಗವಿಗಳಿವೆ. ಈ ಗವಿಗಳಲ್ಲೆ ಗಾತ್ರದ ದೃಷ್ಟಿಯಿಂದ ಸಣ್ಣ ಮತ್ತು ದೊಡ್ಡ ಪ್ರಮಾಣದಲ್ಲಿ ಕಾಣುತ್ತವೆ. ಯಾಕೆಂದರೆ ಚಿತ್ರಿತ ನೆಲೆಯ ಗವಿಗಳು ನೈಸರ್ಗಿಕವಾಗಿದ್ದ ಕಾರಣ ಒಂದೇ ಪ್ರಮಾಣದಲ್ಲಿರಲು ಸಾಧ್ಯವಿಲ್ಲ ಎನ್ನಬಹುದು. ಮಲ್ಲಾಪುರದ ೩ ನೇ ಗವಿ (ಖಾನಾಸಾಬ)ಬೃಹತ್ ಪ್ರಮಾಣದಲ್ಲಿದೆ. ಇಡೀ ಗವಿಗೆ ಒಂದು ವಿಶಾಲವಾದ ಛಾವಣಿ ಬಂಡೆ ಇದ್ದು, ಒಳಭಾಗದಲ್ಲಿ ನುಣುಪಾಗಿದೆ. ಆ ಬಂಡೆಗೆ ಅನುಗುಣವಾಗಿ ಅದರ ಮೇಲೆ ಚಿತ್ರಗಳನ್ನು ರಚಿಸಲಾಗಿದೆ, ೬ ನೇ ಮತ್ತು ೮ ನೇ ಗವಿಗಳು ಬೃಹತ್ ಬಂಡೆಗಳು ಸೀಳಿ ಮಧ್ಯದಲ್ಲಿ ಉಂಟಾಗಿದ್ದು, ಇವುಗಳು ಕ್ರಮವಾಗಿ ೭ ಮತ್ತು ೫ ಮೀಟರ್ ಉದ್ದವಾಗಿವೆ.

---

೧೧. ಸುಂದರ ಅ.(ಸಂ), ೧೧೯೭, ಪೂರ್ವೋಕ್ತ

೬ ನೇ ಗವಿಯ ಎಡಗೋಡೆಯ ಹೊರಭಾಗದಲ್ಲಿ ಚಿತ್ರಗಳು ರಚನೆಯಾಗಿದ್ದು, ಆ ಭಾಗ ಹೊರಗೆ ಎದ್ದು ಕಾಣುವುದರ ಜೊತೆಗೆ ಸೂಕ್ತ ರಕ್ಷಿತ ಭಾಗವಾಗಿದೆ. ಲನೇಯ ಗುಹೆಯು ಅರ್ಧವೃತ್ತಾಕಾರದಲ್ಲಿ ಟೊಳ್ಳಾದ ಗವಿ ಅದರ ಒಳಗೋಡೆಗಳು ಅತ್ಯಂತ ನುಣುಪಾಗಿದ್ದು, ಅಲ್ಲಿ ಚಿತ್ರಗಳಿವೆ.

ಚಿಕ್ಕರಾಂಪುರದ ಗವಿಯ ಬೃಹತ್ ಬಂಡೆಕಲ್ಲೊಂದರ ಕೆಳಭಾಗದಲ್ಲಿ ಉಂಟಾಗಿದೆ. ಈ ಗವಿಯ ಪ್ರಾರಂಭದಲ್ಲಿ ಛಾವಣಿ ಬಂಡೆಯ ಕೆಳಭಾಗ ತುಂಡಾಗಿ ಒಂದು ಸುಂದರವಾದ ಆಶ್ರಯ ಉಂಟಾಗಿದ್ದು. ಈ ಭಾಗದಲ್ಲಿ ಅಲ್ಲದೇ ಒಳಭಾಗದ ಗೋಡೆಯ ಮೇಲೆ ಚಿತ್ರಗಳನ್ನು ರಚಿಸಲಾಗಿದೆ. ಆಗೋಲಿಯ ಒಂದು ಗವಿಯು ಎರಡು ದೊಡ್ಡಗುಂಡುಗಳ ನಡುವೆ ಏರ್ಪಟ್ಟಿದೆ. ಇವು ಒಂದೊಕ್ಕೊಂದು ಜೋಲಿ ಹಿಡಿದು ನಿಂತು ಹಿಂದೆ ಬೆಟ್ಟವು ಅಡ್ಡವಾಗಿ ನಿಂತಂತೆ ಇದೆ. ಈ ಗವಿಯ ಇಳಿಜಾರಿನ ಬಂಡೆಯ ಮೇಲೆ ಚಿತ್ರಗಳಿವೆ.

ಹಿರೇಬೆಣಕಲ್ಲಿನ ೯ ಮತ್ತು ೧೭ ನೇ ಗವಿಗಳನ್ನು ಎರಡನೆಯ ಪ್ರಕಾರವೆಂದು ಕಾಣಬಹುದು. ಇವುಗಳಿಗೆ ದ್ವಿ ಬದಿ ಪ್ರವೇಶಗಳುಂಟು. ಇವುಗಳಲ್ಲಿ ೧೭ ನೇ ಗವಿ ಗಮನಾರ್ಹವಾಗಿದೆ. ಅಡ್ಡವಾಗಿರುವ ಬೃಹತ್ ಬಂಡೆಯ ಕೆಳಭಾಗದಲ್ಲಿ ಈ ಬೃಹತ್ ಗವಿ ನಿರ್ಮಾಣವಾಗಿದೆ. ಛಾವಣಿ ತಕ್ಕಮಟ್ಟಿಗೆ ನುಣುಪಾಗಿದೆ. ಇಲ್ಲಿ ಎರಡು ಚಿತ್ರಗಳು ಉದ್ದವಾಗಿದ್ದು, ಗವಿಗೆ ತಕ್ಕ ಪ್ರಮಾಣದಲ್ಲಿವೆ.[೨] ಈ ಗವಿಯು ಎತ್ತರವಾಗಿ ಕಾಣದೇ ಇಲ್ಲಿ ಒಳಗೆ ಹೆಚ್ಚಿನ ಜಾಗವನ್ನು ದೊಡ್ಡ ಅಂಗಳವನ್ನು ನೋಡಬಹುದು, ಇಲ್ಲಿನ ಚಿತ್ರಗಳು ಹೆಚ್ಚಿಗೆ ಇದ್ದು, ವಿಶಿಷ್ಟತೆಯಿಂದ ಕೂಡಿವೆ.

ಶಿಲಾಶ್ರಯಗಳನ್ನು ನಾವು ಕಂಡರೂ ಅವುಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಈ ಪರಿಸರದಲ್ಲಿ ಕಾಣುತ್ತೇವೆ. ಇಲ್ಲಿನ ಚರಿತ್ರಿತ ನೆಲೆಗಳಲ್ಲಿ ಗವಿಗಳಿಗಿಂಚ ಶಿಲಾಶ್ರಯಗಳು ಹೆಚ್ಚಾಗಿ ತೋರಿ ಬರುತ್ತವೆ. ಶಿಲಾಶ್ರಯಗಳಲ್ಲಿ ಹೆಚ್ಚಾಗಿ ತೋರಿ ಬರುತ್ತವೆ, ಶಿಲಾಶ್ರಯಗಳಲ್ಲಿ ಕೆಲವು ಬದಲಾದ ಅಶಗಳಿಂದ ಅದರ ಗುಣಲಕ್ಷಣಗಳ ಕುರಿತು ತೋರಿಸಲಾಗಿದೆ.

ಮುಂಚಾಚಿದ ತಲೆಬಂಡೆ

ಕೆಳಗೆ ಬೃಹತ್ತಾಕಾರದ ಗುಂಡು ಅಥವಾ ಕಲ್ಲುಬಂಡೆಯಿದ್ದು, ಅವರ ತಲೆಯ ಭಾಗಕ್ಕೆ ಕೆಳಗಿನ ಬಂಡೆಯಿಂದ ಸ್ವಲ್ಪಮುಂದೆ ಚಾಚಿಕೊಂಡು ಇನ್ನೊಂದು ಬಂಡೆ ಇರುತ್ತದೆ. ಮುಂದೆ ಚಾಚಿದ ಬಂಡೆಯ ಛಾವಣಿಯಲ್ಲಾಗಲಿ ಇಲ್ಲವೇ ಮುಂಚಾಚಿದ ಬಂಡೆಯ ಆಶ್ರಯ ಪಡೆದು ಕೆಳಗಿನ ಕಲ್ಲಿನ ಮುಖಭಾಗದಲ್ಲಿ ಚಿತ್ರಗಳಿರುತ್ತವೆ. ಹೀರೇಬೇಣಕಲ್ಲಿನ ೨ ನೆಯ ಶಿಲಾಶ್ರಯವು ಈ ಪ್ರಕಾರದಲ್ಲಿ ಒಂದು ಅಪರೂಪವಾದ ಕಲ್ಲಾಸರೆ ಒಂದು ಹೇಳಬಹುದು. ಒಂದೇ ಬೃಹತ್ ಬಂಡೆ. ಒಂದರಲ್ಲಿ ಮೇಲಿನ ಸು.೨ ಮೀ. ಭಾಗ ಆಸರೆಯಾಗಿ ಉಳಿದಂತೆ ಸು.೧೦ ಮೀ ಭಾಗ

---

೦೨. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೮೩

ಒಲಸರಿದ ಚಿತ್ರ ಫಲಕವಾಗಿದೆ. ಇದು ಸು.೧೩ ಮೀ ಅಗಲ ಮತ್ತು ೧೦ ಮೀ ಎತ್ತರವಾಗಿದೆ.[೩] ಈ ಶಿಲಾಶ್ರಯಗಳಲ್ಲಿ ಅತೀಎತ್ತರವಾದ ಶಿಲಾಶ್ರಯ ಎಂದು ಹೇಳಿಕೊಳ್ಳಬಹುದು. ಇಲ್ಲಿನ ಚಿತ್ರಗಳು ದೊಡ್ಡ ಪ್ರಮಾಣವಾಗಿ ಬಂಡೆಯ ಆಶ್ರಯಕ್ಕೆ ತಕ್ಕಂತೆ ರಚಿತವಾಗಿವೆ.

ಸೀಳು ಬಂಡೆ ಆಸರೆ

ಈ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೀಳುಬಂಡೆಯ ಆಸರೆಗಳು ಅಧಿಕವಾಗಿವೆ. ದೊಡ್ಡ ದೊಡ್ಡ ಗುಂಡುಗಳು ಸೀಳಿ ಆಸರೆಗಳು ರಚಿತವಾದರೆ ಶಿಲಾಶ್ರಯವು ದೊಡ್ಡ ಪ್ರಮಾಣದ್ದಾಗಿರುತ್ತದೆ. ಮಧ್ಯಮಗಾತ್ರದ ಕಲ್ಲುಗುಂಡುಗಳು ಸೀಳಿ ಎರಡು ಭಾಗಿದ್ದರೆ, ಸಣ್ಣ ಗಾತ್ರದ ಆಸರೆಯುಂಟಾಗುತ್ತದೆ. ಇದೇ ಗುಂಡುಗಳು ಕೆಲವೊಮ್ಮೆ ಕೊನೆಯ ಅಂಚಿನಲ್ಲಿ ಒಂದು ಭಾಗ ಸೀಳಿ ತುಂಡಾಗಿ ಕೆಳಬಿದ್ದು ಆಸರೆ ಉಂಟಾಗಿರುತ್ತದೆ. ಆಸರೆಯಾದ ಗೋಡೆಯಂತೆ ಭಾಗದಲ್ಲಿ ಚಿತ್ರಗಳು ರಚನೆಯಾಗಿರುತ್ತವೆ. ಇದಕ್ಕೆ ಉದಾಹರಣೆಗೆ ಗಡ್ಡಿ (೪), ಆಗೋಲಿ (೫) ಹಿರೇಬೆಣಕಲ್ (೧)ಗಳ ನೆಲೆಗಳ ಆಸರೆಗಳನ್ನು ಹೋರಿಕೆಯಾಗಿ ನೀಡಬಹುದು.

ವಾರೆ ಸವಕಳಿ ಬಂಡೆ ಆಸರೆ

ಇಂತಹ ವಾರೆ ಸವಕಳಿ ಬಂಡೆ ಆಸರೆಗಳು ಏಕವಾಗಿ ನಿಂತು, ಕಲ್ಲುಗುಂಡು ಅಥವಾ ಸ್ವತಂತ್ರವಾಗಿರು ಬೃಹತ್ ಬಂಡೆಗಳು ಇಂತಹ ಗುಂಡುಗಳ ಕೊನೆಯಲ್ಲಿ ಒಂದೆರೆಡು ಮೀಟರ್‌ನಷ್ಟು ಹೊರತು ಪಡಿಸಿ ಇನ್ನುಳಿದ ಭಾಗವು ಮೇಲಿನಿಂದ ಕೆಳಕ್ಕೆ ವಾರೆಯಾಗಿ ಸವೆದಂತೆ ತೋರುತ್ತವೆ. ಈ ವಾರೆ ಸವೆದ ಭಾಗವು ನುಣುಪಾಗಿದ್ದರೂ ಚಿತ್ರಗಳಿಗೆ ಹೆಚ್ಚು ರಕ್ಷಣೆಯಾದ ಸ್ಥಳವಲ್ಲ ಇದೇ ರೀತಯ ಕಲ್ಲಾಸರೆಗಳು ಹೊಸ ಬಂಡಿಹರ್ಲಾಪುರ(೫), ತೆಂಬಾ(೬), ಮತ್ತು ಹಂಪನದುರ್ಗ-೨ ಇಲ್ಲಿನ ರೇಖಾಚಿತ್ರಗಳು ವಿಶಿಷ್ಟತೆಯಿಂದಿವೆ.

ಬೆಟ್ಟದ ಪೊಟರೆ ಅಥವಾ ಪೊದೆಯಂತ ಆಸರೆ

ಇವು ಏಕಶಿಲಾವಾಗಿ ಗುಡ್ಡದ ಪ್ರವೇಶ ಅಥವಾ ಬೆಟ್ಟದ ಮುಂದಿನ ಕೆಳಗೆ ಉಂಟಾಗುತ್ತವೆ. ಒಂದು ಗುಂಡಿನ ಭಾಗದಲ್ಲಿ ಅರ್ಧ ಅಥವಾ ಅರ್ಧಕ್ಕಿಂತ ಕಡಿಮೆ ತಗ್ಗುವುಂಟಾದಂತೆ ಕಂಡುಬರುತ್ತದೆ. ಇಂತಹ ಪೊಟರೆ ಅಥವಾ ಪೊದೆಯ ಒಳ ಮೇಲಿನ ಭಾಗಕ್ಕೆ ಚಿತ್ರಗಳಿರುತ್ತವೆ. ಇದಕ್ಕೆ ತಕ್ಕಂತೆ ತಿರುಮಲಾಪುರ(೧), ಆನೆಗುಂದಿ(೫), ಹೊಸಬಂಡಿಹರ್ಲಾಪುರ. ತಿಮ್ಮಲಾಪುರದಲ್ಲಿ ಬೇರೆ ಬೇರೆ ಕಾಲಕ್ಕೆ ಸಂಬಂಧಿಸಿದ ಚಿತ್ರಗಳು ರಚನೆಯಾಗಿರುವುದು ಕಂಡುಬರುತ್ತವೆ.

ಅರೆವೃತ್ತಾಕಾರದ ಅಥವಾ ಅರ್ಧಬಾಗಿದ ಬಂಡೆ

ಈ ಅರೆವೃತ್ತಾಕಾರವು ಗುಂಡೊಂದರ ಎರಡು ತುದಿಗಳು ನೆಲಕ್ಕೆ ತಾಗಿ ಮಧ್ಯಭಾಗದಲ್ಲಿ ಅರ್ಧವೃತ್ತಾಕಾರದಲ್ಲಿ ಮೇಲೆದ್ದಿರುತ್ತದೆ. ಇದರ ಒಳ ಮುಖದಲ್ಲಿ ಚಿತ್ರಗಳನ್ನು ಬಿಡಿಸಲಾಗಿರುತ್ತದೆ.

---

೦೩. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೮೩

ಇವುಗಳನ್ನು ಕೊಪ್ಪಳ(೨), ಬಿಳಿಭಾವಿ(೧), ಹಿರೇಬೆಣಕಲ್(೮,೧೩)ಗಳಲ್ಲಿವೆ. ಬಿಳಿಭಾವಿಯಲ್ಲಿನ ಆಸರೆಯಲ್ಲಿ ಹೆಚ್ಚು ಚಿತ್ರಗಳಿವೆ. ಇದಕ್ಕೆ ಹೋಲಿಕೆ ಮಾಡಿದರೆ ಹಿರೇಬೆಣಕಲ್‌ನ ೮ ನೆಯ ಮತ್ತು ೧೩ ನೆಯ ನೆಲೆಯಲ್ಲಿ ಕಡಿಮೆ ಎನ್ನಬಹುದು. ಈ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ ಸಹಿತ ಇಲ್ಲಿ ಮುಖ್ಯವಾಗಿ ಆಶ್ರಯಗಳಲ್ಲಿ ಎರಡು ಭಾಗಗಳಲ್ಲಿ ಕಾಣುತ್ತೇವೆ. ಗವಿ ಮತ್ತು ಶಿಲಾಶ್ರಯ (ಕಲ್ಲಾಸರೆ) ಎಂಬುವ ವ್ಯತ್ಯಾಸ ಹೆಚ್ಚಾಗಿ ರೂಡಿಯಲ್ಲಿದೆ.

ಪ್ರಭಾವ

ಆದಿ ಮನುಷ್ಯನ ತನ್ನ ಕಾಡು ಪ್ರದೇಶದಲ್ಲಿ ಜೀವಿಸಲು ತನ್ನ ಹಸಿವೆಯನ್ನು ನೀಗಿಸಿಕೊಳ್ಳಲು ನೀರು, ಗಡ್ಡೆ-ಗೆಣಸುಗಳನ್ನು ಆಹಾರವಾಗಿಸಿಕೊಂಡು ನಂತರದಲ್ಲಿ ಕಾಡುಕಿಚ್ಚುಗಳಿಂದ ಪ್ರಾಣಿ ಪಕ್ಷಿಗಳು ಸುಟ್ಟು ಹೋದಂತವುಗಳನ್ನು ಹಸಿಯ ಮಾಂಸವನ್ನು ತಿನ್ನುವ ರುಚಿಯನ್ನು ಕಂಡಿರಬಹುದು, ಇದರಿಂದ ತನ್ನ ರುಚಿಯಾದ ಆಹಾರವಾದ ಮಾಂಸಕ್ಕಾಗಿ ಪ್ರಾಣಿ ಪಕ್ಷಿಗಳ ಭೇಟೆಗೆ ಮುಂದಾದ ಸಂದರ್ಭದಲ್ಲಿ ಕ್ರೂರ ಪ್ರಾಣಿಗಳು ಎದುರಾಗಿ ಭಯಗೊಂಡು ಅಥವಾ ಅಘಾತಕ್ಕೊಳಗಾಗಿ ಅಂದಿನಿಂದ ಕ್ರೂರ ಪ್ರಾಣಿಗಳು ಯಾವ ಪ್ರದೇಶ, ಎಂತಹ ಸ್ಥಳಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಎಂದು ಅದೇ ಪ್ರದೇಶಗಳಲ್ಲಿ ತನಗೆ ಸಿಕ್ಕ ವರ್ಣಯುತ ವಸ್ತುಗಳಿಂದ ಸಂಬಂಧಿಸಿದ ಕ್ರೂರ ಪ್ರಾಣಿಗಳ ರೇಖೆಯ ಸ್ವರೂಪವಾಗಿ ರಚಿಸಿ, ಬೇಟೆಗೆ ಹೋದ ಜನರಿಗೆ ಮುನ್ನೆಚ್ಚರಿಕೆಯ ದೃಷ್ಟಿಯಲ್ಲಿ ನೋಡಿದಾಗ ಅಂತಹ ಪ್ರಾಣಿಗಳಿಂದ ದೂರಸರಿಯಲು ಅಥವಾ ಎಚ್ಚರ ವಹಿಸಲು ಇಂತಹ ಕ್ರೂರ ಪ್ರಾಣಿಗಳ ಚಿತ್ರವನ್ನು ರಚಿಸುವುದಕ್ಕೆ ಅಂತಹ ಘಟನೆಗಳು ನಡೆದು ಪ್ರಭಾವವಾಗಿರಬಹುದು. ಮತ್ತು ತಮ್ಮ ಭೇಟೆಗೆ ಸೂಕ್ತವಾದ ಕ್ರೂರವಲ್ಲದ ಪ್ರಾಣಿಗಳು ಹೆಚ್ಚಾಗಿ ಎಲ್ಲಿ ಸಿಗುತ್ತವೆ ಎಂಬುದರರ್ಥವಾಗಿ ಇನ್ನುಳಿದ ಪ್ರಾಣಿಗಳ ಚಿತ್ರಗಳು ರಚಿಸಿರಬಹುದು.

ಇದರಂತೆ ಕಾಲಕ್ಕೆ ಅನುಗುಣವಾಗಿ ಪ್ರಾಣಿ-ಪಕ್ಷಿ, ಮನುಷ್ಯರು, ಮಂಡಲ ರೇಖಾ ಚಿತ್ರಗಳು ಮುಂದುವರೆಸಿಕೊಂಡು ಬಂದಿರಬಹುದಾಗಿದೆ. ಒಬ್ಬರಿಂದ ಇನ್ನೊಬ್ಬರು ಪ್ರಭಾವಗೊಂಡು ಚಿತ್ರಗಳು ಅವರ ಪ್ರಕಾರವಾಗಿ ಎಂತಹ ನೆಲೆಗಳಲ್ಲಿ ರಚಿಸಿದರೆ ಸೂಕ್ತ. ಮತ್ತು ಪರಿಸರದ ಅತೀವೃಷ್ಟಿಯಿಂದ ನಾಶವಾಗದೆ ಉಳಿಲಿಕ್ಕೆ ಒಂದು ಸೂಕ್ತವಾದ ಚಿಂತನೆಯು ಮನಮಾಡಿರಬಹುದು.

ತಂತ್ರಗಾರಿಕೆ

ಈ ಆದಿಮಾನವರು ತಮ್ಮ ತಮ್ಮ ಚಿತ್ರಗಳಲ್ಲಿ ತಮಗೆ ಸೂಕ್ತವಾದ ರೀತಿಯ ಚಿತ್ರಗಳನ್ನಾಗಿಸಲು ಕೆಂಪು ವರ್ಣಗಳಲ್ಲಿ ಕಡ್ಡಿಗಳಿಂದ ಚಿತ್ರಿಸುವುದು. ಒಂದೇ ಸಮಾನತೆಯಿಂದ ಕೂಡಿರುವ ಮನುಷ್ಯ, ಪ್ರಾಣಿಗಳ ಚಿತ್ರಗಳನ್ನು ಪಡೆಯಚ್ಚುಗಳಂತೆ ನಿಸರ್ಗದ ಎಳೆ, ಪ್ರಾಣಿಗಳ ತೊಗಲುಗಳಲ್ಲಿ ಬೇಕಾದ ಆಕಾರವನ್ನು ಮಾಡಿ ಅದರಿಂದ ಬೇಕಾದ ನೆಲೆಗಳಲ್ಲಿ ಸಾಲಾಗಿ, ಗುಂಪಾಗಿ ಒಂದೇ ತೆರನಾದ ಚಿತ್ರಗಳನ್ನು ರಚಿಸುವ ತಂತ್ರಗಾರಿಕೆ ಕೆಲವು ಚಿತ್ರಗಳಲ್ಲಿ ಬಳಸಿಕೊಂಡಿರುವುದು ತಿಳಿದುಬರುತ್ತದೆ.

ಅಂತಹ ಚಿತ್ರಗಳಲ್ಲಿ ಕಡೆಬಾಗಿಲು, ಹಿರೇಬೆಣಕಲ್, ಮುಂತಾದವುಗಳಲ್ಲಿ ಕಂಡುಬಂದಿವೆ. ಕಡೆಬಾಗಿಲಿನಲ್ಲಿ ಒಂದೇ ಸಮನಾಗಿ ತಂಡಗಳ ೧೩ ಮತ್ತು ೧೦ ಜನರ ಹೆಣ್ಣುಮಕ್ಕಳು ಸಾಲಾಗಿ ಒಂದು ನೇರ ರೇಖೆಯ ಮೇಲೆ ನಿಂತಿರುವುದು ಉದಾಹರಣೆಯಾಗಿ ನೋಡಬಹುದು. ಇದೇ ರೀತಿ ಹಿರೇಬೆಣಕಲ್ ೧೧ನೇಯ ಗವಿಯಲ್ಲಿ ಹಾಗೂ ಹೊಸಬಂಡಿ ಹರ್ಲಾಪುರದ ೧ ನೇಯ ಶಿಲಾಶ್ರಯ ಕವಲುಕೊಂಬಿನ ಜಿಂಕೆಗಳ ಸಾಲು ಚಿತ್ರಗಳು.

ಹಿರೇಬೆಣಕಲ್ ನಲ್ಲಿರುವ ಶಿಲಾಶ್ರಯ ೧ ರಲ್ಲಿ ಸೂಕ್ಷ್ಮವಾದ ಕುಂಚಗಳನ್ನು ಕಡ್ಡಿಯನ್ನು ಮುಂದಿನ ಭಾಗ ಜಜ್ಜಿ ನಾರುಬರುವಂತೆ ಮಾಡಿದವು ಅಥವಾ ಪ್ರಾಣಿಗಳ ಕೂದಲುಗಳನ್ನು ಬಳಸಿಕೊಂಡು ಅತಿ ಚಿಕ್ಕ ಚಿಕ್ಕ ರೇಖೆಗಳ ಮೂಲಕವಾಗಿ ಕುದುರೆ ಬಾಲಗಳಲ್ಲಿ ಕೂದಲಿನಂತೆ ರೇಖೆಗಳನ್ನು ಎಳೆಯುವುದು ಇವುಗಳನ್ನು ಸುಂದರವಾಗಿ ನೈಜತೆಗೆ ತಕ್ಕಂತೆ ತೋರಿಸಲು ಕಡೆಬಾಗಿಲಿನ ಸಾಲು ಹೆಣ್ಣುಮಕ್ಕಳ ತಲೆಯ ಮೇಲಿನ ಕೂದಲುಗಳನ್ನು ತಂತ್ರಗಾರಿಕೆಯ ಕ್ರಿಯಾಶೀಲತೆಯಿಂದ ಕೂಡಿದೆ. ನವಿಲುಗಳಲ್ಲಿನ ಸೂಕ್ಷ್ಮವಾದ ಕೂದಲಿನಂತಹ ಗರಿಗಳ, ತಲೆಯ ಜುಟ್ಟುಗಳಂತಹ ಸಣ್ಣ ಹಾಗೂ ನಯವಾದ ತ್ವಚೆಯಂತೆ ಚಿತ್ರದ ಭಾಗಗಳು ಸೃಜನಾತ್ಮಕತೆಯಿಂದ ಕೂಡಿಕೊಂಡಿವೆ.

ಶೈಲಿ

ಈ ಪ್ರಾಗಿತಿಹಾಸ ಕಾಲದ ಚಿತ್ರಗಳು ಮೇಲಿನ ನೋಟಕ್ಕೆ ಮುಗ್ದತೆಯಂತೆ ಅಥವಾ ಚಿಕ್ಕಮಕ್ಕಳ ಚಿತ್ರಗಳಂತೆ ತೋರಿದರೂ, ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ರೇಖಾ ಚಿತ್ರಗಳೆಂದು ತಿಳಿಯುತ್ತದೆ. ಚಿತ್ರಗಳಲ್ಲಿ ಕೇವಲ ಆಕೃತಿಯಷ್ಟೇ ಮುಖ್ಯವಾಗಿಲ್ಲ. ಜೀವಂತಿಕೆ ಎದ್ದು ಕಾಣುತ್ತದೆ. ಮನುಷ್ಯ ಮತ್ತು ಪ್ರಾಣಿಯ ಏಕವಾದ ಚಿತ್ರಗಳಾಗಲಿ, ಬೇಟೆ, ಕುಣಿತ, ಸಂಭ್ರಮ ಮುಂತಾದ ದೃಶ್ಯ ಚಿತ್ರಗಳಾಗಲಿ ಅವುಗಳ ರಚನಾ ಉದ್ದೇಶ ಶಕ್ತಿಯುತವಾಗಿ ಚಿತ್ರಗಳಲ್ಲಿ ಬಿಂಬಿತವಾಗಿದೆ.[೪] ಚಿತ್ರಗಳಲ್ಲಿ ಯಾವುದೇ ಸೂಕ್ಷ್ಮಭಾಗಗಳ ಬಗ್ಗೆ ಅತೀಯಾದ ಜವಾಬ್ದಾರಿವಹಿಸದೇ ಇದ್ದರೂ ಸಹಿತ ತನ್ನ ನಿರೂಪಣೆಯನ್ನು ವಿವರಿಸುವಲ್ಲಿ ಅರ್ಥಪೂರ್ಣವಾಗಿವೆ. ಚಿತ್ರಗಳಲ್ಲಿ ಬರುವಂತೆ ಮುಖ್ಯವಾದ ಕಣ್ಣು, ಕಿವಿ, ಮೂಗು, ಬಾಯಿ, ಹಸ್ತ, ಪಾದಗಳಂತಹ ಅಂಗಗಳ ರಚನೆ ಬಗ್ಗೆ ಹೆಚ್ಚುಗಮನ ಹರಿಸದೆ ಆದಿ ಕಲಾವಿದನ ಚಿತ್ರಗಳು ಭಾವ ಪ್ರಧಾನವಾಗಿವೆ. ಎಂದು ಹೇಳಿಕೊಳ್ಳಬಹುದು. ಬರಿ ಬಾಹ್ಯರೇಖೆ ಅಥವಾ ನೆರಳು ಮಹತ್ವವನ್ನು ಸಾರಿ ಹೇಳುತ್ತವೆ ಎನ್ನಬಹುದು. ಎಲ್ಲ ಚಿತ್ರಗಳು ಈ ದೃಷ್ಟಿಯಿಂದ ಉತ್ತಮ ಸ್ಥಾನದಲ್ಲಿ ನಿಲ್ಲುತ್ತವೆ. ಆದರೆ ಕೆಲವಂತೂ ರಚನಾ ಶೈಲಿಯ ದೃಷ್ಟಿಯಿಂದ ಉತ್ತಮ ರಚನೆಗಳೆಂದು ಹೇಳಲಾಗದು. ಕೊಪ್ಪಳ ಜಿಲ್ಲೆಯ ಚಿತ್ರಗಳ ಶೈಲಿಯನ್ನು ಈ ರೀತಿಯಲ್ಲಿ ವಿವೇಚಿಸಬಹುದಾಗಿದೆ.

---

೦೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೯೨

ಮನುಷ್ಯ ಚಿತ್ರಗಳು

ಹಲವಾರು ಏಕ ಮತ್ತು ಸಮೂಹದ ಮನುಷ್ಯ ಚಿತ್ರಗಳು ಕಂಡಿರುವುದು ನಾವು ಈಗಾಗಲೇ ನೋಡಿದ್ದೇವೆ. ಮನುಷ್ಯ ಚಿತ್ರಗಳಲ್ಲಿ ಕೆಲವು ಶೈಲಿಯ ದೃಷ್ಟಿಯಿಂದ ಸೃಜನಾತ್ಮಕ ಮತ್ತು ಕ್ರಿಯಾಶೀಲತೆಯನ್ನು ತುಂಬುವಲ್ಲಿ ಸಮರ್ಥವೆನಿಸುತ್ತವೆ ಎನ್ನಬಹುದು. ರಾಂಪುರದ (೧)ನೆಯ ಶಿಲಾಶ್ರಯದಲ್ಲಿ ನಿಂತ ಮನುಷ್ಯನ ಚಿತ್ರ ಒಂದು ಅಪೂರ್ವ ಸೃಷ್ಟಿ ಇದಲ್ಲದೆ ಗಡ್ಡಿಯಲ್ಲಿ ಏಳುಜನ ಮನುಷ್ಯರ ಚಿತ್ರಗಳು ಇತಂಹ ಸಾಲಿನಲ್ಲಿ ನಿಲ್ಲುತ್ತವೆನ್ನಬಹುದು. ರಾಂಪುರದಲ್ಲಿನ ಚಿತ್ರಗಳಲ್ಲಿ ದುರಾದೃಷ್ಟವಶಾತ್ ಇದರ ಕೆಳಭಾಗ ಮಳೆಗೆ ಸಿಲುಕಿ ಬಹಳಷ್ಟು ಅಳಸಿಹೋಗಿದೆ. ಚಿತ್ರವು ನೆರಳು ರೂಪದ್ದು ಆದಿ ಕಲಾಸೃಷ್ಟಿಕರ್ತನಿಗೆ ದೇಹದ ರಚನೆಯ ನೈಜ ಪರಿಕಲ್ಪನೆ ಇದೆ. ಭುಜದ ಪ್ರಮಾಣ ಅಗಲಕ್ಕೆ ತಕ್ಕಂತೆ ಸಣ್ಣದಾದ ಸೊಂಟ, ಅಗಲಕ್ಕೆ ಅಷ್ಟೇ ಸಹಜವಾದ ಪುಷ್ಠ ಎಲ್ಲವೂ ಪ್ರಮಾಣಬದ್ಧವೆನಿಸುತ್ತವೆ. ಬಲಗೈ ಭುಜದ ಸಮನಾಂತರದಲ್ಲಿ ಮುಂದೆ ಚಾಚಿದೆ. ಎಡಗೈ ಸ್ವಲ್ಪ ಕೆಳಕ್ಕಿಳಿಸಿ ಮೊಣಕೈಯಿಂದ ಉಳಿದ ಭಾಗವನ್ನು ಪಕ್ಕಕ್ಕೆ ಎತ್ತಿ ಹಿಡಿದಿದೆ. ತೋಳು ದಪ್ಪವಾಗಿದ್ದು, ಮೋಣಕೈವರೆಗೆ ಕಿರಿದಾಗಿ ಮುಂದೆ ಸಹಜವಾಗಿದೆ. ಹಸ್ತ ಮತ್ತು ಬೆರಳುಗಳು ಅತ್ಯಂತ ಸಹಜವಾಗಿವೆ. ಕೊರಳಲ್ಲಿ ಸರದಂತೆ ತ್ರಿಕೋನಗಳ ಬಳಸಿ ಆಭರಣಗಳು ಗಮನಾರ್ಹ, ಸರವನ್ನು ವಿಶೇಷತೆಯಿಂದ ಕೂಡಿದೆ. ಕಂಠ ಮತ್ತು ಎದೆ ಭಾಗವನ್ನು ಜೋಡಿಸದೇ ಖಾಲಿಬಿಟ್ಟು ಇವುಗಳನ್ನು ಬಾಹ್ಯರೂಪ ರೇಖೆಗಳಲ್ಲಿ ರಚಿಸಿದ್ದು, ಆಭರಣ ಸೌಂದರ್ಯದ ಅಲಂಕಣೆಯೂ ರೂಪ ಸಹಜವಾಗಿದೆ. ಇದಕ್ಕೆ ಪಾದಗಳಿದ್ದಾವೋ ಇಲ್ಲವೋ ತಿಳಿಯುವುದಿಲ್ಲ ಮುಖ ವಾನರಂತಿದ್ದು, ಇದೊಂದು ಅಪರೂಪದ ಚಿತ್ರವಾಗಿದೆ. ಇದೇ ರೀತಿಯ ಚಿತ್ರಗಳು ಆನೆಗುಂದಿ(೨) ಮತ್ತು ಗೂಗಿ ಬಂಡೆಯಲ್ಲಿದ್ದು, ಅವು ಕ್ರಮವಾಗಿ ನಶಿಸಿ, ಪುನರ್ ತಿದ್ದುವಿಕೆ, ಗೆರೆಗಳ ಮೇಲೆ ಮತ್ತೊಮ್ಮೆ ರೇಖೆಗಳನ್ನು ಎಳೆಯುವ ಕಾರ್ಯ ನಡೆದಿರಬಹುದು ಎನ್ನುವಂತಿದೆ. ಆನೆಗುಂದಿಯ ಪುರಾಣಗಳಿಂದ ಕಿಷ್ಕಿಂದೆಯ ಚಿತ್ರವನ್ನಾಗಿ ವಾನರನ್ನು ಹೋಲುವ ಚಿತ್ರಗಳನ್ನು ಗಮನಾರ್ಹವಾಗಿ ಕಾಣಬಹುದು.

ಸಂಗಾಪುರದ ಮೂರನೆಯ ಕಲ್ಲಾಸರೆಯಲ್ಲಿ ಪಶುವಿನ ಹಿಂದೆ ದನವನ್ನು ಓಡಿಸುವನಂತೆ ಒಬ್ಬ ಮನುಷ್ಯನ ಚಿತ್ರವಿದೆ. ಮುಂಡ ಪರಸ್ಪರ ಅಭಿಮುಖವಾಗಿ ಇರಿಸಿದ ದ್ವಿತ್ರೀಕೋನಕಾರ ಶೈಲಿಯಲ್ಲಿದೆ. ಈ ಚಿತ್ರದ ರಚನಕಾರ ನಿಖರವಾಗಿಲ್ಲ. ಕೈಕಾಲುಗಳು ಕೇವಲ ಸಾಂಕೇತಿಕವಾಗಿದ್ದು, ಈ ಚಿತ್ರ ಒಂದು ಕ್ರಿಯೆಯನ್ನು ಸ್ಪಷ್ಟವಾಗಿ ನಿದರ್ಶಿಸುತ್ತದೆ. ಇಲ್ಲಿ ವ್ಯಕ್ತಿ ಪಶುವನ್ನು ತೆಗೆದುಕೊಂಡು ಹೊರಟಿದ್ದು, ಅವನ ಚಿತ್ರ ಕೇವಲ ಆಕೃತಿಯಾಗದೇ ನಡಿಗೆಯ ಚಲಶೀಲತೆಯನ್ನು ಅಭಿವ್ಯಕ್ತಿಸುತ್ತದೆ. ನಡೆಯುವಾಗ ಮಂದಿನ ಕಾಲನ್ನು ಊರಿ ಹಿಂದಿನ ಕಾಲನ್ನು ಮೇಲಕ್ಕೆತ್ತಿರುವ ಭಂಗಿ ತುಂಬ ಸಹಜವಾಗಿದೆ. ದೇಹವು ಕೂಡ ಆ ಭಂಗಿಗೆ ಪೂರಕಾಗಿದೆ. ಕಟಿಯಿಂದ ಎದೆ, ಭುಜದ ಭಾಗ ಕೆಳ ದೇಹಕ್ಕಿಂತ ಸ್ವಲ್ಪ ಮುಂದಕ್ಕೆ ಬಾಗಿದಂತೆ ಚಿತ್ರಿತವಾಗಿದೆ. ಇಲ್ಲಿ ಚಿತ್ರಿತ ರಚನಾಕಾರನಿಗೆ

ಭಂಗಿಗಳ ಬಗೆಗೆ ಕಲ್ಪನೆಯಿದ್ದು, ಅದನ್ನು ಚಿತ್ರದಲ್ಲಿ ಮೂಡಿಸುವ ಪ್ರಯತ್ನ ಮಾಡಿದ್ದಾನೆ. ಎನ್ನಬಹುದು. ಇದರಂತೆ ತೆಂಬಾದ ೪ ನೇ ಕಲ್ಲಾಸರೆ ಮತ್ತು ಚಿಕ್ಕರಾಂಪುರದ ೧ನೆಯ ಗವಿಯ ಪಾಶುಪಾಲಕ ಮನುಷ್ಯ ಚಿತ್ರಗಳು ಚಲನಶೀಲ ಅಂಶದಿಂದ ಗಮನ ಸೆಳೆಯುತ್ತವೆ. ಅವನು ಓಡುವಂತೆಯಿದ್ದು, ಕೈಗಳು ನೋಟ, ದೇಹದ ರಚನೆಯಾದ ಸೇರಿ ಚಿತ್ರವು ಕ್ರಿಯೆಯಿಂದ ಚಲನೆಯನ್ನು ಹೊಂದಿದೆನ್ನಬಹುದು.

ಮನುಷ್ಯ ಚಿತ್ರಗಳಲ್ಲಿ ಪುರುಷ-ಸ್ತ್ರೀ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸುವಂತೆ ಆದಿಕಾಲದ ಚಿತ್ರ ರಚನೆಕಾರ ಯೋಚಿಸಿದ ರೀತಿ ಅಪೂರ್ವವಾಗಿದೆ. ಮಲ್ಲಾಪುರ, ಹಂಪಿ, ಹಿರೇಬೆಣಕಲ್, ಚಿಕ್ಕಬೆಣಕಲ್‌ಗಳ ಕೆಲವು ಗವಿ ಕಲ್ಲಾಸರೆಗಳಲ್ಲಿ ಮೈಮೇಲೆ ಗೆರೆಗಳನ್ನು ಹಾಕಿಕೊಂಡು ನಗ್ನವಾಗಿ ಕುಣಿಯುತ್ತಿರುವ ಮನುಷ್ಯ ಚಿತ್ರಗಳಿವೆ. ಇವುಗಳಲ್ಲಿ ಪುರುಷ ಹಾಗೂ ಸ್ತ್ರೀಯರಿದ್ದಾರೆ. ಸ್ತ್ರೀಪುರಷರನ್ನು ಸ್ಪಷ್ಟವಾಗಿ ಗುರುತಿಸಬಹುದಾದ ರೀತಿಯಲ್ಲಿ ದೇಹದ ರಚನೆ ಇದೆ. ಪುರುಷ ನಗ್ನವಾಗಿ ಕುಣಿಯುತ್ತಿದ್ದಾನೆ ಎಂದು ತೋರಿಸುವ ಕ್ರಮ ತುಂಬ ಸರಳ. ಎರಡೂ ಕೈಗಳನ್ನು ಮೇಲಕ್ಕೆತ್ತಿ, ಕಾಲುಗಳನ್ನು ಅಗಲಿಸಿದ ಭಂಗಿಯ ವ್ಯಕ್ತಿ ಚಿತ್ರದಲ್ಲಿ ಕಾಲುಗಳ ನಡುವೆ ಶಿಶ್ನವನ್ನು (ಸಾಂಕೇತಿಕ) ತೋರಿಸಿದರಾಯ್ತು.[೫] ಎದುರು ಮುಖ ಮನುಷ್ಯನ ಚಿತ್ರಗಳಲ್ಲಿ ತೊಡೆಗಳ ಮಧ್ಯವಾಗಿ ಒಂದು ಸಣ್ಣ ಗೆರೆಯನ್ನು ಎಳೆದರೆ ಅದು ಆ ರೂಪಕ್ಕೆ ಗಂಡು ಲಿಂಗದ ನಿಖರತೆಯನ್ನು ತೋರಿಸುತ್ತದೆ. ಆದರೆ ಸ್ತ್ರೀಯ ಚಿತ್ರದಲ್ಲಿ ಹೆಚ್ಚಾಗಿ ಎಡ ಅಥವಾ ಬಲ ಮುಖಮಾಡಿದ ದೇಹದಲ್ಲಿ ಉಬ್ಬುತಗ್ಗುಗಳಿಂದ ರೇಖೆಗಳನ್ನು ತೋರಿಸುವುದರಿಂದ ಲಿಂಗದ ನಿಖರತೆಯನ್ನು ಹೆಣ್ಣಿನಾಂಶವಾದ ಉಬ್ಬಾಗಿ ಸ್ತನಗಳಂತೆ, ಉದ್ದವಾದ ಕೂದಲಿನಂತೆ ಜಡೆ, ದೇಹದ ಗಾತ್ರದಲ್ಲಿ ತೆಳುಪು ತೋರಿಸುವುದರಿಂದ ತನ್ನ ಮೈವಳಿಕೆಗಳಿಂದ ಚಿತ್ರಶೈಲಿಯಲ್ಲಿ ಮಹತ್ವಪಡೆದುಕೊಳ್ಳುತ್ತವೆ.

ಗುಂಪಾದ ಚಿತ್ರಗಳಲ್ಲಿ ಪುರುಷನನ್ನು ತೋರಲಿಕ್ಕೆ ಕೈಗಳು ಗಡಸಾಗಿದ್ದು, ಕೊಡಲಿ, ಬಿಲ್ಲು ಬಾಣ, ಗುರಾಣಿಯಂತೆ ಸಾಧನಗಳನ್ನು ಚಿತ್ರಿಸಿತೋರಿಸುತ್ತಿದರಿಂದ ಆ ಚಿತ್ರಕ್ಕೆ ಜೀವಂತಿಕೆ ಬರುತ್ತದೆ. ಇದರಿಂದ ಚಿತ್ರದಲ್ಲಿರುವ ವಿವಿಧ ಚಿತ್ರಗಳ ಭಾವನೋಟಗಳು ಹೊರಚಾಚುವಂತೆ ಇಲ್ಲಿ ಮುತುವರ್ಜಿವಹಿಸಲಾಗಿದೆ. ಈ ಕೊಪ್ಪಳ ಜಿಲ್ಲೆಯ ಪ್ರದೇಶದಲ್ಲಿ ಇರುವ ವರ್ಣಚಿತ್ರಗಳು ಜೀವಂತಿಕೆಯಿಂದ ಕೂಡಿದವುಗಳಾಗಿವೆಯೇ ಇಲ್ಲೊ ಎಂಬುದಕ್ಕೆ ಚಿಕ್ಕರಾಂಪುರದಲ್ಲಿನ ಎತ್ತುಗಳು ತನ್ನ ದೂರ ನೋಟದ ಭಂಗಿಯಂತು ಒಂದು ಅದ್ಭುತವೇ ಸರಿ ಏಕೆಂದರೆ ದೇಹ , ಕಾಲುಗಳು, ಭುಜಡುಬ್ಬ (ಇಣಿ), ಬಾಲ, ಮುಖ, ಕೊಂಬುಗಳು ಪ್ರಮಾಣಬದ್ಧತೆಯನ್ನು ಸಾರಿಹೇಳುತ್ತವೆ. ಕೊಂಬುಗಳು ನೋಡುಗನ ಮುಂದೆ ಕಾಣುವ ಒಂದುಕೊಂಬು ಎತ್ತರವಾಗಿದ್ದು, ಆಕಡೆಯ ಕೊಂಬು ಸ್ವಲ್ಪ ಕಡಿಮೆ ಎತ್ತರವಾಗಿರುವುದು, ಯಥಾದರ್ಶನ ರೂಪವಾಗಿ ಅಳತೆಯಲ್ಲಿ ಉತ್ತಮವಾಗಿರುದಾಗಿ ಕಂಡುಬರುತ್ತದೆ. ಆ ಮತ್ತುಗಳ ಗುಂಪಿನ ಮೊದಲ ಎತ್ತು ಸ್ಪಷ್ಟವಾಗಿ

---

೦೫. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೯೨

ಕಾಣಿಸುತ್ತದೆ. ಇದರ ಹಿಂದಿನ ಎತ್ತುವು ಇದೆ ರೀತಿಯ ಕೊಂಬುಗಳು ಇರುವುದು ಅದರಲ್ಲಿ ಬಾಲವು ಸ್ವಲ್ಪ ಎತ್ತಿ ಇಳಿಬಿಟ್ಟದ್ದು, ಸೂಕ್ಷ್ಮವಾಗಿ ಗಮನಿಸಬೇಕಾದ ವಿಚಾರ. ಈ ಚಿತ್ರಗಳ ಗುಂಪಿನ ಮೇಲಿನ ನವಿಲುಗಳ ಗುಂಪು ಕಂಡುಬರುತ್ತದೆ. ಅದರಲ್ಲಿ ಮೇಲಿನ ಮೊದಲ ನವಿಲನ್ನು ಒಬ್ಬ ಮನುಷ್ಯ ತನ್ನ ಕೈಯಲ್ಲಿ ಆಯುದ ಹಿಡಿದು ಮುಂದಕ್ಕೆ ಚಾಚಿ ತನ್ನ ಎರಡು ಕಾಲುಗಳ ಸೊಂಟದಿಂದ ಮೊಣಕಾಲುಗಳವರೆಗೆ ಬಾಗಿಸಿ ಕಾಲುಗಳು ಅಗಲಿಸಿ ನಿಂತ ಭಂಗಿಯನ್ನು ಮುಖ್ಯವಾಗಿ ಗಮನಿಸಿದಾಗ ಆ ನೋಟವನ್ನು ಯಾವ ಚಾಣಾಕ್ಷತನದಿಂದ ಆದಿ ಕಲಾವಿದನು ರೂಪಿಸಿದುದು ಕಾಣಬಹುದು. ದೇಹದ ಭಾಗ ಮತ್ತು ತೊಡೆಗಳ ಭಾಗವು ಮೈತುಂಬಿಕೊಂಡು ಶಕ್ತಿಯುತವಾಗಿ ನಿಂತಂತೆ ತೋರುತ್ತವೆ. ಈ ಸೂಕ್ಷ್ಮ ತನದ ಮೈವಳಿಕೆಗಳಿಂದ ಇಲ್ಲಿನ ಚಿತ್ರಗಳು ಉತ್ತಮವಾದ ಶೈಲಿಯನ್ನು ಬಿಂಬಿಸುತ್ತವೆ. ಈ ನವಿಲಿನ ಗುಂಪಿನ ಮನುಷ್ಯ ಹಿಂದಿನ ಎರಡನೆಯ ನವಿಲು ಉತ್ತಮವಾದ ಅಳತೆಯಿಂದ ಕೂಡಿದ್ದು, ತನ್ನ ಕಾಲುಗಳಲ್ಲಿ ಮೂರು ಬೆರಳುಗಳನ್ನು ತೋರಿಸಿ ಅದರ ಕಾಲಿನಲ್ಲಿ ಮೊಳಕೈಯಿಂದ ಕೂಡಿದ ಚಿಕ್ಕ ಬೆರಳೊಂದನ್ನು ಸೂಕ್ಷ್ಮವಾಗಿ ರಚಿಸುವದಲ್ಲದೆ ಕಾಲಿನ ಹಿಂಬಡ ಭಾಗವು ಎತ್ತಿದಂತಿದ್ದು, ಎರಡು ಕಾಲುಗಳು ಸ್ವಲ್ಪ ಅಗಲವಾಗಿದ್ದು, ಓಡುವಂತೆ ತೋರುವ ಪ್ರಯತ್ನವಾಗಿದೆ. ಇಂತಹ ಹಲವು ಶೈಲಿಯನ್ನು ಬಳಸಿಕೊಂಡು ಈ ಭಾಗದ ಚಿತ್ರಗಳಲ್ಲಿ ಕಾಣಬಹುದು. ಇದೇ ಶೈಲಿಯಲ್ಲಿ ಹಿರೇಬೆಣಕಲ್‌ನ ೧ನೇಯ ಶಿಲಾಶ್ರಯದಲ್ಲಿ ೨ ನವಿಲಿನ ಚಿತ್ರಗಳಿವೆ. ಅವು ಛಾಯಾ ರೂಪದಲ್ಲಿದ್ದು, ಯಾವುದೇ ದೃಷ್ಟಿಯಿಂದ ಅವುಗಳ ಬಾಹ್ಯ ಆಕಾರ ಸ್ವಲ್ಪವೂ ಬದಲಾಗದಂತೆ ಅಪೂರ್ವವಾಗಿ ಮೂಡಿ ಬಂದಿವೆ. ಅವುಗಳಲ್ಲಿ ಒಂದು ನವಿಲಿನ ಮೇಯುವ ಭಂಗಿ ತುಂಬಾ ಸಹಜವಾಗಿದೆ.[೬] ನವಿಲುಗಳಲ್ಲಿರುವ ಪ್ರಮಾಣ ಗಾತ್ರ, ಶೈಲಿಗಳು ಹಿರೇಬೆಣಕಲ್‌ನಲ್ಲಿನ ಮತ್ತು ಚಿಕ್ಕರಾಂಪುರದ ೧ನೇಯ ಗವಿಯ ಚಿತ್ರದ ನವಿಗಳು ಒಂದೆ ರೀತಿಯಲ್ಲಿದ್ದು, ಎರಡು ನೆಲೆಯ ಚಿತ್ರಗಳು ಒಂದೇ ಕಾಲಮಾನಕ್ಕೆ ಸಂಬಂಧಿಸಿದವು ಎನ್ನುವಂತೆ ತಲೆಯ ಕೂದಲುಗಳನ್ನು ಭುಜದವರೆಗೆ ಮಾತ್ರ ಇರುವಂತೆ ಉದ್ದವಾಗಿ ಇಳಿಬಿಟ್ಟಿರುವಂತೆ ಯಾವುದೇ ರೀತಿಯಲ್ಲಿ ಕಟ್ಟಿಕೊಳ್ಳದೇ ಬಿಡಿಬಿಡಿಯಾಗಿ ತೋರಿಸಲಾಗಿದೆ. ಈ ಎರಡು ನೆಲೆಗಳಲ್ಲಿ ಮತ್ತೊಂದು ಏನು ಎಂದರೆ ಕುದುರೆಗಳ ಶೈಲಿಯು ನಿಂತ ಭಂಗಿ ರೂಪ, ಲಗಾಮು ಹಿಡಿದ ಮನುಷ್ಯ ಎಲ್ಲಾ ಒಂದೇ ಶೈಲಿಯನ್ನು ಹೋಲುತ್ತವೆ ಎನ್ನಬಹುದು.

ಕಡೆಬಾಗಿಲಿನ ಎರಡು ಸಾಲು ಹೆಣ್ಣುಮಕ್ಕಳ ಚಿತ್ರಗಳು ಎಡವಾಗಿ ನಿಂತ ಮುಖದಂತಿದ್ದು, ಇದಕ್ಕೆ ತಕ್ಕಂತೆ ತಲೆಯಲ್ಲಿನ ಕೂದಲುಗಳು ದಪ್ಪ ದಪ್ಪವಾದ ಗೆರೆಗಳಿಂದ ಮಲಗಿರುವ ಭಂಗಿಯಲ್ಲಿ ತೋರಿಸಿ ಅರ್ಧಕೂದಲನ್ನು ಅಂದರೆ ಈಗಿನ ಆಧುನಿಕದ ರೀತಿಯಾದ ಬಾಲ್‌ಕಟ್ ಎನ್ನುವಂತೆ ತೋರಿಸಲಾಗಿದೆ. ಇದನ್ನು ಅಲ್ಲದೆ ದೇಹದ ಭಾಗವು ನಡುವಿನ ಭಾಗಕ್ಕಿಂತ ಅಗಲವಾಗಿ ತೋರಿಸಿ ಅಂಕುಡೊಂಕಿನ ರೇಖೆಗಳಿಂದ ಹೆಣ್ಣಿನ ಅಂಶಗಳನ್ನು ತೋರುವಂತೆ ಚಿತ್ರಗಳ ಸಾಲು ನೃತ್ಯದ ಸಾಲು ಭಂಗಿಯನ್ನು ರಚಿಸಿದೆ ಎನ್ನಬಹುದು.

* * *

೦೬. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಪುಟ-೧೯೪

ಅಧ್ಯಾಯ - ಏಳು

ಸಮಾರೋಪ

ಅಧ್ಯಾಯ - ಏಳು

ಸಮಾರೋಪ

ಈ ಕೊಪ್ಪಳ ಜಿಲ್ಲೆಯ ಭೂ ಪ್ರದೇಶವು ಸಮೃದ್ಧವಾದ ಶ್ರೀಮಂತ ನೆಲೆ, ಏಕೆಂದರೆ ಕೊಪ್ಪಳ, ಗಂಗಾವತಿ, ತಾಲೂಕು ಪ್ರದೇಶಗಳು ತುಂಗಭದ್ರಾ ನದಿಯ ನೆರಳಿನಲ್ಲಿ ನಿಂತ ಭೂ ಪ್ರದೇಶವಾಗಿದೆ. ಇದಕ್ಕಿಂತ ಸ್ವಲ್ಪ ಕಡಿಮೆ ಎಂದು ಹೇಳಬೇಕಾದರೆ ಕುಷ್ಟಗಿ ತಾಲೂಕು ಪ್ರದೇಶ. ಈ ಪ್ರದೇಶಕ್ಕೆ ನದಿಯ ನೀರಿನ ಪ್ರಮಾಣ ಮತ್ತು ನದಿ ಹರಿದ ಸ್ಥಳದಿಂದ ದೂರವಾದ ಪ್ರದೇಶವಾಗಿ ಕಂಡುಬರುತ್ತದೆ. ಆದರೆ ಕೊಪ್ಪಳದ ಕೆಲ ಭೂಭಾಗವನ್ನು ತುಂಗಭದ್ರಾ ಜಲಾಶಯ ತನ್ನ ಒಡಲಲ್ಲಿ ತುಂಬಿಕೊಂಡು ಅಲ್ಲಿನ ಭೂಮಿ, ನಿಸರ್ಗ, ಜೀವಸಂಕುಲಗಳ ಬೀಡಾಗಿ ಬೆಳೆಯಲು ಕಾರಣವಾಗಿದೆ. ಇದರ ಹಿನ್ನೆಲೆಯಲ್ಲಿ ಆದಿಕಾಲದ ಜನರ ನೆಲೆಯಾಗಿ ರೂಪುಗೊಂಡು ಅವರ ಹಸ್ತಗಳ ಮೂಲಕ ಹೊರಬಿದ್ದ ಚಿತ್ರಗಳು. ಚಿತ್ರಕ್ಕೆ ಬೀಜವಾಗಿ ಒಂದು ರೂಪ ನಿರ್ಮಾಣ ಮಾಡಿ ಅದರಿಂದ ಕಾಲಗಳು ಉರುಳಿದಂತೆ ತನ್ನ ಪ್ರಾಮುಖ್ಯತೆ.

ಚಿತ್ರಕಲೆ ಸಂಸ್ಕೃತಿಗೆ ಪ್ರವೇಶವನ್ನು ಮಾಡಲು ಒಂದು ದಾರಿಯಾಯಿತು. ಚಿತ್ರಕಲೆ ಸಂಸ್ಕೃತಿಗೆ ಒಂದೆ ಅಲ್ಲದೆ ಪ್ರಾಚೀನ ಪರಿಸರದ ಪರಿಚಯ ಮಾಡಲು ಆ ದಿನಗಳ ಜೀವನ ಕ್ರಮ ಯಾವ ವಿಧಾನದಿಂದ ಇತ್ತು ಎನ್ನುವ ಕುರಿತು ಆಧಾರಗಳನ್ನು ಒದಗಿಸಿದ ಕೀರ್ತಿ ಪ್ರಾಗೈತಿಹಾಸಿಕ ಚಿತ್ರಕಲೆಗೆ ಸಲ್ಲುತ್ತದೆ ಎಂದು ಹೇಳಬಹುದು. ಇನ್ನಿತರೆ ಪಳೆಯುಳಿಕೆಗಳು ಮಾಹಿತಿಗಳು ಉತ್ಖನನದ ಮುಖಾಂತರ ತಿಳಿಯುತ್ತಿದೆ. ಜನರಿಗೆ ಬೇರೆ ಸಾಮಾಗ್ರಿಗಳಾಗಿ ಈ ಆದಿ ಜನರ ಕಲೆಯು ವಿವರಣೆಯ ಮುಖ್ಯ ಕೇಂದ್ರವಾಗಿ ನಿಲ್ಲುತ್ತದೆ ಎನ್ನಬಹುದು. ಇದರಿಂದಲೇ ಪ್ರಾಗೈತಿಹಾಸ ಕಾಲದ ಚಿತ್ರಗಳು ಅಷ್ಟೊಂದು ಮಹತ್ವ ಪಡೆದುಕೊಂಡಿವೆ. ಇವುಗಳು ಇರುವ ಪ್ರದೇಶಗಳು ಎಷ್ಟು ಮುಖ್ಯವಾಗಿವೆ, ಎಂಬುದು ಅರಿವಾಗಿ ಈ ಕಲೆಯ ಕುರಿತು ಉನ್ನತ ಮಟ್ಟದ ಶೋಧನೆಗಳು ನಡೆಯುವುದು ಮುಖ್ಯವಾಗುತ್ತದೆ.

ಆಕಸ್ಮಿಕವಾಗಿ ೧೮೭೯ರಲ್ಲಿ ಸ್ಪೇನ್ ದೇಶದ ಆಲ್ತಮೀರ ಗವಿ ಶೋಧವಾಗಿ ಅದರಲ್ಲಿದ್ದ ಚಿತ್ರಗಳು ಬೆಳಕಿಗೆ ಬಂದವು. ಅಲ್ಲಿಂದ ಶೋಧನೆಯ ಕಾರ್ಯ ಪ್ರಾರಂಭವಾಗಿ ಚಿತ್ರಕಲೆ ಸಂಶೋಧಕರು ಮತ್ತು ಪುರಾತತ್ವ ಶಾಸ್ತ್ರಜ್ಞರ ಗಮನ ಇಂಥ ಚಿತ್ರಗಳ ಕಡೆ ಹರಿದು ಜಗತ್ತಿನಾದ್ಯಂತ ಹಲವಾರು ಚಿತ್ರಿತ ನೆಲೆಗಳು ಬೆಳಕಿಗೆ ಬರಲಾರಂಭಿಸಿದವು ಭಾರತದಲ್ಲೂ ೧೮೮೦ರಲ್ಲಿ ಬಳ್ಳಾರಿ ತಾಲೂಕು ಪ್ರದೇಶಕ್ಕೆ ಒಳಪಡುವ ಮತ್ತು ಹತ್ತಿರವು ಇರುವ ಕಪ್ಪಗಲ್ಲಿನಲ್ಲಿ ಮತ್ತು ಮಧ್ಯ ಪ್ರದೇಶದ ಮಿರ್ಜಾಪುರದ ಕೈಮೂರ್ ಬೆಟ್ಟದಲ್ಲಿ ಬಂಡೆಗಲ್ಲು ಮತ್ತು ವರ್ಣಚಿತ್ರಗಳು ಬೆಳಕಿಗೆ ಬಂದವು. ಇದನ್ನು ತಿಳಿದ ಶೋಧಕರು ದೇಶದ ಎಲ್ಲಾ ಕಡೆಗಳಲ್ಲಿ ಆದಿ ಚಿತ್ರಕಲೆಗಳ ನೆಲೆಗಳನ್ನು ಹೊರತರಲಾರಂಭಿಸಿ ಹೊಸ ಚಿತ್ರಿತ ಗವಿ ಶಿಲಾಶ್ರಯಗಳನ್ನು ಬಯಲು ಬಂಡೆ ಚಿತ್ರಗಳನ್ನು ಶೋಧಿಸಿದರು ಮತ್ತು ಶೋಧಿಸುತ್ತಲೆ ಇದ್ದಾರೆ.

ಕರ್ನಾಟಕದಲ್ಲಿ ೧೮೮೦ರಲ್ಲಿ ಕಪ್ಪಗಲ್ಲಿನ ಚಿತ್ರಗಳು ಶೋಧಿತವಾದರೆ, ೧೯೩೫ರಲ್ಲಿ ಲಿಯೋನಾರ್ಡ್ ಮನ್ ಅವರು ಕೊಪ್ಪಳ ಪ್ರದೇಶದಲ್ಲಿ ಮೊದಲ ಬಾರಿಗೆ ಹಿರೇಬೆಣಕಲ್‌ನಲ್ಲಿ ಮೂರು ವರ್ಣ ಚಿತ್ರಿತ ಗವಿಗಳನ್ನು ಶೋಧಿಸಿದರು. ಇವುಗಳನ್ನು ಕಂಡ ಹಲವರು ಶೋಧನೆಯನ್ನು ಪ್ರಾರಂಭಿಸಲು ಮುಂದಾದರು. ವಿದೇಶಿಗರೆ ಇಷ್ಟೊಂದು ಆಸಕ್ತಿ ವಹಿಸಿ ಶೋಧನೆ ಮಾಡುವಾಗ ದೇಶಿಯ ಶೋಧಕರು, ತಮ್ಮ ಮುಂದಾಳತ್ವ ವಹಿಸಿಕೊಂಡರು ಅಂತವರಲ್ಲಿ ಡಾ.ಅ.ಸುಂದರ ಅವರು ಶೋಧನೆ ಮತ್ತು ಅಧ್ಯಯನ ಕೈಗೊಂಡು ಕರ್ನಾಟಕ ರಾಜ್ಯದ ಹಿರೇಬೆಣಕಲ್, ರಾಮದುರ್ಗ, ಬಾದಾಮಿ, ಹೊಸ ಮಹಾಕೂಟ, ಐಹೊಳೆ, ಬಿಳೆಬಾವಿ, ನಾರಾಯಣಪೇಟೆ, ಬಂಡಿಹರ್ಲಾಪುರ (ಕೊಪ್ಪಳ ||ತಾ||), ಮಲ್ಲಾಪುರ, ಆನೆಗುಂದಿ ತಿರುಮಲಾಪುರ ಗಂಗಾವತಿ ತಾ, ಮಾನ್ವಿ, ಬೈಲಮರ್ಚೇಡ್ ಮಾನ್ವಿ ತಾ, ಇವೆಲ್ಲವು ವರ್ಣಚಿತ್ರಗಳ ನೆಲೆಗೆ ಸಂಬಂಧಿಸಿದ್ದಾರೆ. ತಾವರಗೆರೆ (ಕುಷ್ಟಗಿ ||ತಾ||, ಕೊಪ್ಪಳ ||ಜಿ||), ಕುರುಗೋಡು, ಹಳಕುಂದಿ, (ಬಳ್ಳಾರಿ ||ಜಿ||), ಬ್ರಹ್ಮಗಿರಿ, ಜಟ್ಟಿಂಗ ರಾಮೇಶ್ವರ, ಚಿತ್ರದುರ್ಗ, ಚಂದ್ರವಳ್ಳಿ (ಚಿತ್ರದುರ್ಗ ||ಜಿ||), ಜೋಳಿ (ಅಂಕೋಲಾ ಹತ್ತಿರ ಉತ್ತರ ಕನ್ನಡ ||ಜಿ||)ಗಳು ಅಲ್ಲದೆ ಅವರ ಶೋಧಿಸಿದ ಮತ್ತು ಅಧ್ಯಯನ ರೀತಿ ತುಂಬಾ ಶ್ರಮದ್ದು, ಏಕೆಂದರೆ ಕ್ಷೇತ್ರ ಕಾರ್ಯದಲ್ಲಿ ತಮ್ಮ ತಾಳ್ಮೆ ಮತ್ತು ದೈಹಿಕವಾಗಿ ಶ್ರಮವಹಿಸುವುದು, ಅನಿವಾರ್ಯ ಅದರಲ್ಲೂ ಈ ಪ್ರಾಗೈತಿಹಾಸಿಕ ಚಿತ್ರ ನೆಲೆಗಳ ಪ್ರದೇಶಗಳು ಕಡಿದಾದ ಮತ್ತು ಹೆಚ್ಚು ಉಷ್ಣತೆಯಿಂದ ಕೂಡಿದವುಗಳು ಹಾಗೂ ನಿರ್ಧಿಷ್ಟವಾದ ಇಲ್ಲೇ ಇವೆ ಎಂಬುದು ಗೋಚರಿಸಲು ಕಷ್ಟಕರವಾದದ್ದು. ಇಂತವುಗಳಲ್ಲೇ ಮತ್ತಷ್ಟು ಶೋಧಿಸಿದ ಹೊಲೂರು[೬೬] ಮುತ್ತನಹಳ್ಳಿ ಶಿವಮೊಗ್ಗ ತಾ, ಹಿರೇಮಾರಾಪುರ ಧಾರವಾಡ ಜಿ,ನಲ್ಲಿ ಕುಟ್ಟಿದ ಮತ್ತು ಗೀರಿದ ಚಿತ್ರಗಳನ್ನು ಶೋಧಿಸಿದ್ದು, ಶೋಧವಾದದ್ದನ್ನೆಲ್ಲಾ ಅಧ್ಯಯನ ಮಾಡಿ ಅನೇಕ ಲೇಖನಗಳನ್ನು ೬೮ ಮತ್ತು ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲದೆ ಹಲವಾರು ಶೋಧಿತ

ಅಧ್ಯಯನಗಳ ಲೇಖನಗಳು ಹಾಗೂ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.ಇವು ಕರ್ನಾಟಕಕ್ಕೆ ಸಂಬಂಧಿಸಿದವುಗಳಾದರೆ ಭಾರತಕ್ಕೆ ಸಂಬಂಧಿಸಿದಂತೆ ಹಲವಾರು ಶೋಧಿತ ನೆಲೆಗಳು, ಅಧ್ಯಯನಗಳ ಬಗ್ಗೆ ಇನ್ನಿತರ ಶೋಧಕರು, ಇತಿಹಾಸಕಾರರು, ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆಗಳು ಅಧ್ಯಯನಕ್ಕೆ ಸಂಬಂಧಿಸಿದಂತೆ ಲೇಖನಗಳು, ಪುಸ್ತಕಗಳ ಮೂಲಕ ಪ್ರಕಟಿಸಿದ್ದಾರೆ. ಇದಲ್ಲದೆ ನಾಡಿನ (ರಾಜ್ಯ) ಹಿರಿಯ ಕಲಾ ಇತಿಹಾಸಕಾರ ಮತ್ತು ವಿಮರ್ಶಕ ಹಾಗೂ ಚಿಂತನಾ ಶೋಧಕರಾದ ಕೆ.ವಿ.ಸುಬ್ರಹ್ಮಣ್ಯಂ ಅವರು ಭಾರತದಲ್ಲಿನ ಪ್ರಾಗೈತಿಹಾಸ ಕಲೆಯ ಕುರಿತು ಮಹಾಪ್ರಬಂಧ ಬರೆಯುತ್ತಿದ್ದಾರೆ. ಇದರಿಂದಲೇ ತಿಳಿಯುತ್ತದೆ. ಎಷ್ಟು ಮಹತ್ವವನ್ನು ಪಡೆದ ನಮ್ಮ ನಾಡಿನ (ದೇಶದ) ಪ್ರಾಗೈತಿಹಾಸ ಚಿತ್ರಕಲೆ ಎಂಬುಹುದು. ಈ ದೇಶದಲ್ಲಿ ಇನ್ನು ಅಜ್ಞಾತವಾಗಿ ಉಳಿದ ಪ್ರಾಗೈತಿಹಾಸ ಚಿತ್ರಕಲೆ ನೆಲೆಯ ಶೋಧನೆಗಳು ಹೆಚ್ಚು ನಡೆಯುವುದು ಅವಶ್ಯಕವಾಗಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಕಾರ್ಯ ನೆಡದು ಹೊಸ ಪ್ರದೇಶಗಳನ್ನು ಗುರುತಿಸಿದ್ದಾರೆ ಮತ್ತು ಶೋಧಿಸುತ್ತಾ ಇದ್ದಾರೆ. ಇದರಿಂದ ಡಾ.ಅ.ಸುಂದರ ಅವರು ಕರ್ನಾಟಕದಲ್ಲಿ ಗವಿಚಿತ್ರಗಳ ದೃಷ್ಟಿಯಿಂದ ಶ್ರೀಮಂತವಲಯವೆನ್ನುವುದು ತಿಳಿಯುತ್ತದೆ. ಮತ್ತು ಕೊಪ್ಪಳ ಹಂಪಿ ಪ್ರದೇಶವನ್ನು ವ್ಯಾಪ್ತಿಗೆ ಸೀಮಿತ ಗೊಳಿಸಿ ಅಧ್ಯಯನವನ್ನು ಕೈಗೊಂಡು ಪ್ರಬಂಧವನ್ನು ಡಾ.ಶರಣಬಸಪ್ಪ ಕೋಲ್ಕಾರ್ ಅವರು ಮಂಡಿಸಿದ್ದಾರೆ. ಇವರ ವ್ಯಾಪ್ತಿಯ ಹಂಪಿಯನ್ನು ಬಿಟ್ಟು ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ತಾಲೂಕುಗಳ ಪ್ರದೇಶದ ಪ್ರಾಗೈತಿಹಾಸ ಚಿತ್ರಕಲೆಯ ಕುರಿತು ಶೋಧನೆಯನ್ನು ಕೈಗೊಂಡು ಸುಮಾರು ೧೦ ಹೊಸ ಚಿತ್ರಗಳ ನೆಲೆಗಳನ್ನು ನನ್ನ ಪ್ರಸ್ತುತ ಅಧ್ಯಯನದಲ್ಲಿ ಶೋಧಿತವಾದವುಗಳ ಜೊತೆಯಲ್ಲಿ ಪೂರ್ವಶೋಧಿತ ನೆಲೆಯ ಚಿತ್ರಗಳ ಕುರಿತು ಚಿತ್ರಕಲೆಯ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸಲಾಯಿತು. ಈ ಅಧ್ಯಯನದಲ್ಲಿ ಪಡೆದುಕೊಂಡ ಪ್ರಮುಖ ವಿಷಯಗಳ ಸಾರವನ್ನು ಈ ಮುಂದಿನ ವಿವರಣೆಯಲ್ಲಿ ನೋಡಬಹುದು.

ಕೊಪ್ಪಳ ಜಿಲ್ಲೆಗೆ ಸಂಬಂಧಿದಂತೆ ಈ ಮೊದಲು ಶೋಧಿತ ಕಾರ್ಯ ಕೈಗೊಂಡು ಡಾ.ಅ.ಸುಂದರ ಮತ್ತು ಡಾ.ಶ.ಕೋಲ್ಕಾರ್ ಅವರು ೨೦ ಸ್ಥಳಗಳಿಂದ ೬೯ ವರ್ಣಚಿತ್ರ ನೆಲೆಗಳು ಮತ್ತು ೩ ಸ್ಥಳಗಳಲ್ಲಿ ೪ ಬಂಡೆ ಚಿತ್ರನೆಲೆಗಳು ಪತ್ತೆಯಾಗಿದ್ದು, ಒಟ್ಟು ೧೨೧ನೆಲೆಗಳ ವರ್ಣಚಿತ್ರ ಮತ್ತು ೬ನೆಲೆಯ ಬಂಡೆ ಕೊರೆದ ಕುಟ್ಟಿದ ಚಿತ್ರಗಳು ಶೋಧಿತವಾಗಿದ್ದುವು, ಇವುಗಳಲ್ಲದೆ ತಾವರೆಗೆರೆ ಕುಷ್ಟಗಿ ||ತಾ||, ಕೊಪ್ಪಳ ಜಿಲ್ಲೆಯಲ್ಲಿ ಗವಿಚಿತ್ರಗಳು ಮತ್ತು ಬಯಲುಬಂಡೆ ಚಿತ್ರಗಳು ಸೇರಿ ೨೭ ಚಿತ್ರಿತ ನೆಲೆಗಳನ್ನು ವಿಲಾಸ ಜೋಗುಳರವರು ಶೋಧಿಸಿದ್ದರು. ಪ್ರಸ್ತುತ ನನ್ನ ಅಧ್ಯಯನದಲ್ಲಿ ತಾವರಗೇರಿಯಲ್ಲಿನ ಹೊಸ ಮೂರು ನೆಲೆಗಳನ್ನು ಶೋಧಿಸಲ್ಪಟ್ಟವು. ಅವುಗಳಲ್ಲಿ ೨ ವರ್ಣಚಿತ್ರಗಳ ನೆಲೆಗಳು ಮತ್ತು ಗೀರು ಚಿತ್ರಗಳ ಬಯಲುಬಂಡೆ ನೆಲೆಯೊಂದು ಒಟ್ಟಾರೆಯಾಗಿ ೧೩ ಚಿತ್ರಗಳ ನೆಲೆಗಳನ್ನು ಶೋಧಿಸಿದ್ದು, ಇದರಲ್ಲಿ ಎರಡು ಗೀರು ಬಯಲು ಬಂಡೆ ಚಿತ್ರಗಳು

ಸೇರಿಕೊಳ್ಳುತ್ತವೆ. ಈ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಇನ್ನೂ ಹಲವಾರು ನೆಲೆಗಳು ಬೆಳಕಿಗೆ ಬಾರದೆ ಕತ್ತಲಲ್ಲಿ ಉಳಿದಿರುವ ಸಾಧ್ಯತೆ ಕಂಡುಬರುತ್ತದೆ.

ಎಲ್ಲಾ ನೆಲೆಗಳ ಚಿತ್ರಗಳು ಮನುಷ್ಯ ಚಿತ್ರಗಳು, ನಾನಾ ಬಗೆಯ ಪ್ರಾಣಿ, ಪಕ್ಷಿಗಳು, ಮಂಡಲಕ್ಕೆ ಸಂಬಂಧಿಸಿದ ಚಿತ್ರಗಳು ಕುದುರೆ ಸವಾರರು, ಎತ್ತಿನ ಸವಾರರು, ಪಶುಪಾಲನೆ, ಕ್ರೀಡೆಗೆ ಸಂಬಂಧಿಸಿದ ಚಿತ್ರಗಳು, ಲೈಂಗಿಕ, ಮಾಂತ್ರಿಕ ಆಚರಣೆ, ಬೇಟೆಗಾರರು, ಶವಸಂಸ್ಕಾರ, ಸಾಲುನಿಂತು ನೃತ್ಯ ಗೈಯುತ್ತಿರುವ ಮನುಷ್ಯರ ಚಿತ್ರಗಳು ಗುರುತಿಸಲಾಯಿತು.

ಮಾನವರ ಚಿತ್ರಗಳಲ್ಲಿ ವಿವಿಧ ಆಕಾರವನ್ನು ತೋರಿಸಲಾಗಿದೆ. ಬೇಟೆಯ ದೃಶ್ಯವು ಆದಿಕಾಲದಿಂದ ತನ್ನ ಮೂಲ ಕಸುಬನ್ನಾಗಿ ಮಾಡಿಕೊಂಡು ಬಂದಿರುವುದು, ಪ್ರಾಚೀನತೆಯಿಂದ ಇಂದಿನ ಆಧುನಿಕ ಯುಗದವರೆಗೆ ನೋಡುತ್ತೇವೆ. ಇಂದಿನ ಕಾಡು ಪ್ರಾಣಿಗಳಾದ (ಮೀಕ) ಕಾಡು ಹಂದಿ, ಕಾಡುಬೆಕ್ಕು, ಮೊಲ, ಕೌಜಗ, ಜಿಂಕೆ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆ ಮಾಡುವುದು ಗಮನಿಸುತ್ತೇವೆ. ಇದನ್ನು ಆಧಾರವಾಗಿಟ್ಟುಕೊಂಡು ನಾವು ಅಂದಿನ ಕಾಲದ ಮುಖ್ಯವಾದ ಆಹಾರ ಭೇಟೆ ಮಾಡುವುದು ಅವಶ್ಯಕವಾಗಿತ್ತು, ಎಂಬುದು ನಿಜವೆನಿಸುತ್ತದೆ. ನೃತ್ಯ ಮಾಡುವ ಮನುಷ್ಯರು ಸಾಲು ನಿಂತ ಭಂಗಿಯಲ್ಲಿ ಕಡೆಬಾಗಿಲು ಮತ್ತು ಹಿರೇಬೆಣಕಲ್‌ನ ಕಲ್ಲಾಸರೆಗಳಲ್ಲಿ ನೋಡಬಹುದಾಗಿದೆ. ಇಲ್ಲಿನ ಚಿತ್ರಗಳು ಬೇಟೆ ಸಂಭ್ರಮಕ್ಕೆ ಸಂಬಂಧಿಸಿದಂತೆ ಹೂಯಿಸಲಾಗಿದೆ. ಏಕೆಂದರೆ ಕೆಲವು ಪ್ರಾಣಿಗಳ ಚಿತ್ರಗಳನ್ನು ಅಲ್ಲಿ ತೋರಿಸುವುದರಿಂದ ಮತ್ತು ನೃತ್ಯಭಂಗಿಯಲ್ಲಿ ಯಾವುದೇ ಒಂದು ರೀತಿಯ ಸಾಧನೆ ಮಾಡಿದಂತೆ ಮೇಲಿನ ನೋಟಕ್ಕೆ ಚಿತ್ರಗಳ ಹಾವಭಾವಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು. ಲೈಂಗಿಕ ಕ್ರಿಯೆಗೆ ಸಂಬಂಧಿಸಿದಂತೆ ಚಿತ್ರಗಳು ಜೋಡಿ ದಂಪತಿಗಳಂತೆ ಹೆಣ್ಣು ಗಂಡುವಿನ ಚಿತ್ರಗಳು ಕಾಣುತ್ತೇವೆ. ಇವು ಚಿಕ್ಕಾರಾಂಪುರದ ೬ನೇ ಕಲ್ಲಾಸರೆಯ ಮಂಡಲ ಚಿತ್ರದಲ್ಲಿ ಗುರುತಿಸಬಹುದು. ಇದಲ್ಲದೆ ನಾರಾಯಣಪೇಟೆಯ ಒಂದನೇ ಕಲ್ಲಾಸರೆಯಲ್ಲಿ ಚಿತ್ರಿತವಾದ ಮನುಷ್ಯನ ಚಿತ್ರವು ತನ್ನ ತಲೆಬಾಗಿಸಿಕೊಂಡು ಅಂಗಾಂಗಳ ಕೆಳಭಾಗಕ್ಕೆ ಎಡಗೈಯನ್ನು ಇಟ್ಟುಕೊಂಡಿರುವುದು, ಮತ್ತು ಆ ಚಿತ್ರದ ಪಕ್ಕದಲ್ಲಿ ಹೆಣ್ಣಿನ ಚಿತ್ರವನ್ನು ರಚಿಸಿ ಅದಕ್ಕೆ ಅಗಲಿಸಿದ ಕಾಲುಗಳು ಮತ್ತು ಕೆಳಗಿನ ಮಧ್ಯಭಾಗದಲ್ಲಿ ಜನನಾಂಗವನ್ನು ತೋರಿಸಿ ಕಾಮಕ್ರೀಡೆಯನ್ನು ತೋರಿಸುವ ಒಂದು ಕುತೂಹಲಕರ ಸಂಗತಿಯಂತೆ ತೋರಿಸಲಾಗಿದೆ. ಮಲ್ಲಾಪುರದ ಒಂದು ಮನುಷ್ಯ ಚಿತ್ರವು ಮೈ ತುಂಬಾ ರೇಖೆಗಳ ಎಳೆದುಕೊಂಡು ಇರುವುದು ನೋಡಿದರೆ ಇದು ಒಂದು ರೀತಿಯ ಮಾಂತ್ರಿಕ ಶಕ್ತಿಯ ಚಿತ್ರವೆಂದು ಕೆಲವು ಅಭಿಪ್ರಾಯಗಳು ಕೇಳಿಬರುತ್ತವೆ. ಆದರೆ ಇದು ಒಂದು ಮನುಷ್ಯನ ದೇಹದ ಒಳಗಿನ ಭಾಗಗಳನ್ನು ರೇಖೆಗಳ ಮುಖಾಂತರ ತೋರಿಸುವುದು ಎನಿಸುತ್ತದೆ. ಇದೇ ತರಹದ ಮನುಷ್ಯನ ಚಿತ್ರಗಳು ಗಡಿ ಪ್ರದೇಶದ ಒಂದು ನೆಲೆಯಲ್ಲಿ ಕಂಡುಬರುತ್ತವೆ. ಆ ನೆಲೆಯಲ್ಲಿ ಏಳು ಜನರಿದ್ದು, ಎಲ್ಲಾ ಚಿತ್ರಗಳ ಮನುಷ್ಯರಿಗೆ ಮೈತುಂಬೆಲ್ಲಾ

ರೇಖಾಗಳನ್ನು ಎಳೆದು ತ್ರಿಕೋನಗಳು ಬೆನ್ನಿನ ಮೇಲೆ, ಕೈಗಳ, ಕಾಲುಗಳ ಮತ್ತು ತಲೆ ಭಾಗದಲ್ಲಿ ಕೆಲವು ರೀತಿಯ ರೇಖಾಕೋನಗಳು ಮೂಡಿಬಂದಿರುವಂತೆ ರಚಿಸಲಾಗಿದೆ. ಈ ಚಿತ್ರಗಳಲ್ಲಿನ ಮೇಲಿನ ಮನುಷ್ಯನ ಚಿತ್ರವು ಮಲ್ಲಾಪುರದ ಮೊದಲ ನಗ್ನ ಚಿತ್ರವನ್ನೇ ಹೋಲುತ್ತದೆ. ಈ ತರಹದ ಚಿತ್ರಗಳು ಇಂದಿನ ಆಧುನಿಕ ಚಿತ್ರಕಲಾವಿನಿಗೆ ಗೊಂದಲವನ್ನು ಉಂಟುಮಾಡುತ್ತವೆ ಎನ್ನಬಹುದು. ಏಕೆಂದರೆ ಗಡ್ಡಿಯಲ್ಲಿ ಏಳುಜನ ಮನುಷ್ಯರ ಚಿತ್ರಗಳಲ್ಲಿ ಮೇಲಿನಿಂದ ಕೆಳಗಿನ ಎರಡನೆಯ ಮನುಷ್ಯನ ಚಿತ್ರವು ಕುದರೆಯ ಮೇಲೆ ಕುಳಿತಂತೆ ಇದ್ದು, ಮೊಣಕಾಲಿನ ಭಾಗದಿಂದ ಕೆಳಪಾದದವರೆಗೆ ರೇಖೆಗಳ ಮೂಲಕ ಬೂಟು ಶೂ ತೊಟ್ಟಂತೆ ಸ್ಪಷ್ಟವಾಗಿ ತೋರಿಸಿರುವುದು ಇದಕ್ಕೆ ಪುಷ್ಠಿ ನೀಡುತ್ತದೆ. ಇಂತಹ ನಗ್ನವಾಗಿರುವಂತ ಮನುಷ್ಯರ ಚಿತ್ರಗಳು ಮಾಂತ್ರಿಕ ಶಕ್ತಿಯಿಂದ ಇಷ್ಟಾರ್ಥಗಳ ಈಡೇರಿಕೆಗೆ ಬಳಸುತ್ತಿದ್ದರು, ಎನ್ನುವ ಅಭಿಪ್ರಾಯ ಎಷ್ಟು ಸರಿ ಎನ್ನಬಹುದು.

ಪ್ರಾಣಿಗಳ ಚಿತ್ರಗಳಲ್ಲಿ ಎತ್ತು, ಜಿಂಕೆ, ಕುದುರೆ, ಗೂಳಿ, ನವಿಲು, ನಾಯಿ, ಮತ್ತು ಮೊಲಗಳಂತೆ ಚಿತ್ರಗಳಿದ್ದು, ಅದರಲ್ಲಿಯೇ ಎತ್ತುಗಳು, ಗೂಳಿಗಳು, ಜಿಂಕೆಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಆದಿಮಾನವನ ಚಿತ್ರದಲ್ಲಿನ ಮುಖಕ್ಕೆ ವಸ್ತುವಾಗಿ ಜಿಂಕೆ, ಎತ್ತು, ಗೂಳಿಗಳು ಮೂಡಿ ಬಂದಿರುವುದು ಗಮನಿಸುವ ವಿಷಯ ಪಶುಪಾಲನೆ, ಕುದುರೆಗಳ ಸವಾರಿ, ಜಿಂಕೆಗಳ ಭೇಟೆಯ ದೃಶ್ಯಗಳು ಕಾಣುತ್ತೇವೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಎತ್ತು, ಆಕಳು, ಗೂಳಿ ಮನುಷ್ಯ ತನ್ನ ಆಹಾರಕ್ಕಾಗಿ ಇಂತಹ ಪ್ರಾಣಿಗಳಲ್ಲಿ ಆಕಳಿನಿಂದ ಹಾಲು, ಎತ್ತು, ಗೂಳಿಗಳಿಂದ ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದರು, ಎಂಬ ನವಶಿಲಾಯುಗ (ಸೂಕ್ಷ್ಮಶಿಲಾಯುಗ)ದ ಕಾಲಾವಧಿಯಲ್ಲಿ ಕೇಳಿಬರುತ್ತದೆ. ಇದರ ಆಧಾರದ ಮೇಲೆ ವ್ಯವಸಾಯ ಮುಂತಾದ ವ್ಯವಹಾರಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದರು ಎನ್ನಬಹುದು. ಆದ್ದರಿಂದ ಈ ಪ್ರಾಣಿಗಳು ತನ್ನ ಚಿತ್ರದ ವಿಷಯವಾಗಿ ಬಳಸಿರಬಹುದು. ಜಿಂಕೆಗಳಂತಹ ಪ್ರಾಣಿಗಳನ್ನು ಮಾಂಸಹಾರವನ್ನಾಗಿ ಬಳಸುತ್ತಿದ್ದರು, ಇದರಿಂದ ಭೇಟೆ ಮಾಡುವ ಮೂಲಕ ಅವುಗಳನ್ನು ಹಿಡಿಯುವ ಪದ್ಧತಿ ರೂಢಿಯಲ್ಲಿತೆನ್ನಬಹುದು. ಕುದುರೆಗಳು ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಮತ್ತು ಭೇಟೆಗೆ ಕುದುರೆಯ ಮೇಲೆ ಕುಳಿತು ಜಿಂಕೆಗಳಂತಹ ವೇಗವಾಗಿ ಓಡುವಂತಹ ಪ್ರಾಣಿಗಳನ್ನು ಬೆನ್ನತ್ತಿ ಕೊಲ್ಲುವುದು, ಮುಂತಾಗಿ ವಸ್ತುಗಳ ಸಾಗಾಣಿಕೆಗೆ ಈ ಅಶ್ವಗಳನ್ನು ಬಳಸಿಕೊಳ್ಳುತ್ತಿದ್ದರು ಎಂದು ಹೇಳಬಹುದು. ನಾಯಿ ಮನುಷ್ಯನ ಸಂಗಪ್ರಾಣಿ, ಸಾಕುಪ್ರಾಣಿಯನ್ನಾಗಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವುದು ತಿಳಿಯುತ್ತೇವೆ. ನವಿಲು ಮುಂತಾದ ಪಕ್ಷಿಗಳ ಅಂದವು ಆದಿಮಾನವನ ಮನಸ್ಸಿಗೆ ಇಷ್ಟವಾಗಿರಬಹುದು. ಅದರ ಸೌಂದರ್ಯುತ ಗರಿಗಳು, ಕುಣಿಯುವ ರೀತಿ ಹೀಗೆ ಮುಂತಾದ ರೀತಿಯಲ್ಲಿ ಅವನ ಮನಸ್ಸೂರೆಗೊಳಿಸಿರಬಹುದು. ಇವೆಲ್ಲಾ ಚಿತ್ರಗಳು ಆದಿಮಾನವನ ಚಿತ್ರ ಶೈಲಿಯಾಗಿ ಮೂಡಿಬರಲು

ಸಾಧ್ಯವಾಗಿರಬಹುದು. ಮಂಡಲ ಚಿತ್ರಗಳನ್ನು ಸುಗ್ಗಿಯ ಕಾಲದಲ್ಲಿ ತಮ್ಮ ಆನಂದವನ್ನು ಹೊರಹಾಕಲು ಇಂತಹ ಚಿತ್ರಗಳ ಮೊರೆ ಹೋಗುತ್ತಿದ್ದರು, ಹಾಗೂ ಶುಭ ಸಂರ್ಧದಲ್ಲಿ ಈ ಮಂಡಲ ಚಿತ್ರಗಳನ್ನು ರಚಿಸುವುದು ವಾಡಿಕೆಯಾಗಿ ಬೆಳೆದುಕೊಂಡು ಬಂದಿರಬಹುದು. ಶವಸಂಸ್ಕಾರ ಮುಂತಾದ ಸಾಮಾಜಿಕ ಸಂಗತಿಗಳ ಬಗ್ಗೆಯು ಚಿತ್ರಗಳು ಇರುವುದರಿಂದ ಶಿಲಾಯುಗದಲ್ಲಿಯೆ ಅಂತಹ ಪದ್ಧತಿ ಕಾಳಜಿ ರೂಪಕವಾಗಿ ಬಳಸಿಕೊಂಡು ಬಂದಿರಬಹುದು. ಭೇಟೆಯಲ್ಲಿ ಬಿಲ್ಲು, ಬಾಣ, ಭರ್ಜಿ, ಕಟ್ಟಿಗೆ (ಬಡಿಗೆ) ಸಾಧನಗಳಾಗಿ ಬಳಸಿರುವುದು ನೋಡಬಹುದು.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಾಗೈತಿಹಾಸಿಕ ಚಿತ್ರಗಳ ಮುಖ್ಯವಾದ ಲಕ್ಷಣಗಳು, ಚಿತ್ರಿತ ಶಿಲಾಶ್ರಯ, ಚಿತ್ರಗವಿಗಳು, ಬಯಲು ಬಂಡೆಗಳು ಪ್ರಮುಖವಾದ ಭಿತ್ತಿಯನ್ನಾಗಿ ಬಳಸಿಕೊಂಡು ವರ್ಣಚಿತ್ರ, ಗೀರು ಮತ್ತು ಕುಟ್ಟು ಚಿತ್ರಗಳನ್ನು ರಚಿಸಲು ಬಳಸಿಕೊಂಡಿದ್ದಾರೆ. ಈ ಜಿಲ್ಲೆಯ ಪ್ರದೇಶದ ಪ್ರಾಗೈತಿಹಾಸಿಕ, ಚಿತ್ರಗಳು ಹೆಚ್ಚಾಗಿ ಕಲ್ಲಾಸರೆಗಳಲ್ಲಿ ಕಂಡುಬಂದಿವೆ ಎನ್ನಬಹುದು. ಕಲ್ಲಾಸರೆಯ ಬಂಡೆಯ ಭಿತ್ತಿಯನ್ನು ಯಾವುದೇ ಹಂತದಲ್ಲಿ ರೂಪುಗೊಳಿಸದೆ ನೇರವಾಗಿ ಚಿತ್ರಗಳನ್ನು ರಚಿಸಿರುವುದು, ಈ ಶೋಧಿತ ಕಾರ್ಯದಿಂದ ನೋಡಬಹುದಾಗಿದೆ. ಆದರೆ ಬಿಸಿಲು, ಮಳೆ, ಗಾಳಿಗಳಿಂದ ವರ್ಣಚಿತ್ರಗಳು ಉತ್ತಮ ಸ್ಥಿತಿಯಲ್ಲಿರುವಂತ ಆಶ್ರಗಳಲ್ಲಿ ಮೂಡಿಬಂದಿರುವುದು ಒಂದು ರೀತಿಯ ಬುದ್ಧಿವಂತಿಕೆಯೇ ಕುತೂಹಲಕಾರಿಯಾಗಿದೆ. ಬಣ್ಣಗಾರಿಕೆಯನ್ನು ಬಳಸಿರುವುದು ಚಿತ್ರಗಳ ಜೀವಾಳ, ಬಣ್ಣವನ್ನು ನಿಸರ್ಗದ ಕೆಲವು ಗಿಡ, ಮಣ್ಣು ರಕ್ತಗಳನ್ನು ಉಪಯೋಗಿಸಿರುವ ಸಾಧ್ಯತೆ ಹೆಚ್ಚೆನ್ನಬಹುದು. ಈ ನಿಸರ್ಗದಲ್ಲಿನ ವೈಪರಿತ್ಯದಿಂದ ಉಷ್ಣತೆ ಹೆಚ್ಚು ಮತ್ತು ಕಡಿಮೆ ಆಗುವುದರಿಂದ ಸೂಕ್ಷ್ಮವಾಗಿ ಬಂಡೆಗಲ್ಲು ಹಿಗ್ಗುವುದು ಮತ್ತು ಕುಗ್ಗುವುದರ ಪರಿಣಾಮ ಕಲ್ಲುಗುಂಡುಗಳ ಮೇಲಿನ ವರ್ಣಚಿತ್ರಗಳು ಪೂರ್ಣವಾಗಿ ನಾಶವಾಗದಂತೆ ಉಳಿಯಲು ಅದೇ ನಿಸರ್ಗದ ಬಣ್ಣವನ್ನಾಗಿಸಿಕೊಂಡು ಬಳಸಿದ್ದರಿಂದ ಕೂಡ ಹೆಚ್ಚು ಕಾಲ ಉಳಿದಿರುವುದು ಮುಖ್ಯ ಲಕ್ಷಣವಾಗಿದೆ. ಪರಿಸರಕ್ಕೆ ಪರಿಸರವೇ ಸಾಟಿ ಎಂಬಂತೆ ಪರಿಸರ ತನ್ನ ಸಮತೋಲನತೆಯನ್ನು ತಾನೆ ಕಾಪಾಡಿಕೊಳ್ಳುತ್ತದೆ ಎನ್ನುವುದು ಇದಕ್ಕೆ ಸೂಕ್ತವಾಗುತ್ತದೆ. ಆದಿಮ ಚಿತ್ರಗಳು ಇಂದಿನ ನಿರ್ಜನವಾದ ಪ್ರದೇಶದಲ್ಲಿ ಮೂಡಿಬಂದಿರುವುದು ಗಮನಿಸಬಹುದು. ಮತ್ತು ಚಿತ್ರಗಳು ಎತ್ತರವಾದ, ಕಷ್ಟಕರವಾದ ಸ್ಥಳದ ಮೇಲ್ಮೈ ಮೇಲೆ ರಚಿಸಿರುವುದು ಒಂದು ಲಕ್ಷಣವಾಗಿದೆ. ಚಿತ್ರಗಳ ನೆಲೆಗೆ ತಲುಪಲು ಒಂದು ರೀತಿಯ ಅಪಾಯಕಾರಿ ಪ್ರದೇಶಗಳಿಂದ ಕೂಡಿದ ಆಳವಾದ, ಕಡಿದಾದ ಮಾರ್ಗವಾಗಿ ಸಾಗುವಂತೆ ಇರುವ ಸ್ಥಳಗಳಲ್ಲಿ ಚಿತ್ರಗಳು ಮೂಡಿಬಂದಿವೆ ಎಂದು ಹೇಳಬಹುದು.

ಚಿತ್ರಗಳಲ್ಲಿ ಸಣ್ಣ, ಮಧ್ಯಮ, ಮತ್ತು ದೊಡ್ಡ ಪ್ರಮಾಣಗಳಲ್ಲಿ ಕಂಡುಬರುತ್ತವೆ. ಈ ಸುತ್ತಮುತ್ತ ಪ್ರದೇಶದಲ್ಲಿ ಕಂಡುಬರುವ ಬೃಹದಾಕಾರ ಚಿತ್ರಗಳು ಭಾರತದಲ್ಲಿನ ಯಾವ ನೆಲೆಯ ಚಿತ್ರಗಳಲ್ಲಿಯೂ ಕಾಣುವುದಿಲ್ಲ ಎನ್ನಬಹುದು. ಮಧ್ಯಪ್ರದೇಶದ ರೈಸಿನ್ ಜಿಲ್ಲೆಯ ಜಹೋರಾ ಶಿಲಾಶ್ರಯಗಳಲ್ಲಿಯ

ದ್ವಿವರ್ಣದ ೩.೬೦ ಮೀ ಉದ್ದ, ೧.೯೫ಮೀ ಎತ್ತರದ ಕಾಡುಕೋಣದ ಚಿತ್ರವು ಭಾರತದಲ್ಲಿನ ಅತ್ಯಂತ ದೊಡ್ಡ ಪ್ರಮಾಣದ ಗವಿ ಚಿತ್ರವೆಂದು ತಿಳಿಯಲಾಗಿತ್ತು, ಆದರೆ ಹಿರೇಬೆಣಕಲ್‌ನ ೧೭ನೇ ಗವಿಯ ಒಂದು ವಿಚಿತ್ರ ಆಕೃತಿಯು ೭ ಮೀ ಉದ್ದ, ಅಂಜನಹಳ್ಳಿಯ ಹಡಗಿನ ಚಿತ್ರವು ೬.೪೨ ಮೀ ಉದ್ದ ಮತ್ತು ೧ ಮೀ ಎತ್ತರ ಇರುವುದು ಗಮನಾರ್ಹವಾಗಿದೆ. ಇದರಿಂದಲೇ ಈ ಪ್ರದೇಶದಲ್ಲಿನ ಚಿತ್ರಗಳು ಅತ್ಯಂತ ಬೃಹದಾಕಾರದ ಚಿತ್ರಗಳು ಎಂದು ಇದಕ್ಕಿಂತಲೂ ದೊಡ್ಡ ಅಳತೆಯ ಗವಿವರ್ಣ ಚಿತ್ರಗಳು ಶೋಧನೆ ಆಗುವವರೆಗೆ ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳುತ್ತವೆನ್ನಬಹುದು.

ಆಹಾರವನ್ನಾಗಿ ಗಡ್ಡೆ, ಗೆಣಸುಗಳು, ಹಣ್ಣು ಹಂಪಲಗಳು ಅಲ್ಲದೆ ಮಾಂಸವನ್ನು ತಿನ್ನುತ್ತಿದ್ದರು. ದೈನಂದಿನ ಆಹಾರಕ್ಕೆ ಭೇಟೆಯು ಅನಿವಾರ್ಯವಾಗಿ ಭೇಟೆಯ ಸಂದರ್ಭದಲ್ಲಿ ಗೋಚರಿಸಿದಂತಹ ಕ್ರೂರ ಪ್ರಾಣಿಗಳಿಂದ ಭಯಗೊಂಡು ಅಥವಾ ಗಾಯಗೊಂಡು ನಂತರದ ದಿನಗಳಲ್ಲಿ ಆ ಕೆಟ್ಟ ಅನುಭವವಾದ ಪ್ರದೇಶದಲ್ಲಿ ಇಂತಹ ಕ್ರೂರ ಪ್ರಾಣಿಗಳಿವೆ ಎನ್ನುವ ಸಲುವಾಗಿ ಹುಲಿ, ಕಾಡುಕೋಣ, ತೋಳ, ಆನೆ, ಚಿರತೆ, ಮುಂತಾದ ಚಿತ್ರಗಳನ್ನು ಬಿಡಿಸುವ ಒಂದು ಪದ್ಧತಿಯನ್ನು ಆದಿಮಾನವನಲ್ಲಿ ರೂಢಿಗತವಾಗಿರಬಹುದು. ಈ ಆದಿಮಾನವರು ಚಿತ್ರಗಳಲ್ಲಿ ಒಂದೇ ರೀತಿಯ ಸಾಲು ಚಿತ್ರಗಳಲ್ಲಿ ಪಡೆಯಚ್ಚುಗಳಂತೆ ಎಲೆ,ಚರ್ಮ, ತೊಗಟೆ ಮುಂತಾದವುಗಳನ್ನು ಬಳಸಿಕೊಂಡಿರಬಹುದು. ಇದು ಒಂದು ರೀತಿಯ ತಂತ್ರಗಾರಿಕೆ ಎನ್ನಬಹುದು. ಇನ್ನು ಕೆಲವು ಕಡೆ ಕುಂಚಗಳನ್ನು ಮತ್ತು ಬೆರಳುಗಳನ್ನು ಬಳಸಿ ವರ್ಣಚಿತ್ರಗಳನ್ನು ಬಳಸಿರುವುದು ಮೇಲಿನ ನೋಟಕ್ಕೆ ಕಂಡುಬರುತ್ತದೆ. ಈ ಪ್ರಾಗೈತಿಹಾಸಿಕ ಚಿತ್ರಕೃತಿಗಳು ಮೇಲಿನ ನೋಟಕ್ಕೆ ಮುಗ್ಧತೆ ಮತ್ತು ಚಿಕ್ಕಮಕ್ಕಳ ಚಿತ್ರಗಳಂತೆ ತೋರಿದರೂ, ಸೂಕ್ಷ್ಮವಾಗಿ ಗಮನಿಸಿದರೆ ಆಕಾರವಾಗಿ ಮಾತ್ರವಲ್ಲ ಜೀವಂತಿಕೆಯನ್ನು ತುಂಬಿಕೊಂಡಂತೆ ಕಂಡುಬರುತ್ತವೆ. ಚಿತ್ರಗಳ ರೇಖೆಗಳು ಚಲನೆಯನ್ನು ನೀಡಿದೆ ಎನ್ನಬಹುದು. ಚಿತ್ರಿತ ವಿಷಯಗಳು ಭಾವ ಪ್ರಧಾನತೆಯಿಂದ ಮೂಡಿರುವುದು ಇಲ್ಲಿ ತೋರಿಬರುತ್ತವೆ. ಬರಿ ಬಾಹ್ಯರೇಖೆ ಮತ್ತು ಲೇಪನ (ನೆರಳು)ದಿಂದ ಚಿತ್ರಗಳು ಮೂಡಿದ್ದರೂ ಉತ್ತಮ ಸ್ಥಾನದಲ್ಲಿ ನಿಲ್ಲುತ್ತವೆ. ರಚನಾ ಶೈಲಿಯಲ್ಲಿ ಗಮನಾರ್ಹವಾಗಿವೆ.

ಒಟ್ಟಿನಲ್ಲಿ ಈ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳು ಭಾವ ಪ್ರಧಾನವಾಗಿದ್ದು, ಸೂಕ್ಷ್ಮತೆಯಿಂದ ಕೂಡಿದ ಕೆಲವು ಮೈವಳಿಕೆಗಳನ್ನು ಒಳಗೊಂಡ ಚಿತ್ರಗಳಾಗಿ ಕಂಡುಬರುತ್ತವೆ. ಚಿತ್ರಗಳ ನಿರೂಪಣೆಯಲ್ಲಿ ತಂತ್ರಗಾರಿಕೆ, ಶೈಲಿ ಮುಖ್ಯವಾಗಿ ಬೆರೆತು ಬೆರಗುಗೊಳಿಸಿವೆ ಎನ್ನಬಹುದು. ಈ ಚಿತ್ರಗಳೇ ಇತಿಹಾಸಕಾಲದಲ್ಲಿ ಉಬ್ಬು, ಮೂರ್ತಿಶಿಲ್ಪಗಳಾಗಿ ಬರಲು ಕಾರಣವಾಗಿ ಕಲೆಯ ಸಂಸ್ಕೃತಿಗೆ ಮೂಲವಾಗಿ ಆಧುನಿಕ ಕಾಲದಲ್ಲಿ ಮುಂದುವರೆದ ಚಿತ್ರಕಲೆಗೆ ಆಧಾರವಾಗಿ ತನ್ನ ಪ್ರಾಮುಖ್ಯತೆ ಚಿತ್ರಕಲೆಯಲ್ಲಿ ಒಂದೇ ಅಲ್ಲ ಪ್ರಾಚೀನ ಪರಿಸರ ಕುರಿತು ವಿವರಿಸುವ ವಸ್ತುವಾಗಿ ಕಂಡುಬಂದಿವೆ ಎನ್ನಬಹುದಾಗಿದೆ.

* * *

ಅನುಬಂಧ

೧. ಗ್ರಂಥಋಣ
೨. ಪಕ್ಷಗಳ ವಿವರ
೩. ಸಂಕ್ಷೇಪಗಳು
೪. ಕೊಪ್ಪಳ ಜಿಲ್ಲಾ ನಕ್ಷೆ

ಪರಾಮರ್ಶನ ಗ್ರಂಥಗಳು

೦೧. ಅಲ್ಲಮ ಪ್ರಭು ಬೆಟದೂರು, ಶ್ರೀ.ಎಚ್.ಎಸ್.ಪಾಟೀಲ ಸಂ., ೨೦೦೫, ಕೊಪ್ಪಳ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

೦೨. ಗವಿಶೆಟ್ಟಿ ಕೆ., ೧೯೯೫, ಕರ್ನಾಟಕದ ಖನಿಜ ಸಂಪತ್ತು, ಬೆಂಗಳೂರು.

೦೩. ಗೋಪಾಲ್ ಬಾ.ರಾ., ೧೯೮೭, ಕರ್ನಾಟಕದಲ್ಲಿ ನವಶಿಲಾಯುಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೦೪. ದೇವರ ಕೊಂಡಾ ರೆಡ್ಡಿ ಸಂ., ೨೦೦೬, ಹಂಪಿ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೫. ಪ್ರಕಾಶ ಹುಣಸಗಿ, ೧೯೮೭, ಗಂಗಾವತಿ ತಾಲೂಕು ದರ್ಶನ, ಐಬಿಹೆಚ್ ಪ್ರಕಾಶನ, ಬೆಂಗಳೂರು.

೦೬. ಪಾಟೀಲ ಎಸ್.ಸಿ, ಸತ್ಯಾನಂದ ಪಾತ್ರೋಟಿ ಸಂ., ೨೦೦೩, ನಿಜದ ನೆಲೆ, ಡಾ.ಬಿ.ಕೆ.ಹಿರೇಮಠ ಅಭಿನಂದನ ಗ್ರಂಥ, ವೈರಾಗ್ಯದ ಮಲ್ಲಣಾರ್ಯ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

೦೭. ಪಾಟೀಲ ಬಿ.ಸಿ., ೧೯೯೮, ಕೊಪ್ಪಳ ಸಾಂಸ್ಕೃತಿಕ ಅಧ್ಯಯನ, ಹರಿಹರ ಪ್ರಕಾಶನ, ಕೊಪ್ಪಳ

೦೮. ಪಾಟೀಲ ಎಸ್.ಸಿ., ೧೯೯೩, ಕರ್ನಾಟಕದ ಜಾನಪದ ಚಿತ್ರಕಲೆ, ಜಗದ್ಗುರು ತೋಂಟದಾರ್ಯ ಮಠ, ಗದಗ.

೦೯. ಮಹಾಂತೇಶ ಎಂ.ಕೊತಬಾಳ, ಎಸ್.ಎ.ಎಚ್.ಮೆಹರಪಾಷ, ಅಂದಾನಪ್ಪ ಬೆಣಕಲ್, ಮಲ್ಲಿಕಾರ್ಜುನ ಎಂ.ಕೊತಬಾಳ ಸಂ., ೧೯೯೭, ಸಾಹಿತ್ಯ ವೇದಿಕೆ ಕಲಾ ಬಳಗ, ಕೊಪ್ಪಳ.

೧೦. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು

೧೧. ಸುಂದರ ಅ.ಸಂ., ೧೯೯೭, ಕರ್ನಾಟಕ ಚರಿತ್ರೆ ಸಂ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೫೮೩ ೨೭೬

೧೨. ಸುಂದರ ಅ., ೧೯೯೪, ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.

೧೩. ಸುಬ್ರಹ್ಮಣ್ಯಂ ಕೆ.ವಿ., ೨೦೧೧, ಶಿಲಾಶ್ರಯ ಕಲೆಯ ದೃಶ್ಯಧ್ಯಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ENGLISH BOOKS

01. Abhishankar K. (Ed.,),1970, Karnataka State Gzaetter, Raichur District, Govt., of Karnataka, Bangalore.
02. Alimen H., 1957, The Prehistory of Africa, Hutchinson Scientific and Techinica, London.
03. Annual Report of theGeological Survery of the farmes, Hyderabad State, Vol IV, 1941.
04. Anusari Z.D., and Nagaraj Rao M.S., 1969, Excavations at Sangana Kallu 1964-65, Deccan College post Gradute and Research Institute, Poona.
05. Boldwin Brown G., 1981, The Art of the Cave Dweller, Cosmo Publication, New Delhi.
06. Berehguer M., 1973, Prehistoric Man and His art, The Caves of Ribadesella, Sourvenis Press, London.
07. Burkitt M.C., 1992 (IV edi), The old Stone Age, Rupa and Co., Calcutta.
08. Foote R.B., 1979 (Repri), Prehistoric and Protohistoric Antiguites and India, Leeladevi Publication, Delhi.

ARTICLES

01. Anderson C.W., 1918, Rock paintings in Singanapur, JBORS, V.4, No-2.
02. Cookburn J., 1899, Cave Drawings in the Kaimur Range, North west Provisionces, JRAS.
03. David Couison, 1999, Ancient art of the Sahar N.G., Vol-95, No-6
04. David Couison, 1999, Preserving the Sahara's Prehistoric Art, NG., Vol, 196, No-3, National Geographic Society, Washington D.C.,

ಲೇಖನಗಳು

೦೧. ಕೃಷ್ಣಯ್ಯ ಎಚ್.ಎಂ., ೧೯೮೯, ಕರ್ನಾಟಕದಲ್ಲಿ ಚಿತ್ರಕಲಾ ಪರಂಪರೆ, ಶೃಂಗಾರ ಲಹರಿ ಪಿ.ಎಂ..ಎನ್.ಪ್ರಕಾಶನ, ಬೆಂಗಳೂರು.

೦೨. ದೇವರಕೊಂಡಾರೆಡ್ಡಿ, ೨೦೦೧, ಗಬ್ಬೂರಿನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳ ಪತ್ತೆ, ರಾಯಚೂರು ವಾಣಿ, ದಿನಪತ್ರಿಕೆ, ೨೫.೦೩.೨೦೦೧, ರಾಯಚೂರು

೦೩. ನರಸಿಂಹನ್ ಅ.ಲ., ೧೯೯೮, ಕರ್ನಾಟಕದ ಚಿತ್ರಕಲೆಯಲ್ಲಿ ಸಂಸ್ಕೃತಿ, ಸಾರ್ಥಕ, ಎಂ.ಮರಿಯಪ್ಪ ಭಟ್ಟರ ಸಂಸ್ಮರಣ ಗ್ರಂಥ ಸಮಿತಿ, ಮದರಾಸು.

೦೪. ಬಂಗಾರಿ ವಿ.ಎಸ್., ೧೯೭೬, ಕೊಪ್ಪಳ ನಾಡಿನ ಭೌಗೋಳಿಕ ದರ್ಶನ, ಗವಿದೀಪ್ತಿ, ಕೊಪ್ಪಳ

೦೫. ಬೆನ್‌ಸ್ವಾಲಿ ಎಂ.ಡಿ., ಶಿಲಾಯುಗದ ಮೇಲೆ ಇನ್ನಷ್ಟು ಬೆಳಕು, ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.

೦೬. ಮುತ್ತುರಾಜ್, ೧೯೯೫, ಸೂಳೆಕಲ ಮಠದ ಗುಹಾ ಚಿತ್ರಗಳು, ಇತಿಹಾಸ ದರ್ಶನ, ಸಂ-೧೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೦೭. ರಾಧಾಕೃಷ್ಣ ಬಿ.ಪಿ., ೧೯೮೫, ಕರ್ನಾಟಕದ ಖನಿಜ ಸಂಪತ್ತು, ಅವಲೋಕನ, ಕರ್ನಾಟಕ ಸರಕಾರ, ಬೆಂಗಳೂರು.

೦೮. ವಾಸುದೇವ ಎನ್., ೧೯೯೯, ಗುಹಾಂತರಾಳದ ಕಲೆ ಕಲಾವಿದ, ಪ್ರಜಾವಾಣಿ ದಿನಪತ್ರಿಕೆ, ೨೭.೦೬.೧೯೯೯, ಬೆಂಗಳೂರು.

೦೯. ವಿಲಾಸ್ ಮ.ಜೋಗಳ, ೧೯೯೬, ತಾವರಗೇರಾದಲ್ಲಿ ಕಲ್ಲಾಸರೆಯ ವರ್ಣ ಚಿತ್ರಗಳ ಶೋಧನೆ, ಇತಿಹಾಸ ದರ್ಶನ, ಸಂ-೧೧, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ವಕ್ತೃಗಳ ವಿವರ

ಕ್ರಸಂ	ಹೆಸರು	ವಯಸ್ಸು	ಸ್ಥಳ	ವೃತ್ತಿ
೦೧.	ಪಂಪಾಪತಿ	೩೭	ಹಿರೇಬೆಣಕಲ್	ವ್ಯವಸಾಯ
೦೨.	ಬಸಪ್ಪ ವಡ್ಡರ	೩೬	ಗಡ್ಡಿ	ಕೂಲಿ, ಭೇಟೆಗಾರಿಕೆ
೦೩.	ದಳವಾಯಿ	೪೮	ರಾಮದುರ್ಗ	ವ್ಯವಸಾಯ
೦೪.	ಬೊರ್ಮಣ್ಣ ತಳವಾರ	೫೫	ಹಂಪಸದುರ್ಗ	ವ್ಯವಸಾಯ
೦೫.	ಹುಸೇನ್ ಹೆಚ್.,	೨೮	ಆಗೋಲಿ	ವ್ಯವಸಾಯ
೦೬.	ಅಮರೇಶ್	೨೭	ಮಲ್ಲಾಪುರ	ಪಿಎಚ್.ಡಿ ಸಂಶೋಧಕ ವಿದ್ಯಾರ್ಥಿ
೦೭.	ವೆಂಕಟ್‌ಸಿಂಗ್ ಗುಡಸಲಿ	೩೦	ತಾವರಗೇರಿ	ವ್ಯವಸಾಯ
೦೮.	ಪರಶುಸಿಂಗ ಮಾನಬಾವಿ	೨೬	ತಾವರಗೇರಿ	ವ್ಯವಸಾಯ
೦೯.	ನಾರಾಯಣಪ್ಪ	೪೫	ಆನೆಗುಂದಿ	ಬೋಟುಚಾಲಕ

ಸಂಕ್ಷೇಪಗಳು

೦೧. ಪ್ರಸಂ	:	ಪ್ರಧಾನ ಸಂಪಾದಕರು
೦೨. ಸಂ	:	ಸಂಪಾದಕ
೦೩. ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೦೪. ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೦೫. ಗು.ವಿ.ವಿ.ಗು	:	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೦೬. ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೦೭. ಮೈ.ವಿ.ವಿ	:	ಮೈಸೂರು ವಿಶ್ವವಿದ್ಯಾಲಯ, ಮೈಸೂರು
೦೮. ಮ.ಪ್ರ	:	ಮಹಾಪ್ರಬಂಧ
೦೯. ಕಿ.ಪ್ರ	:	ಕಿರು ಪ್ರಬಂಧ
೧೦. ಪು.ಸಂ	:	ಪುಟಸಂಖ್ಯೆ


Kushtagi
Yelbarga
KOPPAL
Gangawati
Koppal

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

